ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೇ 24 ಭಾನುವಾರ 2026
ಮೈಸೂರು ಮಿತ್ರ 47
ಸಂಪುಟ: 47 | ಸಂಚಿಕೆ: 38 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಮಗೆ ಹಿಜಾಬ್ ಸಮಾನತೆ ಸಂಕೇತ... ಆದರೆ...

ಶಾಲಾ–ಕಾಲೇಜಲ್ಲಿ ಕೇಸರಿ ಶಾಲು ಹಾಕಿದ್ರೆ ಕಾನೂನು ಕ್ರಮ

ಮೈಸೂರಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಗಂಭೀರ ಎಚ್ಚರಿಕೆ



ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮೈಸೂರಿನ ಕುವೆಂಪುನಗರದಲ್ಲಿರುವ ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ ನಿವಾಸಕ್ಕೆ ಭೇಟಿ ನೀಡಿ, ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಸಂಬಂಧ ಸಮಾಲೋಚನೆ ನಡೆಸಿದರು.

■ ಪ್ರಶ್ನೆ ಪತ್ರಿಕೆ ಸೋರಿಕೆ ತಡೆ ಬಗ್ಗೆ ಧರ್ಮೇಂದ್ರ ಪ್ರಧಾನ್‌ಗೆ ಪಾಠ ಮಾಡುತ್ತೇನೆ! ■ ನಮ್ಮ ಜುಟ್ಟು, ಜನಿವಾರ ಕೇಂದ್ರ ಸರ್ಕಾರದ ಕೈಗೆ ಕೊಡಲ್ಲ ■ ನಾನು ಸ್ಪಷ್ಟವಾಗಿ ಕನ್ನಡ ಮಾತನಾಡುವೆ; ಬರೆಯಲು ಕಷ್ಟ

ಮೈಸೂರು, ಮೇ23(ಬಿಎಲ್‌ಯು)– ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಕೇಸರಿ ಶಾಲು ಹಾಕಿಕೊಂಡು ಬಂದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಇಂದಿಲ್ಲಿ ಎಚ್ಚರಿಸಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವುದೇ ಶಾಲಾ–ಕಾಲೇಜುಗಳಲ್ಲಿ ಕೇಸರಿ ಶಾಲು ಹಾಕಿಕೊಂಡು ಬರಬಾರದು. ಒಂದು ವೇಳೆ ಸರ್ಕಾರದ ಆದೇಶ ಉಲ್ಲಂಘಿಸಿ ಹಾಕಿಕೊಂಡು ಬಂದರೆ ಕಾನೂನಾತ್ಮಕ ಕ್ರಮ ಕೈಗೊಳ್ಳುತ್ತೇವೆ ಎಂದು ಪುನರ್ ಎಚ್ಚರಿಕೆ ನೀಡಿದರು.

ಕೇಂದ್ರದ ಬಿಜೆಪಿ ಸರ್ಕಾರ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ಹಾಕಿಸಿ ಕಳುಹಿಸಲಿ. ಆದರೆ, ನಮ್ಮ ಶಾಲೆಗಳಲ್ಲಿ ಕೇಸರಿ ಶಾಲಿಗೆ ಅವಕಾಶವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಹಿಜಾಬ್ ಸಮಾನತೆ ಸಂಕೇತ: ಹಿಜಾಬ್ ವಿಚಾರದಲ್ಲಿ ನಮಗೆ ಸ್ಪಷ್ಟತೆ ಇದೆ. ಬಿಜೆಪಿಯವರಿಗೆ ಅದು ಹಿಜಾಬ್ ಆದರೆ ನಮಗೆ ಅದು ಸಮಾನತೆಯ ಸಂಕೇತ. ರಾಜ್ಯ ಸರ್ಕಾರದ ಶಾಲೆಗಳಲ್ಲಿ ಕೇಸರಿ ಶಾಲು ಧರಿಸಲು ಅವಕಾಶ ನೀಡಬೇಕೆಂದು ಕೇಳುವ ಮೊದಲು ಕೇಂದ್ರೀಯ ವಿದ್ಯಾಲಯದಲ್ಲಿ ▶ 10ನೇ ಪುಟಕ್ಕೆ

ಶಿಕ್ಷಣ ಸುಧಾರಣೆಗೆ ದೇವನೂರು ಟಿಪ್ಸ್!

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಾಹಿತಿ ದೇವನೂರು ಮಹಾದೇವ ಅವರು ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಹಲವು ಸಲಹೆಗಳನ್ನು ನೀಡಿದ್ದಾರೆ.

- ಹೊಸದಾಗಿ ಆರಂಭಿಸುವ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಉಳಿದ ಪಠ್ಯದ ಜೊತೆಗೆ ಕಲೆ, ಸಂಗೀತ, ನಾಟಕ, ಕ್ರೀಡಾ ಪಠ್ಯ ಪರಿಚಯಿಸಿ
- ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರನ್ನು ನಿಯೋಜಿಸಿ
- ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಕೂಡ ಕಲಿಸಿ. ಇದಕ್ಕಾಗಿ ಪರಿಣಿತ ಇಂಗ್ಲಿಷ್ ಶಿಕ್ಷಕರ ನಿಯೋಜಿಸಿ. ಸರ್ಕಾರಿ ಶಾಲೆಯಲ್ಲೆ ಇಂಗ್ಲಿಷ್ ಕಲಿಕೆಗೆ ಅವಕಾಶ ನೀಡುವುದರಿಂದ ಮಕ್ಕಳು, ಪೋಷಕರು ಖಾಸಗಿ ಶಾಲೆಗಳಿಗೆ ಆಕರ್ಷಿತರಾಗುವುದಿಲ್ಲ.
- ಶಾಲೆಗಳನ್ನು ವಿಲೀನ ಮಾಡಿದರೆ ಉಳಿಯುವ ಶಾಲೆಯ ಕಟ್ಟಡವನ್ನು ಯಾವುದೇ ಕಾರಣಕ್ಕೂ ಖಾಸಗಿಯವರಿಗೆ ನೀಡಬೇಡಿ
- ಅಕ್ಷರ, ಕಾಗುಣಿತದ ಬಗ್ಗೆ ವಿದ್ಯಾರ್ಥಿಗಳಿಗೆ ಸುಲಭ ವಿಧಾನದ ಮೂಲಕ ಕಲಿಸಿ
- ಅಲೆಮಾರಿ ಸಮುದಾಯ, ಗಿರಿಜನರು, ಬುಡಕಟ್ಟು ಸಮುದಾಯದ ಮಕ್ಕಳಿಗಾಗಿ ಪ್ರತ್ಯೇಕ ಶಾಲೆ ಮತ್ತು ವಸತಿ ಶಾಲೆ ತೆರೆಯಿರಿ
- ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೃಪಾಂಕ ತಪ್ಪದೆ ನೀಡಿ.

ಪೆಟ್ರೋಲ್, ಡೀಸೆಲ್ ಮತ್ತೆ 91 ಪೈಸೆ ಹೆಚ್ಚಳ



ಹತ್ತೇ ದಿನದಲ್ಲಿ 3ನೇ ಬಾರಿ ದರ ಹೆಚ್ಚಳ

ನವದೆಹಲಿ: ಜಾಗತಿಕ ತೈಲ ಬಿಕ್ಕಟ್ಟಿನಿಂದಾಗಿ ಇಂದು ಮತ್ತೆ ಪೆಟ್ರೋಲ್, ಡೀಸೆಲ್ ದರ ಪ್ರತಿ ಲೀಟರ್‌ಗೆ 91 ಪೈಸೆ ಹೆಚ್ಚಿಸಲಾಗಿದೆ. ಈ ಮೂಲಕ 10 ದಿನಗಳಲ್ಲಿ ಮೂರನೇ ಬಾರಿಗೆ ದರ ಏರಿಕೆ ಮಾಡಿದಂತಾಗಿದೆ.

ಪರಿಷ್ಕೃತ ದರದಂತೆ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 87 ಪೈಸೆ ಏರಿಕೆಯಾಗಿ 99.51 ರೂ.ಗಳಿಗೆ ತಲುಪಿದರೆ, ಡೀಸೆಲ್ ಬೆಲೆ ಲೀಟರ್‌ಗೆ 91 ಪೈಸೆ ಹೆಚ್ಚಳವಾಗಿ 91.58 ರೂಗಳಿಂದ 92.49 ರೂ.ಗೆ ತಲುಪಿದೆ.

10 ದಿನದಲ್ಲಿ ಮೂರನೇ ಬಾರಿ ಏರಿಕೆ: ಇದು ಕಳೆದ 10 ದಿನದಲ್ಲಿ ಮೂರನೇ ಬಾರಿಗೆ ತೈಲ ಬೆಲೆ ಏರಿಕೆಯಾಗಿದೆ. ಮೇ 15ರಂದು ತೈಲ ಬೆಲೆಯಲ್ಲಿ 3 ರೂ. ಹೆಚ್ಚಾಗಿತ್ತು. ಬಳಿಕ ಮೇ 19ರಂದು 90 ಪೈಸೆಯಷ್ಟು ಏರಿಸಲಾಗಿತ್ತು. ಇದೀಗ ಮತ್ತೆ 91 ಪೈಸೆ ಹೆಚ್ಚಿಸಲಾಗಿದೆ. ಈ ಮೂಲಕ 2 ವಾರಗಳಲ್ಲಿ ಪ್ರತಿ ಲೀಟರ್‌ಗೆ 5 ರೂವರೆಗೆ ಹೆಚ್ಚಳವಾಗಿದೆ.

ಸಿಎನ್‌ಜಿ ದರವೂ 2 ರೂ ಹೆಚ್ಚಳ: ಪೆಟ್ರೋಲ್–ಡೀಸೆಲ್ ಬೆಲೆ ಹೆಚ್ಚಳದ ಬೆನ್ನಲ್ಲೇ ಬೆಂಗಳೂರಿನಲ್ಲಿ ಸಿಎನ್‌ಜಿ ಬೆಲೆಯೂ 2 ರೂ. ಏರಿಕೆಯಾಗಿದ್ದು, ವಾಹನ ಸವಾರರು ಕಂಗಾಲಾಗಿದ್ದಾರೆ. ಕೆಜಿ ಸಿಎನ್‌ಜಿ 93 ರೂ.ನಿಂದ 95 ರೂ.ಗೆ ಹೆಚ್ಚಳವಾಗಿದೆ. ಇದು ಕಳೆದ 9 ದಿನದಲ್ಲಿ 3ನೇ ಬಾರಿ ಸಿಎನ್‌ಜಿ ಬೆಲೆ ಏರಿಕೆಯಾಗಿದೆ.

ಕಾರ್ಮಿಕರ ಕನಿಷ್ಠ ವೇತನ ಶೇ.60 ರಷ್ಟು ಹೆಚ್ಚಳ



ಸಂತೋಷ್‌ಲಾಡ್

ಬೆಂಗಳೂರು: ಕರ್ನಾಟಕ ಸರ್ಕಾರ ಕನಿಷ್ಠ ವೇತನವನ್ನು ಶೇ.60 ರಷ್ಟು ಹೆಚ್ಚಿಸಿದೆ. ಇದು ಬೆಂಗಳೂರಿನ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ 23,376 ರೂಗಳನ್ನು ಪಡೆಯುವುದನ್ನು ಖಚಿತ ಪಡಿಸುತ್ತದೆ ಎಂದು ರಾಜ್ಯ ಸರ್ಕಾರದ ಅಧಿಸೂಚನೆ ತಿಳಿಸಿದೆ.

ಕೌಶಲ್ಯಪೂರ್ಣ ಕಾರ್ಮಿಕರು ರಾಜ್ಯ ರಾಜಧಾನಿಯಲ್ಲಿ ತಿಂಗಳಿಗೆ 31,114 ರೂ.ಗಳಿಗೆ ಅರ್ಹರಾಗಿರುತ್ತಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮಾಹಿತಿಯನ್ನು ಹಂಚಿಕೊಂಡ ಕಾರ್ಮಿಕ ಸಚಿವ ಸಂತೋಷ್‌ಲಾಡ್ ಶನಿವಾರ ಈ ಕ್ರಮವನ್ನು ಕರ್ನಾಟಕದಾದ್ಯಂತ ಕಾರ್ಮಿಕ ಸಮುದಾಯದ ಬಹುಕಾಲದಿಂದ ಬಾಕಿ ಉಳಿದಿರುವ ಬೇಡಿಕೆಯ ಈಡೇರಿಕೆ ಎಂದು ಹೇಳಿದ್ದಾರೆ.

ಕರ್ನಾಟಕದ ಇತರ ಭಾಗಗಳಲ್ಲಿ ಪರಿಷ್ಕೃತ ದರಗಳು ತಿಂಗಳಿಗೆ 19,300 ರೂ.ಗಳಿಂದ 21.251 ರೂ.ಗಳವರೆಗೆ ಇರುತ್ತವೆ. ಪರಿಷ್ಕೃತ ವೇತನ ಅಧಿಸೂಚನೆ ಅಸಂಘಟಿತ ವಲಯದ ಕಾರ್ಮಿಕರಿಗೆ ಹಾಗೂ ರಾಜ್ಯಾದ್ಯಂತ ನಿರ್ದಿಷ್ಟ ವಲಯಗಳಲ್ಲಿನ ಉದ್ಯೋಗಿಗಳಿಗೆ ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ ಮತ್ತು ಮೊದಲ ಬಾರಿಗೆ ಲಕ್ಷಾಂತರ ಕಾರ್ಮಿಕರನ್ನು ಏಕೀಕೃತ ಚೌಕಟ್ಟಿನಡಿಯಲ್ಲಿ ತರುತ್ತದೆ ಎಂದು ಸಚಿವರು ಹೇಳಿದರು.

ನಮ್ಮ ಸರ್ಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಶೇ.60 ರಷ್ಟು ಹೆಚ್ಚಿಸುವ ಅಧಿಸೂಚನೆಯನ್ನು ಹೊರಡಿಸಿದೆ. ಈ ಮೂಲಕ ನಮ್ಮ ಸರ್ಕಾರ ರಾಜ್ಯದ ಕಾರ್ಮಿಕ ಸಮುದಾಯದ ಬಹುಕಾಲದಿಂದ ಬಾಕಿ ಉಳಿದಿದ್ದ ಬೇಡಿಕೆಯನ್ನು ಈಡೇರಿಸಿದೆ ಎಂದು ಲಾಡ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಹೊರಡಿಸಿದ ನಿರ್ದೇಶನಗಳಿಗೆ ಅನುಗುಣವಾಗಿ ವೇತನ ಪರಿಷ್ಕರಣೆಯನ್ನು ಕೈಗೊಳ್ಳಲಾಗಿದೆ ಮತ್ತು ರಾಜ್ಯದ ಕಾರ್ಮಿಕ ಚೌಕಟ್ಟಿನಲ್ಲಿ ಗಮನಾರ್ಹವಾದ ಸುಧಾರಣೆಯನ್ನು ಗುರುತಿಸಲಾಗಿದೆ ಎಂದು ಅವರು ಹೇಳಿದರು.

ಈ ಅಧಿಸೂಚನೆಯು ರಾಜ್ಯಾದ್ಯಂತ ಅಸಂಘಟಿತ ವಲಯ ಮತ್ತು ಇತರ ನಿರ್ದಿಷ್ಟ ವಲಯಗಳ ಕಾರ್ಮಿಕರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ. ಕನಿಷ್ಠ ವೇತನವನ್ನು ನಿರ್ಧರಿಸುವಾಗ, ಈ ಪರಿಷ್ಕರಣೆಯನ್ನು ▶ 10ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 24 ಮೇ 2026

ರಾಜ್ಯ ಕಾಂಗ್ರೆಸ್ ಗೊಂದಲದ ನಡುವೆ ಬಿಜೆಪಿ ಬಲವರ್ಧನೆ ಸರ್ಕಸ್!

● ಸಾಲು ಸಾಲು ಕೇಂದ್ರ ನಾಯಕರ ಭೇಟಿ; ಮುಖಂಡರು, ಕಾರ್ಯಕರ್ತರ ಸಜ್ಜುಗೊಳಿಸುವ ಕಾಯಕ ● ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಎರಡು ದಿನಗಳ ರಾಜ್ಯ ಭೇಟಿ

ಬೆಂಗಳೂರು, ಮೇ 23(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಗೊಂದಲ ತಾರಕಕ್ಕೇರಿರುವ ಬೆನ್ನಲ್ಲೇ ಬಿಜೆಪಿ ಮುಂಬರುವ ವಿಧಾನ ಸಭಾ ಚುನಾವಣೆಗೆ ಈಗಿನಿಂದಲೇ ರಣಕಹಳೆ ಊದಿದೆ.



ನಿತಿನ್ ನಬೀನ್

ಕಳೆದ ಎರಡು ತಿಂಗಳಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ಕೇಂದ್ರ ಬಿಜೆಪಿಯ ವಿವಿಧ ವಿಭಾಗಗಳ ಮುಖಂಡರು ಕರ್ನಾಟಕದ ವಿಧಾನಸಭಾ ಚುನಾವಣೆಗೆ ಅಖಾಡ ಸಿದ್ಧ ಮಾಡುತ್ತಿದ್ದಾರೆ.

ಇದರ ಬೆನ್ನಲ್ಲೇ ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಬಿಹಾರ, ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದ ಬಿಜೆಪಿ, ಇದೀಗ 2028ರಲ್ಲಿ ಕರ್ನಾಟಕ ಚುನಾವಣೆಯತ್ತ ಮುಖ ಮಾಡಿದೆ.

ಕಾಂಗ್ರೆಸ್‌ನ ಆಂತರಿಕ ಕಚ್ಚಾಟವನ್ನೇ ಬಂಡವಾಳ ಮಾಡಿಕೊಂಡು, ತೆರೆಮರೆಯಲ್ಲಿ ಪಕ್ಷ ಸಂಘಟನೆಗೆ ದೆಹಲಿ ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ನಬೀನ್ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ರಾಜ್ಯ ಭೇಟಿ ಇದಾಗಿದ್ದು ಈ ಸಂದರ್ಭದಲ್ಲೇ ಚುನಾವಣಾ ಅಖಾಡಕ್ಕೆ ಭೂಮಿಕೆ ಸಿದ್ಧಗೊಳಿಸುತ್ತಿದ್ದಾರೆ.

ನಾಳೆ ಭಾನುವಾರ, ಇಡೀ ದಿನ ಪಕ್ಷದ ಎಲ್ಲಾ ಹಂತದ ಕಾರ್ಯಕರ್ತರು, ಮುಖಂಡರು ಮತ್ತು ಜನಪ್ರತಿನಿಧಿಗಳ ಜೊತೆ ನಿರಂತರ ಸಭೆ ನಡೆಸಲಿದ್ದಾರೆ. ಪಕ್ಷದ ಪ್ರಧಾನ ಕಾರ್ಯಾಲಯದಲ್ಲಿ ಸಂಸದರು, ಶಾಸಕರ ಜೊತೆ ಎರಡು ಗಂಟೆಗಳ ಕಾಲ ಸಮಾಲೋಚನೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದಲ್ಲಿನ ರಾಜಕೀಯ ಸ್ಥಿತಿಗತಿ ಅವಲೋಕನದ ಜೊತೆಗೆ, ಬರುವ 2028ಕ್ಕೆ ಅಥವಾ ಅದಕ್ಕೂ ಮೊದಲು ಮಧ್ಯಂತರ ಚುನಾವಣೆ ಎದುರಾದರೆ ಸಿದ್ಧರಾಗಿರುವಂತೆ ಸೂಚಿಸಲಿದ್ದಾರೆ.

ಸ್ಥಳೀಯ ಸರ್ಕಾರ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಪಕ್ಷದ ಜನಪ್ರತಿನಿಧಿಗಳಿಂದಲೂ ಮಾಹಿತಿ ಪಡೆಯುವುದಲ್ಲದೆ, ಮುಂದಿನ ಚುನಾವಣೆ ಬಗ್ಗೆಯೂ ವಿವರ ಪಡೆಯಲಿದ್ದಾರೆ.

ನಂತರ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಿ, ಕೆಲವು ಪ್ರಮುಖ ವಿಷಯಗಳ ಕುರಿತು ಚರ್ಚಿಸಲಿದ್ದಾರೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಸಭೆ ನಂತರ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ನಡೆಯಲಿರುವ ಪ್ರಶಿಕ್ಷಣ ಶಿಬಿರದಲ್ಲಿ ಭಾಗವಹಿಸಿ ಕಾರ್ಯಕರ್ತರೊಂದಿಗೆ ಸಮಾಲೋಚನೆ ಮಾಡಲಿದ್ದಾರೆ ಎಂದರು.

ನಿವೇಶನ, ಮನೆ ಮಾರಿ 20 ಸಾವಿರ ಕೋಟಿ ಸಂಗ್ರಹಿಸಿ ಗೃಹಮಂಡಳಿಗೆ ಸಿದ್ದರಾಮಯ್ಯ ಟಾರ್ಗೆಟ್ ಫಿಕ್ಸ್!



ಆನೇಕಲ್ ಬಳಿ ಅಂತಾರಾಷ್ಟ್ರೀಯ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

ಬೆಂಗಳೂರು, ಮೇ 23(ಕೆಎಂಶಿ)– ಕರ್ನಾಟಕ ಗೃಹ ಮಂಡಳಿ ತನ್ನ ನಿವೇಶನ ಮತ್ತು ಮನೆಗಳನ್ನು ಮಾರಾಟ ಮಾಡಿ 20,000 ಕೋಟಿ ರೂ. ಸಂಗ್ರಹಿಸಲು ಮುಂದಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ.

ಸೂರಿಲ್ಲದವರಿಗೆ ಸೂರು ಕೊಡುವ ಉದ್ದೇಶದಿಂದ ನಿವೇಶನ ಮತ್ತು ಬಡಾವಣೆ ಮತ್ತು ವಸತಿ ಸಮುಚ್ಚಯಗಳನ್ನು ನಿರ್ಮಿಸಿದ್ದೀರಿ. ಅವುಗಳನ್ನು ಅರ್ಹರಿಗೆ ನೀಡುವ ಕೆಲಸ ಮಾಡಿ ಹಣ ಸಂಗ್ರಹಿಸಿ ಎಂದಿದ್ದಾರೆ. ಹೊಸ ಬಡಾವಣೆಗಳ ನಿರ್ಮಾಣದ ಜೊತೆಗೆ ಹಳೆಯದೂ ವಿಲೇವಾರಿ ಆಗಬೇಕು, ಇಲ್ಲವಾದರೆ ಅವು ಉಪಯುಕ್ತ ಆಗುವುದಿಲ್ಲ ಎಂದರು.

ನಗರದ ಹೊರವಲಯದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿ, ರಾಜ್ಯದಲ್ಲಿನ ಎಲ್ಲಾ ಕುಟುಂಬದವರಿಗೂ ನೆತ್ತಿಯ ಮೇಲೆ ಸೂರಿರಬೇಕು ಎಂದರು.

ಬಡ, ಮಧ್ಯಮ ವರ್ಗಕ್ಕೆ ಅವಕಾಶ: ಈಗ ಭೂಮಿ ಬೆಲೆ ಹೆಚ್ಚುತ್ತಿರುವುದರಿಂದ ಬಡ ಮತ್ತು ಮಧ್ಯಮ ವರ್ಗದವರಿಗೆ ಕೈಗೆಟಕುವ ದರದಲ್ಲಿ ನಿವೇಶನ ಮತ್ತು ವಸತಿಗಳನ್ನು ನಿರ್ಮಿಸಿ ಕೊಡಿ ಎಂದು ಸಲಹೆ ಮಾಡಿದರು. ಸರ್ಕಾರ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಮುಂದಾಗಿದೆ. ಗುಜರಾತ್‌ನ 90 ಸಾವಿರ ಆಸನ ವ್ಯವಸ್ಥೆಯ ಮೋದಿ ಕ್ರೀಡಾಂಗಣ ನಂತರ ಸೂರ್ಯ ಗ್ರಾಮ ದೇಶದ ಎರಡನೇ ದೊಡ್ಡ ಕ್ರೀಡಾಂಗಣವಾಗಿದೆ. ಕರ್ನಾಟಕ ಗೃಹ ಮಂಡಳಿ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ಪ್ರಗತಿಯ ದೂರ ದೃಷ್ಟಿಯಾಗಿದೆ. ಸರ್ಕಾರದ ಆರ್ಥಿಕ ನೆರವಿಲ್ಲದೆ ಮಂಡಳಿ ಸ್ವಂತ ಹಣದಿಂದಲೇ ಕ್ರೀಡಾಂಗಣ ನಿರ್ಮಿಸುತ್ತಿದೆ. ಇದರಿಂದ ಪ್ರವಾಸೋದ್ಯಮ ಪ್ರಗತಿ ಜೊತೆಗೆ ಸುತ್ತಮುತ್ತಲ ಊರುಗಳ ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಆಗಲಿದೆ ಎಂದರು.

ಪ್ರಧಾನಿ ಮೋದಿಗೆ ಚುನಾವಣೆ ಮಾತ್ರ ಮುಖ್ಯ, ಜನರ ಕಷ್ಟ ಅರ್ಥವಾಗುತ್ತಿಲ್ಲ

ಬೆಂಗಳೂರು: ಪೆಟ್ರೋಲ್ ದರ ಏರಿಕೆ ಕುರಿತು ಪ್ರತಿಕ್ರಿಯಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ ಮುಂಬರುವ ದಿನಗಳಲ್ಲಿ ಭಾರತ ದೊಡ್ಡ ಸಮಸ್ಯೆಗೆ ಸಿಲುಕಲಿದೆ. ದೇಶದ ಜನರು ಸಂಕಷ್ಟಕ್ಕೆ ಒಳಗಾಗಲಿದ್ದಾರೆ ಎಂದು ರಾಹುಲ್ ಗಾಂಧಿಯವರು ಆರು ತಿಂಗಳ ಹಿಂದೆಯೇ ಹೇಳಿದ್ದರು ಎಂದು ತಿಳಿಸಿದರು.



ದಿನೇಶ್ ಗುಂಡೂರಾವ್

ಅನಾವಶ್ಯಕವಾಗಿ ನಡೆಯುತ್ತಿರುವ ಯುದ್ಧದಿಂದ ಈ ಪರಿಸ್ಥಿತಿ ಬಂದಿದೆ ಎನ್ನುವುದನ್ನು ಒಪ್ಪಿಕೊಳ್ಳೋಣ. ಕೇಂದ್ರ ಸರ್ಕಾರ ಮೊದಲಿನಿಂದಲೂ ಸರಿಯಾಗಿ ನಡೆದುಕೊಂಡಿಲ್ಲ. ಭಾರತದ ನಿಲುವು ಏನು ಎನ್ನುವುದನ್ನು ಹೇಳಿಲ್ಲ. ಪ್ರವಾಸ ಮಾಡಬೇಡಿ, ಚಿನ್ನ ಖರೀದಿಸಬೇಡಿ ಇಂತಹ ಹೇಳಿಕೆ ನೀಡುತ್ತ ಮೋದಿಯವರು ಕಾಲ ಕಳೆಯುತ್ತಿದ್ದಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಸೋತಿದ್ದಾರೆ ಎಂದು ಟೀಕಿಸಿದರು.

ಹಿಂದೆ ಮನಮೋಹನ್ ಸಿಂಗ್ ಪ್ರಧಾನಿ ಇದ್ದಾಗ, ಬ್ಯಾರಲ್ ಗೆ 120 ಡಾಲರ್ ವರೆಗೂ ಹೋಗಿತ್ತು. ಆದರೆ ಜನರಿಗೆ ತೊಂದರೆ ಆಗದಂತೆ ಅವರು ಕ್ರಮ ಕೈಗೊಂಡಿದ್ದರು. ಆದರೆ ಈಗ ಏನಾಗಿದೆ ನೋಡಿ. ಈವರೆಗೆ ಕಡಿಮೆ ದರ ಇದ್ದಾಗಲೂ ಕೇಂದ್ರ ಸರ್ಕಾರ ಪೆಟ್ರೋಲ್ ದರ ಇಳಿಸಿರಲಿಲ್ಲ. ಬೇಕಾದಷ್ಟು ಲಾಭ ಮಾಡಿಕೊಂಡಿತ್ತು. ಈಗ ಯುದ್ಧದ ಕಾರಣದಿಂದ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆ ಆದಾಗ ಟಾಕ್ಸ್ ದರ ಇಳಿಸಿ ಜನರಿಗೆ ಅನುಕೂಲ ಮಾಡುವ ಬದಲು ತೈಲದರ ಏರಿಕೆಯನ್ನು ನಿರಂತರವಾಗಿ ಮಾಡುತ್ತಿದೆ. ಜನಸಾಮಾನ್ಯರ ಬದುಕನ್ನೇ ತೊಂದರೆಗೆ ಸಿಲುಕಿಸಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು.

ತೈವಾನ್ ಸಮುದ್ರ ಗಡಿಯಲ್ಲಿ ಚೀನಾ ಹಡಗು: ಮತ್ತೊಂದು ಯುದ್ಧದ ಸುಳಿವು

ತೈಪೆ: ಹಳದಿ ಸಮುದ್ರದಿಂದ ದಕ್ಷಿಣ ಚೀನಾ ಸಮುದ್ರ ಮತ್ತು ಪಶ್ಚಿಮ ಪೆಸಿಫಿಕ್‌ವರೆಗೆ ವಿಸ್ತರಿಸಿರುವ ಪ್ರಾದೇಶಿಕ ಸಾಗರ ವ್ಯಾಪ್ತಿಯಲ್ಲಿ ಚೀನಾವು ನೂರಕ್ಕೂ ಅಧಿಕ ನೌಕಪಡೆ, ಕರಾವಳಿ ಕಾವಲು ಪಡೆಯ ಹಡಗುಗಳನ್ನು ನಿಯೋಜಿಸಿದೆ ಎಂದು ತೈವಾನ್‌ನ ಭದ್ರತಾ ಮುಖ್ಯಸ್ಥ ಜೋಸೆಫ್ ವು ಹೇಳಿದ್ದಾರೆ ಎಂದು ಎಎನ್‌ಐ ವರದಿ ಮಾಡಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೋಸೆಫ್ ವು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ಚೀನಾಗೆ ಭೇಟಿ ನೀಡಿದ್ದರು. ಆ ವೇಳೆ ಬೀಜಿಂಗ್‌ನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಸಭೆ ನಡೆಸಿದ್ದರು. ಅದಾಗಿ ಕೆಲವೇ ದಿನಗಳಲ್ಲಿ ಚೀನಾವು ತನ್ನ ಹಡಗುಗಳನ್ನು ನಿಯೋಜನೆ ಮಾಡಿದೆ ಎಂದು ಹೇಳಿದ್ದಾರೆ. ಚೀನಾವು ಈ ಭಾಗದ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆ ಹಾಕುವ ಏಕೈಕ ದೇಶವಾಗಿದೆ ಎಂದು ಆರೋಪಿಸಿದ್ದಾರೆ.

ನಿಧನ



ಮೀನಾಕ್ಷಮ್ಮ

ಮೈಸೂರು,ಮೇ23–ಮೈಸೂರಿನ ಅಶೋಕಪುರಂ ನಿವಾಸಿ ದಿವಂಗತ ಎಸ್.ಎಲ್.ರಂಗನಾಥ್ ಅವರ ಪತ್ನಿ ಮೀನಾಕ್ಷಮ್ಮ ಆರ್. (83) ಶನಿವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು, ನಾಲ್ವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ನಾಳೆ (ಮೇ 24) ವಿದ್ಯಾರಣ್ಯಪುರಂ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನಿಂದ 31ರವರೆಗೆ ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮದಿನೋತ್ಸವ


ಶ್ರೀ ದತ್ತ ವೆಂಕಟೇಶ್ವರ ಬ್ರಹ್ಮೋತ್ಸವ; ನಾದ ಮಂಟಪದಲ್ಲಿ 28ನೇ ವಾರ್ಷಿಕೋತ್ಸವ

ಮೈಸೂರು,ಮೇ 23(ಎಂಟಿವೈ)– ಮೈಸೂರಿನ ಶ್ರೀ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮೇ 24ರಿಂದ ಮೇ 31ರವರೆಗೆ ನಾನಾ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳು ಜರುಗಲಿದೆ.

ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ಜನ್ಮದಿನೋತ್ಸವ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 27ನೇ ಬ್ರಹ್ಮೋತ್ಸವ ಹಾಗೂ ನಾದ ಮಂಟಪದ 28ನೇ ವಾರ್ಷಿಕೋತ್ಸವದ ಅಂಗವಾಗಿ 7 ದಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮೇ 24ರಂದು ಬೆಳಗ್ಗೆ 9 ಗಂಟೆಗೆ 'ಗಣಪತಿ ಹೋಮ'ದೊಂದಿಗೆ ಧಾರ್ಮಿಕ ಕಾರ್ಯ ಆರಂಭವಾಗಲಿವೆ. ಸಂಜೆ 5 ಕ್ಕೆ ಶೇಷ ವಾಹನ ಉತ್ಸವ, 6 ಗಂಟೆಗೆ ಬ್ರಹ್ಮೋತ್ಸವ ಮತ್ತು ಶ್ರೀಗಳ ಜನ್ಮ ದಿನೋತ್ಸವ ನಡೆಯಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮೇ 25ರಂದು ಕೊಳಲು ವಾದಕ ಪಂಡಿತ್ ರಾಕೇಶ್ ಚೌರಾಸಿಯಾ ಮತ್ತು ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿ ಅವರಿಂದ ಹಿಂದೂಸ್ತಾನಿ ಸಂಗೀತ ಕಚೇರಿ ಜರುಗಲಿದೆ.



ಗಣಪತಿ ಸಚ್ಚಿದಾನಂದ ಶ್ರೀಗಳು.

ಮೇ 26ರಂದು ಶ್ರೀಗಳ 84ನೇ ಜನ್ಮದಿನದ ಅಂಗವಾಗಿ ಅಭಿಷೇಕ, ಲಕ್ಷ್ಮಿ ಹೋಮ ಹಾಗೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮೇ 27ರಂದು ಶ್ರೀಗಳಿಗೆ ಪ್ರತ್ಯಕ್ಷ ಪಾದಪೂಜೆ ಮತ್ತು ವಿವಿಧ ಕ್ಷೇತ್ರಗಳ ಗಣ್ಯರಿಗೆ ದತ್ತ ಪೀಠದ ವತಿಯಿಂದ ವೇದನಿಧಿ, ಶಾಸ್ತ್ರನಿಧಿ ಮತ್ತಿತರ ಬಿರುದು ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಸಂಜೆ 6ಕ್ಕೆ ಅನ್ನಮಯ್ಯ ಕೀರ್ತನ ನೃತ್ಯಾಂಜಲಿ ಕಾರ್ಯಕ್ರಮ ನಡೆಯಲಿದೆ.

ಮೇ 28 ಸಂಜೆ ದತ್ತ ವೆಂಕಟೇಶ್ವರ ಸ್ವಾಮಿಗೆ ತೆಪ್ಪೋತ್ಸವ, ಮೇ 29 ಹಿಂದುಸ್ತಾನಿ ದ್ವಂದ್ವ ವಾದನ ಪಂಡಿತ್ ವಿಶ್ವ ಮೋಹನ್ ಭಟ್ (ಮೋಹನ ವೀಣೆ) ಮತ್ತು ಪಂಡಿತ್ ಸಲೀಲ್ ವಿಶ್ವ ಮೋಹನ್ ಭಟ್ (ಸಾತ್ವಿಕ ವೀಣೆ) ಕಾರ್ಯಕ್ರಮ ನಡೆಯಲಿದೆ. ಮೇ 30 ಬೆಳಗ್ಗೆ 10 ಗಂಟೆಗೆ ವಿಶೇಷ ಚೇತನರಿಗೆ ಸಲಕರಣೆ ವಿತರಣೆ, ಸಂಜೆ ಪಂಡಿತ್ ಸಂಜೀವ್ ಅಭ್ಯಂಕರ್ ಅವರಿಂದ ಸಂಗೀತ ಸುಧೆ ಜರುಗಲಿದೆ. ಮೇ 31ರಂದು ವಿದ್ವಾನ್ ಕುಮರೇಶ್ ರಾಜಗೋಪಾಲನ್ ಮತ್ತು ವಿದುಷಿ ಜಯಂತಿ ಕುಮರೇಶ್ ಅವರಿಂದ ವೀಣಾ–ವಯಲಿನ್ ಜುಗಲ್ ಬಂದಿ ಕಾರ್ಯಕ್ರಮವಿದೆ. ಎಂದು ಆಶ್ರಮದ ಮೂಲಗಳು ತಿಳಿಸಿವೆ.

ಸೇವಾ ಕಾರ್ಯಗಳು: ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮ ದಿನೋತ್ಸವದ ಅಂಗವಾಗಿ ಆಶ್ರಮದಲ್ಲಿ ಭಕ್ತರಿಗೆ ಆರೋಗ್ಯ ಮತ್ತು ಮಾನಸಿಕ ಶಾಂತಿಗಾಗಿ ಪ್ರತಿದಿನ ಬೆಳಗ್ಗೆ 6.30ಕ್ಕೆ ದತ್ತ ಕ್ರಿಯಾ ಯೋಗ ತರಗತಿ ಹಾಗೂ ಮಧ್ಯಾಹ್ನ 12 ಮತ್ತು ಸಂಜೆ 4 ಗಂಟೆಗೆ ಶ್ರೀಗಳೇ ಸಂಯೋಜಿಸಿರುವ ಮ್ಯೂಸಿಕ್ ಥೆರಪಿ (ಸಂಗೀತ ಚಿಕಿತ್ಸೆ) ಕಾರ್ಯಕ್ರಮಗಳು ನಾದ ಭವನದಲ್ಲಿ ನಡೆಯಲಿವೆ.

ಅಸಂಘಟಿತ ಕಾರ್ಮಿಕರಿಗೆ 'ಕಾಯಕಯೋಗಿ' ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ವಿವಿಧ ಕ್ಷೇತ್ರಗಳ ಅಸಂಘಟಿತ ಕಾರ್ಮಿಕರಿಗೆ ಶನಿವಾರ 'ಕಾಯಕಯೋಗಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು,ಮೇ 23(ಎಂಟಿವೈ)–ಕಾರ್ಮಿಕರ ದಿನದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಮೈಸೂರು ಕನ್ನಡ ವೇದಿಕೆ ವತಿಯಿಂದ 'ಕಾಯಕಯೋಗಿ' ಪ್ರಶಸ್ತಿ ನೀಡಿ ಗೌರವಿಸಿತು.

ಮೈಸೂರಿನ ಸುಬ್ಬರಾಯನಕೆರೆ ಆವರಣದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಶನಿವಾರ ನಡೆದ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಲೇ ಇದೆ. ಹಲವು ವರ್ಷಗಳಿಂದ ಕಾಡುತ್ತಿರುವ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ. ಇದೀಗ ಎಲ್ಲಾ ಕ್ಷೇತ್ರಗಳಲ್ಲೂ ಎಐ(ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ಕಾಲಿಟ್ಟಿದ್ದು, ಇದರಿಂದ ಸಾಕಷ್ಟು ಮಂದಿ ಉದ್ಯೋಗಸ್ಥರಿಗೆ ತೊಂದರೆಯಾಗುತ್ತಿದೆ. ಅಲ್ಲದೆ, ಎಐನಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಜನಸಂಖ್ಯೆ ಹೆಚ್ಚಾಗಿರುವ ಭಾರತದಲ್ಲಿ ವಿದ್ಯಾವಂತರು ಹಾಗೂ ಪ್ರತಿಭಾನ್ವಿತರ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ಎಐನಿಂದ ಅವಕಾಶ ವಂಚಿತರಾಗುತ್ತಿದ್ದಾರೆ. ದೊಡ್ಡ ದೊಡ್ಡ ಕಂಪನಿಗಳು ತ್ವರಿತಗತಿಯಲ್ಲಿ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಎಐ ತಂತ್ರಜ್ಞಾನದ ಮೊರೆ ಹೋಗುತ್ತಿದ್ದಾರೆ. ಇದರಿಂದ ಯುವಕ ಯುವತಿಯರಿಗೆ ಕೆಲಸವಿಲ್ಲದಂತಾಗುತ್ತಿದೆ. ಹೊಸ ಹೊಸ ಸಂಶೋಧನೆ ಮೂಲಕ ಜನರಿಗೆ ಕೆಲಸ ನೀಡಬೇಕು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳು ಖಾಸಗಿ ಕಂಪನಿಗಳಿಗೆ ಸಿಬ್ಬಂದಿಗಳನ್ನು ಕೆಲಸದಿಂದ ತೆಗೆಯದಂತೆ ಕಟ್ಟುನಿಟ್ಟಾಗಿ ಸೂಚಿಸಬೇಕು ಎಂದರು.

ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಮಾತನಾಡಿ, ಕಾರ್ಮಿಕರ ಏಳಿಗೆಗಾಗಿ ಕೈಗಾರಿಕಾ–ವಾಣಿಜ್ಯ ಸಂಸ್ಥೆ ಶ್ರಮಿಸುತ್ತಿದೆ. ಅಲ್ಲದೆ, ಕಾರ್ಮಿಕರಿಗೆ ಹಲವು ಸೌಲಭ್ಯ ಒದಗಿಸುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿ, ಅವರ ಮಕ್ಕಳ ಶಾಲೆಯ ಶುಲ್ಕ, ಆಸ್ಪತ್ರೆಯ ಚಿಕಿತ್ಸಾ ವೆಚ್ಚ ಒದಗಿಸಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಅಸಂಘಟಿತ ಕಾರ್ಮಿಕ ವಲಯದಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಅನೇಕರು ಬಿಎ, ಬಿಕಾಂ, ಇಂಜಿನಿಯರಿಂಗ್ ಮಾಡಿರುವವರಿದ್ದಾರೆ. ಸರ್ಕಾರಗಳು ಸ್ಥಳೀಯರಿಗೆ ಉದ್ಯೋಗ ಸೃಷ್ಟಿ ಮಾಡಿಕೊಡಬೇಕು. ಉದ್ಯೋಗ, ಶಿಕ್ಷಣ, ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮಾತನಾಡಿ, ಅಸಂಘಟಿತ ಕಾರ್ಮಿಕರಿಗೆ ಸನ್ಮಾನ ಮಾಡುವುದು ನಮ್ಮ ಕರ್ತವ್ಯ. ವಿವಿಧ ವಲಯಗಳಲ್ಲಿ ಅಸಂಘಟಿತ ಕಾರ್ಮಿಕರಾಗಿ ದುಡಿಯುತ್ತಿರುವವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕಾಯಕಯೋಗಿ ಪ್ರಶಸ್ತಿ ನೀಡಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಸಂಸ್ಥೆಯ ನಾಗೇಶ್, ನೀರಾವರಿ ಇಲಾಖೆಯ ಸಹಾಯಕ ಇಂಜಿನಿಯರ್ ರೇಣುಕೇಶ್ವರ, ಮುಖಂಡರಾದ ನಾಲಾಬೀದಿ ರವಿ, ಯದುನಂದನ್, ಸಾಲುಂಡಿ ದೊರೆಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಇಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಹಡಜನ ಟಿ.ಲಿಂಗರಾಜು, ನಿರ್ದೇಶಕ ಸ್ಥಾನಕ್ಕೆ ಮಹದೇವಸ್ವಾಮಿ, ಶಿವಕುಮಾರ್ ಆಯ್ಕೆಗೆ ಮನವಿ

ಮೈಸೂರು, ಮೇ 23(ಜಿಎ)–ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ತಾಲೂಕು ಅಧ್ಯಕ್ಷ ಹಾಗೂ ನಿರ್ದೇಶಕರ ಸ್ಥಾನಕ್ಕೆ ಮೇ 24ರಂದು ನಗರದಲ್ಲಿ ಚುನಾವಣೆ ನಡೆಯಲಿದ್ದು, ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿರುವ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಹಾಗೂ ಎಲ್.ಮಹದೇವಸ್ವಾಮಿ ಮತ್ತು ಚಿಕ್ಕಾನ್ಯ ಎಸ್.ಶಿವಕುಮಾರ್ ಅವರನ್ನು ನಿರ್ದೇಶಕರ ಸ್ಥಾನಕ್ಕೆ ಚುನಾಯಿಸಬೇಕೆಂದು ಹಡಜನ ಟಿ.ಲಿಂಗರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಬೇಕಾಗಿತ್ತು. ಆದರೆ ಈಗಿನ ಜಿಲ್ಲಾಧ್ಯಕ್ಷರ ಓರ್ವರೊಡನೆ ಶಾಮೀಲಾಗಿರುವ ಕಾರಣ ಅನಿವಾರ್ಯವಾಗಿ ಚುನಾವಣೆ ನಡೆಯಬೇಕಾಗಿ ಬಂದಿದೆ. ಆದರೂ ತಾವು ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು.

ತಾವು ರಾಜಕೀಯ ಲಾಭಕ್ಕಾಗಿ ಸ್ಪರ್ಧಿಸುತ್ತಿಲ್ಲ, ಬಸವಣ್ಣನವರ ತತ್ವಗಳನ್ನು ನಂಬಿಕೊಂಡು, ನಿಷ್ಠೆಯಿಂದ ಸಮಾಜಕ್ಕಾಗಿ ಕೆಲಸ ಮಾಡುತ್ತಿದ್ದೇನೆ. ಜಿಲ್ಲಾ ನಿರ್ದೇಶಕನಾಗಿ ಸೇವೆ ಸಲ್ಲಿಸಿದ ವೇಳೆ ನಗರದ ಜೆಎಸ್‌ಎಸ್ ಬಡಾವಣೆಯಲ್ಲಿ ಸಿಎ ನಿವೇಶನ ದೊರೆಯಲು ಮೂಲ ಕಾರಣ ನಾನಾಗಿದ್ದೇನೆ. ಇದಲ್ಲದೆ ಸಂಘಟನೆಯ ಬಲವರ್ಧನೆಗೆ ಶ್ರಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಭವ್ಯ ಬಸವ ಭವನ ನಿರ್ಮಾಣಕ್ಕೆ ಶ್ರಮಿಸಲಿದ್ದೇನೆ. ಸಮುದಾಯದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಿದ್ದೇನೆ. ಸಮುದಾಯದ ಜನರ ಸಮಸ್ಯೆ ಬಗೆಹರಿಸಲು ಯತ್ನಿಸುವೆ, ಮಠಾಧೀಶರ ಮಾರ್ಗದರ್ಶನದಲ್ಲಿ ಯುವ ಸಮೂಹದ ಆರೋಗ್ಯಕರ ಬೆಳವಣಿಗೆಗೆ ಒತ್ತು ನೀಡಲಿದ್ದೇನೆ. ಹೀಗಾಗಿ ಮತದಾರರು ತಮ್ಮನ್ನು ಚುನಾಯಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿರುವ ಎಲ್.ಮಹದೇವಸ್ವಾಮಿ, ಚಿಕ್ಕಾನ್ಯ ಎಸ್.ಶಿವಕುಮಾರ್ ಉಪಸ್ಥಿತರಿದ್ದರು.

ಮೇ 26, ಲೂಪಸ್ ಕಾಯಿಲೆ ಬಗ್ಗೆ ಉಚಿತ ಜಾಗೃತಿ ಕಾರ್ಯಕ್ರಮ

ಮೈಸೂರು, ಮೇ 23(ಜಿಎ)–ಮೈಸೂರಿನ ಶಾರದಾದೇವಿನಗರದಲ್ಲಿರುವ ರೆಯೂಮಾ ಕೇರ್ ಕ್ಲಿನಿಕ್‌ನಲ್ಲಿ ಮೇ 26 ರಂದು ಬೆಳಗ್ಗೆ 11.30ರಿಂದ ಸಂಜೆವರೆಗೆ ಲೂಪಸ್ ಕಾಯಿಲೆ ಕುರಿತು ಉಚಿತ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ಲಿನಿಕ್‌ನ ವೈದ್ಯ ಡಾ.ಚೆಂಗಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಒಂದು ಲಕ್ಷದಲ್ಲಿ ಸುಮಾರು 50 ಮಂದಿ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೆ ಬಹಳಷ್ಟು ಮಂದಿಗೆ ಇದರ ಅರಿವಿರುವುದಿಲ್ಲ. ನಮ್ಮ ದೇಹದ ರೋಗ ನಿರೋಧಕ ವ್ಯವಸ್ಥೆ ನಮ್ಮ ದೇಹದ ಮೇಲೆಯೇ ತಿರುಗಿ ಬಿದ್ದು, ಅನೇಕ ಅನಾರೋಗ್ಯಗಳಿಗೆ ಕಾರಣವಾಗುವ ಕಾಯಿಲೆ ಇದಾಗಿದೆ. ಕೆಲವರಿಗೆ ಕೇವಲ ಒಂದು ವಾರದಲ್ಲಿ ವಾಸಿಯಾಗುವಂತಿದ್ದರೆ, ಹಲವರಿಗೆ ಸುಮಾರು ಏಳು ವರ್ಷ ಬೇಕಾಗಬಹುದಾಗಿದೆ ಎಂದರು.

ಮತ್ತೋರ್ವ ವೈದ್ಯ ಡಾ.ರಕ್ಷಿತ್ ಉಮೇಶ್ ಮಾತನಾಡಿ, ಲೂಪಸ್ ಕಾಣಿಸಿಕೊಳ್ಳಲು ನಿಖರ ಕಾರಣ ಪತ್ತೆಯಾಗಿಲ್ಲ. ಆದರೆ ಥೈರಾಯ್ಡ್ ಮೊದಲಾದ ಸಮಸ್ಯೆಯಿಂದ ಬಳಲುತ್ತಿರುವವರಲ್ಲಿ ಕಾಣಿಸಿಕೊಳ್ಳಬಹುದಾಗಿದೆ. ಆಗಾಗ್ಗೆ ಬರುವ ಜ್ವರ, ರಕ್ತದ ಕಣಗಳ ಕುಸಿಯುವಿಕೆ ಮೊದಲಾದವು ಲಕ್ಷಣಗಳಾಗಿವೆ. ಹೀಗಾಗಿ ಒಮ್ಮೆ ತಪಾಸಣೆಗೊಳಗಾಗುವುದು, ಸಕಾಲದಲ್ಲಿ ಚಿಕಿತ್ಸೆ ಪಡೆಯುವುದು. ಇದರ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅಗತ್ಯ. ಹೆಚ್ಚಿನ ಮಾಹಿತಿಗೆ ದೂ. 86609 03284 ನ್ನು ಸಂಪರ್ಕಿಸಲು ಕೋರಿದರು.

ಅರ್ಜಿ ಆಹ್ವಾನ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು ವತಿಯಿಂದ 2026–27ನೇ ಸಾಲಿನ ಬಿಎ, ಬಿಕಾಂ, ಬಿಬಿಎ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಮೊ: 9164141018, 9901261106.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.5.2026 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮ ದಿನೋತ್ಸವ ಮತ್ತು ನಾದಮಂಟಪದ 28ನೇ ವಾರ್ಷಿಕೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಮಹಾಗಣಪತಿ ಹೋಮ, ಸಂಜೆ 6ಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮದಿನೋತ್ಸವ ಮತ್ತು ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 27ನೇ ಬ್ರಹ್ಮೋತ್ಸವ ಉದ್ಘಾಟನೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30 ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಪಿಎಂಜೆಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಮೈಸೂರು ಸಾಹಿತ್ಯ ದಾಸೋಹ** : 127ನೇ ಸಾಹಿತ್ಯ ದಾಸೋಹ ಹಾಗೂ ಶ್ರೀಮತಿ ಪ್ರಭಾಶಾಸ್ತ್ರಿ ಜ್ಯೋಯ್ಸುಲ ಅವರ ಅನುವಾದಿತ ಕೃತಿ 'ಸ್ವಾತಿಮುತ್ತು' ಕಥಾಸಂಕಲನ ಬಿಡುಗಡೆ ಸಮಾರಂಭ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಸ್ತಕ ಬಿಡುಗಡೆ: ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು: ರಂಗನಾಥ್ ಮೈಸೂರು, ಉಪಸ್ಥಿತರು : ಸಿ.ಎನ್. ಚಂದ್ರಶೇಖರ್, ಶ್ರೀಮತಿ ಪ್ರಭಾಶಾಸ್ತ್ರಿ ಜ್ಯೋಯ್ಸುಲ, ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕರಾದ ಶ್ರೀಮತಿ ಪದ್ಮಾಆನಂದ್ ದಂಪತಿ, ಸ್ಥಳ: ಶ್ರೀ ಶಾರದಾ ಸಭಾಂಗಣ, ವಿವೇಕಾನಂದ ವೃತ್ತ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ನೇಹ ಸಿಂಚನ ಟ್ರಸ್ಟ್** : ವಿಶ್ವ ತಾಯಂದಿರ ದಿನಾಚರಣೆ ಪ್ರಯುಕ್ತ ಆದರ್ಶ ಅಮ್ಮ ಪ್ರಶಸ್ತಿ ಪ್ರದಾನ, ಕವಿ–ಕಾವ್ಯ–ಗಾಯನದ ಸಮರ್ಪಣಾ ಸಮಾರಂಭ, ಉದ್ಘಾಟನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸನ್ಮಾನಿಸುವವರು: ಡಾ.ಪುಷ್ಪಾ ಅಯ್ಯಂಗಾರ್, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ.ನಾಗರಾಜ ವಿ.ಬೈರಿ, ಮುಖ್ಯ ಅತಿಥಿಗಳು: ಸತ್ಸಂಗ ಪ್ರಚಾರಕರಾದ ಸುಮತಿ ಸುಬ್ರಹ್ಮಣ್ಯ, ಮ.ನ.ಲತಾಮೋಹನ್, ಸ್ಥಳ: ವಿಜಯ ವಿಠ್ಠಲ ಶಾಲೆ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ರಾಹುಲ್ ವೆಲ್ಲಾಳ್ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸಂಚಲನ ಮೈಸೂರು, ಬೆಂಗಳೂರಿನ ಉದ್ಭವ ಕಲಾವಿದರು, ಅರಳಿ ಸೇವಾ ಟ್ರಸ್ಟ್, ತಸ್ಮಿ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ಗ್ರೀಷ್ಮ ರಂಗೋತ್ಸವ, ಜನಮನ ಸಾಂಸ್ಕೃತಿಕ ಸಂಘಟನೆಯಿಂದ ದೇವನೂರು ಮಹಾದೇವ ಅವರ ಕೃತಿ ಆಧರಿಸಿದ 'ಸಂಬಂಜ ಅನ್ನೋದು ದೊಡ್ಡು ಕನಾ' ನಾಟಕ ಪ್ರದರ್ಶನ, ನಿರ್ದೇಶನ : ಡಾ. ಹೆಚ್. ಜನಾರ್ಧನ (ಜನ್ನಿ), ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

■ **ಸಪಸ ಸಂಗೀತ ವಿದ್ಯಾಲಯ** : ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11.30, ಸಂಜೆ 5 ರಿಂದ.

■ **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನ, ವೀರಶೈವ ಮಂಡಳಿ, ವೀರನಗೆರೆ:** ಶ್ರೀ ಬಸವೇಶ್ವರಸ್ವಾಮಿ ಜಯಂತಿ ಪ್ರಯುಕ್ತ ಬೆಳಗ್ಗೆ 8ಕ್ಕೆ ರುದ್ರಾಭಿಷೇಕ, ಮಹಾಮಂಗಳಾರತಿ, ಸಂಜೆ 6.30ಕ್ಕೆ ಕುದೇರು ಮಠದ ಶ್ರೀ ಗುರುಶಾಂತಸ್ವಾಮಿ ಅವರಿಂದ ಆಶೀರ್ವಚನ, ಮಾದೇಶ ಅವರಿಂದ ವಚನ ಗಾಯನ, ರಾತ್ರಿ 7ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನ, ವೀರನಗೆರೆ, ಲಷ್ಕರ್ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ವಿದ್ಯಾ ಭರತನಹಳ್ಳಿ, 6.35 ಮತ್ತುಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ, ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.45 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ –ಶ್ರವಣ ದೋಷವುಳ್ಳವರಿಗೆ ಶ್ರವಣ ಸಲಕರಣೆಗಳು ಹಾಗೂ ಸರ್ಕಾರಿ ರಿಯಾಯಿತಿಗಳು ಈ ಕುರಿತು ಮೈಸೂರಿನ ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಆಡಿಯಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ವಿಪಿನ್ ಘೋಷ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಮೈಸೂರಿನ ಚಂಪಕಾ ಅಕಾಡೆಮಿಯ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30ಮಕ್ಕಳ ಮಂಟಪ–ಮೈಸೂರಿನ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾವಿಹಾರ–ಸಮಾಜಮುಖಿ ಉದ್ಯಮದ ಮುನ್ನಡೆ–ಮಹಿಳಾ ಉದ್ಯಮಿ ಆಶಾ ಅವರ ಪಯಣ ಇವರೊಂದಿಗೆ: ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ: ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನ ಮಂತ್ರಿ ಸರ್ವರಿಗೂ ಸೂರು ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಶೈಲಜಾ ಚಂದ್ರಶೇಖರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿಸಿ–ಆನಂದ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಆಕಾಶವಾಣಿ 90ರ ಸಂದರ್ಭದಲ್ಲಿ ಮೈಸೂರು ಆಕಾಶವಾಣಿಯ ಸಂಗೀತ ಸ್ಟುಡಿಯೋದಲ್ಲಿ ಆಯೋಜಿಸಲಾಗಿದ್ದ ವಿ.ಕೃಷ್ಣಮೂರ್ತಿ ಹಾಗೂ ಸಂಗಡಿಗರ ನಾದಸ್ವರ ವಾದನದ ಧ್ವನಿಮುದ್ರಣ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ಹಟ್ಟಿಹರಟೆ–ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್. ಕೇಶವಮೂರ್ತಿ, ಡಾ.ಮೈಸೂರು ಉಮೇಶ್, ಬಿ.ಜಿ.ಕವಿತಾ, ಕೃಷಿಲೋಕ, ಕೃಷಿದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಜಿ.ಎನ್. ಮಂಜುನಾಥ್, 7.45 ಕನ್ನಡದಲ್ಲಿ ಭಾಷಣ–'ವಚನಕಾರರ ಕಾಯಕ ತತ್ವ' ಈ ಕುರಿತು ಮಾತನಾಡುತ್ತಾರೆ ನಿವೃತ್ತ ಪ್ರಾಂಶುಪಾಲರಾದ ಡಾ.ಜಿ.ಸೋಮಣ್ಣ, 8.00 ಫಸ್ಟ್ ಫಿಲ್ಮ್–ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿ ವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ಹರ ಶಂಕರ್ ಭಟ್ಟಾಚಾರ್ಯ–ಸಿತಾರ್ ವಾದನ

ನಕ್ಕರೆ ಅದೇ ಸ್ವರ್ಗ

ಗುಂಡ : ನನಗೆ ಕೈ ಹಿಡಿಯುವ ಹೆಂಡತಿ ಬೇಕು ಅಂತ ಜಾಹೀರಾತು ಕೊಟ್ಟಿದ್ದೆ. ಆದರೆ ಸಿಕ್ಕಿದ್ದೆ ಬೇರೆ.

ತಿಮ್ಮ : ಯಾಕೆ ಗುಂಡ ಏನಾಯ್ತು?

ಗುಂಡ : ನನಗೆ ಪ್ರತಿ ವಿಷಯಕ್ಕೂ ತಪ್ಪು ಕಂಡು ಹಿಡಿಯುವ ಹೆಂಡತಿ ಸಿಕ್ಕಿದ್ದಾಳೆ!

ಮೈಸೂರು ಮಿತ್ರ

ಭಾನುವಾರ, ಮೇ 24, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆಲವರ ಬಣ್ಣದ ಮುಖವಾಡಗಳು ಅವರ ಮಿತಿ ಮೀರಿದ ಕುಣಿತದಿಂದ ತಾನಾಗಿಯೇ ಕಳಚಿ ಬೀಳುತ್ತವೆ. ನಾವು ಅವರನ್ನು ತಾಳ್ಮೆಯಿಂದ ಕುಣಿಯಲಿ ಅಂತ ಕುಣಿಯೋಕೆ ಬಿಡಬೇಕು ಅಷ್ಟೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಶಸ್ತ್ರದಿಂದಾದ ಗಾಯ ಮಾಯುತ್ತದೆ, ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

ನಿಮ್ಮ ಪತ್ರಗಳು

ಶ್ರೀಕಂಠೇಶ್ವರ ದೇಗುಲದ ಪಟ್ಟದ ಆನೆ ಗೌರಿ ಕರೆತರಲು ಈ ಪರಿ ನಿರ್ಲಕ್ಷ್ಯವಾದರು ಯಾಕೆ?

ಮಾನ್ಯರೆ,



ನಂಜನಗೂಡಿನ ಪ್ರಸಿದ್ಧ ಶ್ರೀಕಂಠೇಶ್ವರ ದೇವಸ್ಥಾನ ಪಟ್ಟದ ಆನೆ ಗೌರಿ, ಕಾಲಿನ ಗಾಯ ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಸೂಕ್ತ ಚಿಕಿತ್ಸೆಗಾಗಿ 2017-2018ರಲ್ಲಿ ಬೆಂಗಳೂರಿನ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರಕ್ಕೆ ಉತ್ತಮ ಆರೈಕೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ವರ್ಗಾಯಿಸಿದ್ದು ಸರಿಯಷ್ಟೇ!

ಈಗ, ಸರಿ ಸುಮಾರು 8-9 ವರ್ಷ ಕಳೆದಿದ್ದು ಆನೆ ಗೌರಿಯನ್ನು ವಾಪಸ್ ಕರೆ ತಂದಿಲ್ಲ. ತರದೇ ಇರಲು ಕಾರಣವು ತಿಳಿಯುತ್ತಿಲ್ಲ! ಸದ್ಯ, ಆನೆಯ ಪ್ರಸ್ತುತ ಸ್ಥಿತಿ ಗುಣಮುಖವಾಗಿ ಚೆನ್ನಾಗಿದೆ ಎನ್ನುವ ಮಾಹಿತಿ ಇದೆ. ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುವ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು, ಅಭಿಷೇಕಕ್ಕಾಗಿ ಕಪಿಲಾ ನದಿಯಿಂದ ನೀರನ್ನು ತರುವುದು ಹಾಗೂ ಉತ್ಸವ ಮೆರವಣಿಗೆಗಳಲ್ಲಿ ಸದಾ ಮುಂಚೂಣಿಯಲ್ಲಿ ಕಾಣುತ್ತಿದ್ದ ಗೌರಿ ಆನೆ ಇಲ್ಲದೆ ಉತ್ಸವ ಕಳೆಗುಂದಿದೆ.

ಗೌರಿ ಆನೆ ತಂಗಿದ್ದ ದೇವಸ್ಥಾನದ ಮುಂಭಾಗದ ಶೆಡ್ ಕೂಡ ಖಾಲಿ ಇದ್ದು, ಬಿಕೋ ಎನ್ನುತ್ತಿದೆ. ಆಕರ್ಷಣೆ ಕೇಂದ್ರ ಬಿಂದುವಾಗಿದ್ದ ಈ ಗೌರಿಯ ದರ್ಶನಕ್ಕೆ ಆಗಾಗ ಬರುತ್ತಿದ್ದ ಶಾಲಾ ಮಕ್ಕಳು, ಭಕ್ತ ಸಮೂಹ, ಸೇರಿದಂತೆ ಇನ್ನಿತರರು ಆನೆ ಗೌರಿ ನೋಡಲಾಗದೆ ನಿರಾಸೆಯಿಂದ ತೆರಳುತ್ತಿದ್ದಾರೆ.

ಧಾರ್ಮಿಕ ಹಾಗೂ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಈ ದೇಗುಲ ಅತಿ ಹೆಚ್ಚು ಆದಾಯ ಬರುವ ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಮೊದಲ 3 ರ ಒಳಗೆ ಸ್ಥಾನ ಪಡೆದಿದ್ದು ವಾರ್ಷಿಕ ಆದಾಯ ಸರಿ ಸುಮಾರು 10-15 ಕೋಟಿ. ಇಷ್ಟೆಲ್ಲ, ಭವ್ಯ ಹಿನ್ನೆಲೆ, ಇತಿಹಾಸ ಸಂಪತ್ತು ಇದ್ದರೂ ನಂಜನಗೂಡು ಶ್ರೀಕಂಠೇಶ್ವರ ದೇಗುಲ ಆಡಳಿತ ಮಂಡಳಿ ಆನೆ ಕರೆ ತಂದು ಸಾಕಲು ಹಿಂದೇಟು ಹಾಕುತ್ತಿರುವುದಾದರೂ ಯಾವ ಕಾರಣಕ್ಕೆ? ಅಥವಾ ಆನೆ ಸಾಕಲು ಹಣ ಇಲ್ಲವೇ? ಎನ್ನುವುದು ಇಂದಿಗೂ ಕೂಡ ಅರ್ಥವಾಗದ ಯಕ್ಷಪ್ರಶ್ನೆ?

ಇನ್ನಾದರೂ ಸಂಬಂಧಪಟ್ಟ ಶ್ರೀಕಂಠೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಸ್ಥಳೀಯ ಶಾಸಕರು ಆದ ದರ್ಶನ್ ಧ್ರುವನಾರಾಯಣ್ ದೇವಸ್ಥಾನದ ವೈಭವ ಪರಂಪರೆ ಉಳಿಸುವ ನಿಟ್ಟಿನಲ್ಲಿ ನಂಜನಗೂಡು ಪಟ್ಟಣದಲ್ಲಿ ಆಕರ್ಷಣೆಯ ಕೇಂದ್ರ ಬಿಂದು ಆಗಿದ್ದ ಆನೆ ಗೌರಿಯನ್ನು ಪ್ರಾಮುಖ್ಯತೆ ಮೇರೆಗೆ ವಾಪಸ್ ಕರೆ ತರಲು ಖುದ್ದಾಗಿ ತುರ್ತು ಗಮನ ಹರಿಸಬೇಕಿದೆ.

– ಅನಿಲ್‌ಕುಮಾರ್, ನಂಜನಗೂಡು.

ಪದವಿ ಪೂರ್ವ ಉಪನ್ಯಾಸಕರ ನೇಮಕಾತಿಗೆ ಬಿ.ಇಡಿ ಕಡ್ಡಾಯವೇ?

ಮಾನ್ಯರೆ,

ಪದವಿ ಪೂರ್ವ (ಪಿಯು) ಶಿಕ್ಷಣವು ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ಬೆಸೆಯುವ ಪ್ರಮುಖ ಕೊಂಡಿಯಾಗಿದೆ. ಪ್ರಸ್ತುತ ವ್ಯವಸ್ಥೆಯಲ್ಲಿ ಪಿಯು ಉಪನ್ಯಾಸಕರ ಹುದ್ದೆಗೆ ಬಿ.ಇಡಿ ಪದವಿಯನ್ನು ಕಡ್ಡಾಯಗೊಳಿಸಲಾಗಿದೆ.

ಆದರೆ, ಪಿಯು ಹಂತದ ಬೋಧನಾ ಶೈಲಿ ಮತ್ತು ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯನ್ನು ಗಮನಿಸಿದರೆ, ಈ ಹುದ್ದೆಗೆ ಬಿ.ಇಡಿ ಪದವಿ ಅನಗತ್ಯ ಎಂಬುದು ಸ್ಪಷ್ಟವಾಗುತ್ತದೆ. ಕಾರಣ ಉನ್ನತ ಶಿಕ್ಷಣ ಸಂಸ್ಥೆಗಳ ಮಾದರಿ (ಯುಜಿಸಿ ನಿಯಮಾವಳಿ) ಪ್ರಕಾರ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಬಿ.ಇಡಿ ಕಡ್ಡಾಯವಿಲ್ಲ. ಅಲ್ಲಿ ಕೇವಲ ಸ್ನಾತಕೋತ್ತರ ಪದವಿ ಜೊತೆಗೆ ನೆಟ್ (NET) ಅಥವಾ ಸ್ಲೆಟ್ (KSET) ಅರ್ಹತೆಯನ್ನು ಪರಿಗಣಿಸಲಾಗುತ್ತದೆ.

ಪಿಯುಸಿ ಮುಗಿಸಿದ ತಕ್ಷಣ ವಿದ್ಯಾರ್ಥಿಗಳು ಪದವಿ ಕಾಲೇಜು ಸೇರುತ್ತಾರೆ. ಕೇವಲ ಎರಡು ವರ್ಷಗಳ ಅಂತರವಿರುವ ಪಿಯು ಹಂತಕ್ಕೆ ಮಾತ್ರ ಬಿ.ಇಡಿ ಕಡ್ಡಾಯ ಮಾಡುವುದು ತಾರ್ಕಿಕವಾಗಿ ಸರಿಯಲ್ಲ. ಬಿ.ಇಡಿ ಕೋರ್ಸ್ ಪ್ರಮುಖವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ಬೋಧನಾ ಪದ್ಧತಿಯನ್ನು ಕಲಿಸುತ್ತದೆ.

ಪಿಯುಸಿ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಷಯದ ಆಳವಾದ ಜ್ಞಾನ ಬೇಕು, ಕೇವಲ ಬೋಧನಾ ಕೌಶಲ್ಯವಲ್ಲ. ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣರಾದ ಅಥವಾ ಚಿನ್ನದ ಪದಕ ಪಡೆದ ಪ್ರತಿಭಾವಂತ ಅಭ್ಯರ್ಥಿ, ಬಿ.ಇಡಿ ಮಾಡಿಲ್ಲ ಎಂಬ ಒಂದೇ ಕಾರಣಕ್ಕೆ ಪಿಯು ಉಪನ್ಯಾಸಕನಾಗಲು ಅನರ್ಹನಾಗುವುದು ವ್ಯವಸ್ಥೆಯ ದೋಷವಾಗಿದೆ.

ಪಿಯುಸಿ ಪಠ್ಯಕ್ರಮವು ಸಿಬಿಎಸ್‌ಸಿ 11 ಮತ್ತು 12ನೇ ತರಗತಿಯನ್ನು ಹೋಲುತ್ತದೆ. ಪಿಯು ವಿದ್ಯಾರ್ಥಿಗಳು ಹದಿಹರೆಯದವರಾಗಿದ್ದು, ಅವರಿಗೆ ಸ್ವತಂತ್ರವಾಗಿ ಕಲಿಯುವ ಆಸಕ್ತಿ ಇರುತ್ತದೆ. ಅವರಿಗೆ ಸಂಶೋಧನಾ ಮನೋಭಾವ ಮೂಡಿಸುವ ವಿಷಯ ತಜ್ಞರ ಅಗತ್ಯವಿರುತ್ತದೆ. ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್‌ಗಳಾದ ಡಿಪ್ಲೊಮಾ ಅಥವಾ ಐಟಿಐ ಕಾಲೇಜುಗಳಲ್ಲಿ ಬೋಧಿಸುವ ಎಂಜಿನಿಯರಿಂಗ್ ಪದವೀಧರರಿಗೆ ಯಾವುದೇ ಬಿ.ಇಡಿ ಅಗತ್ಯವಿರುವುದಿಲ್ಲ. ಪಿಯುಸಿ ಕೂಡ ಉನ್ನತ ವೃತ್ತಿಪರ ಶಿಕ್ಷಣಕ್ಕೆ ದಾರಿಯಾಗುವ ಹಂತವಾಗಿದೆ.

ವಿಜ್ಞಾನ, ವಾಣಿಜ್ಯ ವಿಷಯಗಳನ್ನು ಪ್ರಾಯೋಗಿಕವಾಗಿ ಮನವರಿಕೆ ಮಾಡಲು ಎಂ.ಎಸ್ಸಿ ಅಥವಾ ಎಂ.ಕಾಂ ಜ್ಞಾನವೇ ಸಾಕಾಗುತ್ತದೆ. ಆ ಕಾರಣ ಪಿಯು ಉಪನ್ಯಾಸಕರ ನೇಮಕಾತಿಯಲ್ಲಿ ಬಿ.ಇಡಿ ಕಡ್ಡಾಯಗೊಳಿಸುವ ಬದಲಿಗೆ, ಸ್ನಾತಕೋತ್ತರ ಪದವಿಯ ಅಂಕಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ವಿಷಯ ತಜ್ಞರನ್ನು ಆಯ್ಕೆ ಮಾಡಬೇಕು. ನೇಮಕಾತಿಯ ನಂತರ ಅವರಿಗೆ ಪಿಯು ಮಂಡಳಿಯಿಂದ ನಿರ್ದಿಷ್ಟ ಅವಧಿಯ ಬೋಧನಾ ತರಬೇತಿ ನೀಡುವುದು ಹೆಚ್ಚು ಸೂಕ್ತ ಮತ್ತು ವೈಜ್ಞಾನಿಕ ಕ್ರಮವಾಗಿದೆ.

ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿದರೆ ಸ್ನಾತಕೋತ್ತರ ಪದವಿ ಮುಗಿಸಿ ಹುದ್ದೆಯ ಅವಕಾಶಕ್ಕಾಗಿ ಕಾದು ಕುಳಿತ ಅದೆಷ್ಟೋ ಯುವ ಜನರಿಗೆ ಪದವಿ ಪೂರ್ವ ಉಪನ್ಯಾಸಕರ ಆಯ್ಕೆಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅವಕಾಶ ದೊರೆಯುತ್ತದೆ ಮತ್ತು ಸಾಮರ್ಥ್ಯವಿರುವವರಿಗೆ ಹುದ್ದೆಗಳು ಸಿಗುತ್ತವೆ.

–ಡಾ. ಸಂಜಯ್‌ಕುಮಾರ್, ಮಾನಸಗಂಗೋತ್ರಿ, ಮೈಸೂರು

ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದರು. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

7. 'ಹೊಸಗನ್ನಡದ ಪಿತಾಮಹ' ಚ. ವಾಸುದೇವಯ್ಯನವರು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಐವತ್ತು ಅರವತ್ತು ವರ್ಷಗಳ ಹಿಂದೆ ಕನ್ನಡ ಕಲಿಯಲು ಶಾಲೆಗೆ ಸೇರಿದ ಮಕ್ಕಳು ಅ-ಅಗಸ, ಆ-ಆನೆ, ಇ-ಇಲಿ... ಈ ಅಕ್ಷರಗಳಿಂದ ಪ್ರಾರಂಭಿಸಿ ಅಕ್ಷರಾಭ್ಯಾಸ ಮಾಡಿರುವುದನ್ನು ಮರೆತಿರುವುದಿಲ್ಲ. ಹಾಗೆಯೇ ಅವರು ಅಂದು ಕಲಿತ 'ಧರಣಿ ಮಂಡಲ ಮಧ್ಯದೊಳಗೆ...' ಪದ್ಯವನ್ನು ಇಂದೂ ನೆನೆಯದೆ ಇರುವುದಿಲ್ಲ. ಅದೇ ರೀತಿ ಹೆಣ್ಣು ಮಕ್ಕಳು 'ಕಣ್ಣಾಮುಚ್ಚೆ, ಗಾಡೆ ಗೋಡೆ...' ಹೇಳಿಕೊಂಡು ಆಟವಾಡುತ್ತಿದ್ದು, ಅದನ್ನು ಇಂದಿಗೂ ಕೆಲವರು ಆಡುತ್ತಿರಬಹುದು. ತಾಯಂದಿರು ಮಕ್ಕಳನ್ನು ತೂಗಿ ಮಲಗಿಸುವಾಗ 'ಯಾಕಳುವೆಯೆಲೆ ರಂಗ, ಬೇಕಾದ್ದು ನಿನಗೀವೆ...' ಎಂದು ಹಾಡು ಹೇಳುತ್ತಾ ಮಲಗಿಸುತ್ತಿದ್ದನ್ನು ಪ್ರಾಯಶಃ ಮೊಮ್ಮಕ್ಕಳನ್ನು ತೂಗಿ ಮಲಗಿಸುವಾಗ ಇಂದಿಗೂ ಹೇಳುತ್ತಿರಬಹುದೇನೋ?

ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತಹ ಇಂತಹ ಸುಂದರ-ಸುಲಭ ಪಾಠ-ಪದ್ಯಗಳನ್ನು ಬರೆದು ಕನ್ನಡದ ಕೈಂಕರ್ಯ ಮಾಡಿದ ಮಹಾನುಭಾವರು **ಚನ್ನಪಟ್ಟಣ. ವಾಸುದೇವಯ್ಯನವರು.** ಅವರು ಮಕ್ಕಳಿಗಾಗಿ ರಚಿಸಿದ 'ಬಾಲಬೋಧೆ' ಎಳೆಯ ಮಕ್ಕಳಿಗೆ ಅಕ್ಷರಗಳನ್ನು ಕಲಿಸಲು ಪಠ್ಯಪುಸ್ತಕವಾಗಿತ್ತು. ಅಕ್ಷರಗಳನ್ನು ಅವರಾಡುವ ಮಾತುಗಳಲ್ಲೇ ಸುಲಭವಾಗಿ ಕಲಿಸುವ ಪುಸ್ತಕವಾಗಿತ್ತು. ಹೀಗಾಗಿ ಮಕ್ಕಳು ಅಕ್ಷರಗಳನ್ನು ಸುಲಭವಾಗಿ ಕಲಿತರು. ಕನ್ನಡವನ್ನು ರೂಢಿಸಿಕೊಂಡರು. ಮುಂದೆ ಅವು ಅವರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದವು. ತಮ್ಮ ಮಕ್ಕಳಿಗೂ ಅದೇ ರೀತಿ ಹೇಳಿಕೊಟ್ಟರು. ಜನ ಮೆಚ್ಚುವ ಈ ಕಾರ್ಯ ಮಾಡಿದ ವಾಸುದೇವಯ್ಯನವರು ಹೊಸಗನ್ನಡದ ಪಿತಾಮಹರಾಗಿದ್ದರು. ಕನ್ನಡ ಶಿಕ್ಷಣಕ್ಕೆ ಬುನಾದಿ ಹಾಕಿದ ಮಹಾನುಭಾವರಲ್ಲಿ ಒಬ್ಬರಾಗಿದ್ದರು.

ಚ.ವಾಸುದೇವಯ್ಯನವರ ಪೂರ್ವಜರು ಗೋಲ್ಕೊಂಡದ ವ್ಯಾಪಾರಿಗಳು. ಜಗದೇವ ರಾಯನಿಂದ ಬಂದ 64 ಮನೆತನದವರು. ಶತಮಾನಗಳ ಹಿಂದೆ ಮೈಸೂರು ರಾಜ್ಯಕ್ಕೆ ಬಂದು ನೆಲೆಸಿದ್ದರು. ವಾಸುದೇವಯ್ಯನವರು 1852ರ ಆಗಸ್ಟ್ 2ರಂದು ಚನ್ನಪಟ್ಟಣದಲ್ಲಿ ಜನಿಸಿದರು. ಅಲ್ಲಿ ನೆಲೆಸಿದ್ದ ಮುಕಾಸಿ ಮಾಧ್ವ ಮನೆತನದವರಾಗಿದ್ದು ತೆಲುಗು ಮಾತೃಭಾಷೆಯಾಗಿತ್ತು. ಅಲ್ಲಿನ ಅಂಗ್ಲೋ-ವರ್ನಾಕ್ಯುಲರ್ ಶಾಲೆಯಲ್ಲಿ ವ್ಯಾಸಂಗವನ್ನು ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಎಫ್.ಎ. ತರಗತಿಗೆ ಸೇರಿದರಾದರೂ ಕಾರಣಾಂತರಗಳಿಂದ ಮುಂದುವರಿಸಲಾಗಲಿಲ್ಲ. ನಂತರ ಅವರು ಸೆಂಟ್ರಲ್ ಕಾಲೇಜಿನಲ್ಲಿ ಸ್ವಲ್ಪ ಕಾಲ ಉಪಾಧ್ಯಾಯರಾಗಿದ್ದು, ಬಳಿಕ ವಿದ್ಯಾಭ್ಯಾಸ ಇಲಾಖೆ ಇನ್ಸ್ಪೆಕ್ಟರ್ ಜನರಲ್ ಅವರ ಕಚೇರಿಯಲ್ಲಿ ಗುಮಾಸ್ತರಾದರು. ಕ್ರಮೇಣ ಮ್ಯಾನೇಜರ್ ಹುದ್ದೆಗೇರಿ 1916ರಲ್ಲಿ ನಿವೃತ್ತರಾದರು. 1870ರ ಸುಮಾರಿನಲ್ಲಿ ಬೆಂಗಳೂರಿಗೆ ಬಂದು ನೆಲೆಸಿದ್ದ ಇವರು ಮಲ್ಲೇಶ್ವರದ ಸ್ಥಾಪಕ ಪಿತಾಮಹರಲ್ಲಿ ಒಬ್ಬರಾಗಿದ್ದರು.

ವಾಸುದೇವಯ್ಯನವರು ಸರ್ ಎಂ. ವಿಶ್ವೇಶ್ವರಯ್ಯನವರಿಗೂ ಉಪಾಧ್ಯಾಯರಾಗಿದ್ದು, ವಿಶ್ವೇಶ್ವರಯ್ಯನವರು ಆಗಾಗ ಅವರ ಮನೆಗೆ ಹೋಗಿ ಯೋಗಕ್ಷೇಮ ವಿಚಾರಿಸುತ್ತಿದ್ದರು. ವಿದ್ಯಾ ಇಲಾಖೆ ಮುಖ್ಯಸ್ಥರೂ, ವಾಸುದೇವಯ್ಯನಗರ ಮೇಲಧಿಕಾರಿಯೂ ಆಗಿದ್ದ ಎಚ್.ಜೆ.ಭಾಭಾ ಅವರು ವಾಸುದೇವಯ್ಯನವರಲ್ಲಿ ಪ್ರೀತಿ-ಗೌರವಗಳನ್ನಿಟ್ಟಿದ್ದರು.

ವಾಸುದೇವಯ್ಯನವರು ತಮ್ಮ 26ನೇ ವಯಸ್ಸಿನಲ್ಲಿಯೇ ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಬಾಲಬೋಧೆಯನ್ನು ರಚಿಸಿದರು. ಜೊತೆಗೆ ಆರೋಗ್ಯದ ಬಗ್ಗೆ ತಿಳಿಸಿಕೊಡಲು 'ಸರಳಾರೋಗ್ಯ' ಪುಸ್ತಕವನ್ನು ಬರೆದರು. ಇವರು ಮನೆ ಮಾತಾಗಿದ್ದ ತೆಲುಗು ಭಾಷೆಯ ಜೊತೆಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ಬಂಗಾಲಿ ಭಾಷೆಗಳಲ್ಲಿ ಪರಿಣಿತಿಯನ್ನು ಸಾಧಿಸಿದ್ದರು. ಸರಳವಾದ ಗದ್ಯ, ಪದ್ಯ, ಆಕರ್ಷಕ ನಿರೂಪಣೆಗಳಿಂದ ಕೂಡಿದ್ದ ಅವರು ಬರೆದ ಬಾಲಬೋಧೆಗಳು ಬಹಳಷ್ಟು ಜನಪ್ರಿಯವಾಗಿದ್ದವು. ಅನೇಕ ವರ್ಷಗಳ ಕಾಲ ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳಾಗಿದ್ದವು.

ಮಕ್ಕಳಿಗೆ ಸುಲಭವಾಗಿ ಅಕ್ಷರಾಭ್ಯಾಸ ಹೇಗೆ ಮಾಡಿಸಬೇಕೆಂದು ಉಪಾಧ್ಯಾಯರುಗಳಿಗೆ ಅವರು 'ಬಾಲಬೋಧೆ'ಯಲ್ಲಿ ವಿವರಿಸಿ ಬರೆದಿದ್ದರು. ಮಕ್ಕಳು ಅಕ್ಷರಗಳು ಬರುವುದಕ್ಕೆ ಮುಂಚೆಯೇ ಅನೇಕ ಮಾತುಗಳನ್ನು ಕಲಿತಿರುತ್ತಾರೆ. ಅವರಾಡುವ ಮಾತುಗಳನ್ನು ಬರಹದ ಮೂಲಕ ತಿಳಿಸಿಕೊಟ್ಟು ಅವರ ಅನುಭವಕ್ಕೆ ಬರುವಂತೆ ಮಾಡಿದಲ್ಲಿ ಅವರಿಗೆ ಅಕ್ಷರಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟುತ್ತದೆ. ಹಾಗಾದಾಗ ಅವರು ಅತ್ಯಲ್ಪ ಕಾಲದಲ್ಲೇ ಅವುಗಳನ್ನು ಕಲಿಯುತ್ತಾರೆ. ಮಕ್ಕಳಿಗೆ ಅಕ್ಷರಗಳು ಬಂದ ಬಳಿಕ ಅವುಗಳನ್ನು ಪಾಠಕ್ರಮವಾಗಿ ಹೇಳುವುದನ್ನು ಕಲಿಸಬಹುದು. ಆ ಕ್ರಮದಲ್ಲಿ ಕಲಿಸುವುದೂ ಸುಲಭವಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಆ ಬಾಲ ಭಾಷೆಯಲ್ಲಿಯೇ ಮಕ್ಕಳು ಕಲಿಯುವಂತಾಗಲೂ ಸರಳ ಗದ್ಯ ಶೈಲಿಯಲ್ಲಿ 'ಬಾಲಬೋಧೆ'ಯನ್ನು ರಚಿಸಿದ್ದರಿಂದ ಅದು ಉಪಾಧ್ಯಾಯರಿಗೂ, ಮಕ್ಕಳಿಗೂ ಪ್ರಿಯವಾಗಿತ್ತು. ಕನ್ನಡವನ್ನು ಸರಳವಾಗಿ ಮಕ್ಕಳಿಗೆ ಮನಮುಟ್ಟುವಂತೆ ಹೇಳಿಕೊಡಬಹುದಾದ ಇಂತಹ ಪುಸ್ತಕಗಳು ಅದೇಕೋ ಇಂದು ಶಾಲೆಗಳಲ್ಲಿ ಮರೆಯಾಗಿವೆ. ಸರ್ಕಾರಕ್ಕೆ ಬೇಡವಾಗಿವೆ.


ಚ.ವಾಸುದೇವಯ್ಯನವರು ಬಂಗಾಲಿ ಭಾಷೆಯಲ್ಲಿ ರಜನೀಕಾಂತ ಗುಪ್ತ ಅವರು ಬರೆದಿದ್ದ "ರಾಜಪುತ್ರ ಮಹಿಮೆ' ಪುಸ್ತಕವನ್ನು 'ಆರ್ಯಕೀರ್ತಿ – ಭಾಗ 1' ಎಂಬ ಹೆಸರಿಂದ ಕನ್ನಡಕ್ಕೆ ತಂದರು. ಅದೇ ರೀತಿ ಸತ್ಯಚರಣ ಶಾಸ್ತ್ರಿಗಳ ಶಿವಾಜಿ ಮಹಾ ರಾಜನ ಚರಿತ್ರೆಯನ್ನು 'ಆರ್ಯಕೀರ್ತಿ-ಭಾಗ 2' ಹೆಸರಿನಲ್ಲಿ ಕನ್ನಡಕ್ಕೆ ತಂದರು. ಇವು ಕ್ರಮವಾಗಿ 1896 ಮತ್ತು 1898ರಲ್ಲಿ ಪ್ರಕಟವಾದವು. ಆರ್ಯ ಕೀರ್ತಿ ಗ್ರಂಥ ಕನ್ನಡ ಸಾಹಿತ್ಯಕ್ಕೆ ಇವರು ಮಾಡಿದ ಒಂದು ಮಹದುಪಕಾರವಾಗಿತ್ತು. ಸಂಸ್ಕೃತ ಮತ್ತು ಕನ್ನಡವನ್ನು ಬೆರೆಸಿರುವ ಇದರ ವಿಷಯವೂ ಹೊಸಯುಗಕ್ಕೆ ಪ್ರವರ್ತಕವಾಗಿತ್ತು. ನವಯುಗವು ಕಣ್ತೆರೆಯುತ್ತಿದ್ದ ಕಾಲದಲ್ಲಿ ಇದಕ್ಕಿಂತ ಬೇರೊಂದು ಒಳ್ಳೆಯ ಗ್ರಂಥ ಪ್ರಾಯಶಃ ಬೇರೆ ಇರಲಾರದು.

ಆ ನಂತರ ಅವರು ಮಹಾಭಾರತವನ್ನು ಆಧರಿಸಿ ಬರೆದ 'ಭೀಷ್ಮ ಚರಿತ್ರೆ'ಯಲ್ಲಿ ಭೀಷ್ಮರ ಸತ್ಯಪ್ರತಿಜ್ಞೆ ಮತ್ತು ಭಗವದ್ಭಕ್ತಿಯಿಂದ ಸಾಧ್ಯವಾಗಿದ್ದ ಮನೋದಾರ್ಢ್ಯ ಹಾಗೂ ಶಾಂತಚಿತ್ತತೆಯನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಇವರ ಸರಳ ಗದ್ಯ, ಮನಮುಟ್ಟುವ ಶೈಲಿಗಳಿಗೆ ಅವು ಸಾಕ್ಷಿಯಾಗಿವೆ. ಅದೇ ರೀತಿಯ 'ಭೀಷ್ಮ ಚರಿತ್ರೆ'ಯೂ ಕನ್ನಡ ಗದ್ಯ ಸಾಹಿತ್ಯಕ್ಕೆ ಸೇರಿದ ಒಂದು ಶ್ರೇಷ್ಠ ಗ್ರಂಥವಾಗಿತ್ತು. ಕಬ್ಬಿಣದ ಕಡಲೆಯಾಗಿದ್ದ ಹಳಗನ್ನಡದ ಕಾಲದಲ್ಲಿ, ಅಂದರೆ 1850ರ ದಶಕದಿಂದಾಚೆಗೆ ಈ ಗ್ರಂಥ ಬರೆದು ವಾಸದೇವಯ್ಯನವರು ಹೊಸಗನ್ನಡಕ್ಕೆ ತಾರಿ ತೋರಿಸಿ ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಗೆ ನಾಂದಿ ಹಾಡಿದರು. ಇಂಗ್ಲಿಷ್ ಪರಿಚಯದಿಂದಲೇ ಕನ್ನಡವನ್ನೂ ಸರಳವಾಗಿ ಎಲ್ಲರಿಗೂ ಮನಮುಟ್ಟುವಂತೆ ಬರೆಯಬಹುದೆಂಬುದನ್ನು ಅವರು ಈ ಕೃತಿಯ ಮೂಲಕ ತೋರಿಸಿಕೊಟ್ಟರು. 'ಹಳೆಯದರಲ್ಲಿ ಹೊಸತು, ಹೊಸತರಲ್ಲಿ ಹಳೆಯದನ್ನು ಕಂಡುಕೊಂಡವರು ವಾಸುದೇವಯ್ಯನವರು. ಬದುಕಿನಲ್ಲಿ ಸುಖ-ದುಃಖ, ಲಾಭ-ನಷ್ಟಗಳನ್ನು ಸ್ಥಿತಪ್ರಜ್ಞೆಯಿಂದ ಸಹಿಸಿಕೊಂಡು ತಾವು ಸಾಧಿಸಿರುವುದು ಅಲ್ಪವೆಂದು ತಿಳಿದು ಅತೀ ನಮ್ರತೆಯಿಂದ ಜೀವಿಸಿದರು. ಪರಿಪೂರ್ಣ ಜೀವನ ನಡೆಸಿ ಕನ್ನಡಕ್ಕೆ ತಮ್ಮ ಕೈಲಾದ ಸೇವೆ ಮಾಡಿದರು.'

ಸರಳತೆ ಮತ್ತು ಸಜ್ಜನಿಕೆಗೆ ಹೆಸರಾಗಿದ್ದ ವಾಸುದೇವಯ್ಯನವರಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ 1826ರಲ್ಲಿ ಬಿನ್ನವತ್ತಳೆಯನ್ನು ಸಮರ್ಪಿಸಿ ಗೌರವಿಸಿತು. ಕನ್ನಡ ಸಾಹಿತ್ಯ ಪರಿಷತ್ತು 1942ರಲ್ಲಿ ಇವರನ್ನು ಸನ್ಮಾನಿಸಿತು. ಅವರು ಓದಿದ ಸೆಂಟ್ರಲ್ ಕಾಲೇಜು ತನ್ನ ರಜತ ಮಹೋತ್ಸವದಲ್ಲಿ ಹಳೆಯ ವಿದ್ಯಾರ್ಥಿ ಚ. ವಾಸುದೇವಯ್ಯನವರಿಗೆ ಬೆಳ್ಳಿ ತಟ್ಟೆ ಅರ್ಪಿಸಿ ಗೌರವಿಸಿತು. ಇದಾದ ಸ್ವಲ್ಪವೇ ಕಾಲಾನಂತರ 1943ರ ಡಿಸೆಂಬರ್ 26ರಂದು ಅವರು ಕಾಲವಾದರು. ಅವರ ಸಾವಿನೊಂದಿಗೆ ಹೊಸಗನ್ನಡದ ಪಿತಾಮಹರಲ್ಲೊಬ್ಬರನ್ನು, ಶಿಶು ಸಾಹಿತ್ಯದ ಮೊದಲ ಕವಿಯೊಬ್ಬರನ್ನು ಕನ್ನಡ ಸಾರಸ್ವತಲೋಕ ಕಳೆದುಕೊಂಡಿತ್ತು. ಸರಳರೂ-ಸಜ್ಜನರೂ ಆಗಿದ್ದ ಕನ್ನಡದ ಹಿರಿಯರೊಬ್ಬರು ಅಂದು ಕಣ್ಮರೆಯಾಗಿದ್ದರು. ಇವರ ಪುತ್ರ ಚ. ವಾ. ರಾಘವೇಂದ್ರಯ್ಯ ಅವರು ಚ. ವಾಸುದೇವಯ್ಯನವರ ಕುರಿತ ಜೀವನ ಚರಿತ್ರೆಯೊಂದನ್ನು ಬರೆದಿದ್ದಾರೆ.

ಕಣ್ಣ ಕೋರೈಸುವ ಕಾರ್ಗಿಲ್....

(ಮೇ 17ರ ಸಂಚಿಕೆಯಿಂದ)





ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಅಲ್ಲಿಂದ ನಮ್ಮ ರಾಶಿ ಲಗೇಜಿನೊಂದಿಗೆ ಲಾಡ್ಜ್ ತಲುಪುವುದಾದರೂ ಹೇಗೆ ಸಂಬಂಧಪಟ್ಟವರು ಸರಿಯಾಗಿ ಉತ್ತರಿಸುವುದಿಲ್ಲ. ನಮ್ಮ ಬಳಿ ಲಾಡ್ಜಿನ ನಂಬರೂ ಇಲ್ಲ. ಗೂಗಲಿನಲ್ಲಿ ಹುಡುಕಾಡಿ ಆ ಲಾಡ್ಜನ್ನು ಅಂತೂಇಂತೂ ತಲುಪಿದಾಗ ಆಗಲೇ ಬೇರೆ ನಂಬರಿನ ಬಸ್ಸಿನವರು ನಮಗಾಗಿ ಕಾಯ್ದಿರಿಸಿದ್ದ ರೂಮುಗಳನ್ನು ಆಕ್ರಮಿಸಿಕೊಂಡಾಗಿತ್ತು. ನಮ್ಮ ವಾಹನದ ಡ್ರೈವರ್‌ನ ಬಾಯಲ್ಲಿ ಕೊನೆಗೆ ನೀವು ನನ್ನ ವಾಹನದಲ್ಲೇ ಮಲಗಿ, ಬೆಳಿಗ್ಗೆ ಹೋಗಿ ಎಂಬ ಮಾತು ಬಂದು, ಇಷ್ಟು ಕರುಣೆಯ ಅರ್ಧಭಾಗವೂ ನಿರ್ವಹಣಾ ಅಧಿಕಾರಿಗಳಿಗೆ ಇಲ್ಲವಲ್ಲ ಎಂದು ಬೇಸರವಾಯಿತು. ಕೊನೆಗೆ ಗುದ್ದಾಡಿ ಎರಡು ಲಾಡ್ಜುಗಳಲ್ಲಿ ಹೇಗೋ ರೂಮು ಗಿಟ್ಟಿಸಿ, ಆ ಪುಣ್ಯಾತ್ಮ ರಾತ್ರಿ 12ರಲ್ಲೂ ಊಟ ನೀಡಿದ್ದ. ರೂಮಿಗೆ ಬಂದು ಮಲಗಿದಾಗ ಒಂದು ಗಂಟೆ ಮೀರಿತ್ತು. ಮರುದಿನ ವಿಶ್ರಾಂತಿಯ ದಿನವಾಗಿತ್ತು. ಆದರೆ ನಾವು ನಮ್ಮ ಖರ್ಚಿನಿಂದಲೇ ಎರಡು ವಾಹನಗಳನ್ನು ಬಾಡಿಗೆಗೆ ಪಡೆದು ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟೆವು.

ಲಡಾಕಿನ ಅರಮನೆ, ಬೌದ್ಧ ಮೊನಾಸ್ಟ್ರಿ, ಹಾಲ್ ಆಫ್ ಫೇಮ್. ಲಡಾಕಿನ ಇತಿಹಾಸವನ್ನು ತಿಳಿಯುತ್ತಿದ್ದರೆ ಈ ದೂರದ ಪರ್ವತ ಪ್ರದೇಶದಲ್ಲಿ ಪ್ರಕೃತಿಯ ವಿಕೋಪಗಳೊಡನೆ ಸೆಣಸುತ್ತ ಕಠಿಣ ಶ್ರಮದ ಬದುಕನ್ನು ನಡೆಸುತ್ತಿರುವ ಇವರಿಗೆ ನಾವು ನೆಮ್ಮದಿಯನ್ನು ಕೊಡುವುದರಲ್ಲಿ ಅಸಫಲರಾಗಿದ್ದೇವೆ ಎಂಬ ತಪ್ಪಿತಸ್ಥ ಭಾವನೆ ಮನಸ್ಸನ್ನು ಆವರಿಸುತ್ತದೆ. ಲಡಾಖ್, ತನ್ನ ಅಸ್ತಿತ್ವವನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳಲು, ಧರ್ಮ-ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹೋರಾಡುತ್ತಲೇ ಇದೆ. ಪಾಕಿಸ್ತಾನ್-ಚೀನಾದ ಕೆಂಗಣ್ಣು ಇವರ ಮೇಲೆ ಇದ್ದೇ ಇದೆ.

ಇಲ್ಲಿ ಬೌದ್ಧ ಧರ್ಮವೇ ಪ್ರಮುಖವಾಗಿತ್ತು. ಈಗ ಅದು ಒಳಗೊಳಗೇ ಅನ್ಯ ಧರ್ಮೀಯರ ದಬ್ಬಾಳಿಕೆಯನ್ನು ಸಹಿಸುತ್ತ ನಿಟ್ಟುಸಿರು ಬಿಡುತ್ತಿದೆಯೇನೋ ಎಂದನಿಸುತ್ತದೆ. ಆ ಸ್ಥಳಗಳನ್ನು ನೋಡಿ ಸಂಜೆ ಸಿಂಧು ದರ್ಶನ ಯಾತ್ರಾ ಸಮಿತಿಯವರು ಏರ್ಪಡಿಸಿದ್ದ ಸ್ವಾಗತ ಸಮಾರಂಭಕ್ಕೆ ಹೋದೆವು. ಅಲ್ಲಿ ಕರ್ನಾಟಕದವರನ್ನು ಭೇಟಿ ಮಾಡಲಾಗದೇ, ರಾತ್ರಿ ಮತ್ಯಾರದೋ ಒಂದು ಬಸ್ಸನ್ನೇರಿ ಟೋಲು ಗೇಟ್ ಬಳಿ ಇಳಿದೆವು, ಮತ್ತೆ ನಮ್ಮ ಲಾಡ್ಜನ್ನು ತಲುಪಲು ಪರದಾಟ. ಅಂತೂ ಒಂದು ವಾಹನವನ್ನು ಬಾಡಿಗೆಗೆ ಪಡೆದು ನಮ್ಮ ರೂಮಿಗೆ ಬಂದೆವು. ಅವ್ಯವಸ್ಥೆಯು ತನ್ನ ಸಂಪೂರ್ಣ ವಿರಾಟ್ ದರ್ಶನವನ್ನು ಮಾಡಿಸುತ್ತಿತ್ತು.

ಬೆಳಿಗ್ಗೆ ಬಸ್ಸನ್ನೇರಿ ಸಿಂಧೂ ಘಾಟಿಗೆ ಬಂದೆವು. ಅಲ್ಲಿ ಸಂಭ್ರಮದ ತಯಾರಿ ನಡೆದಿತ್ತು. ಹಿಂಬದಿಯಲ್ಲಿಯೇ ಹರಿಯುತ್ತಿದ್ದ ಸಿಂಧೂ ಮಾತೆಗೆ ಕೃತಜ್ಞತೆಯಿಂದ ಪೊಡಮಟ್ಟು ಬಂದು ಕುಳಿತು, ಅಲ್ಲಿ ಆರಂಭವಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೋಡಲು ಕುಳಿತೆವು. ಈ ಯಾತ್ರೆಗೆ ಭಾರತದ ಮೂಲೆಮೂಲೆಗಳಿಂದ ಬಂದ ಜನ ಸಾಗರವನ್ನು ಅಚ್ಚರಿಯಿಂದ ನೋಡಿದೆವು.

ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ಸಮಿತಿಯಿಂದ ಕೆಲವು ಮಂದಿ ಬಂದುದು ಬಹಳ ಒಳ್ಳೆಯದಾಯಿತು. ಹಿಂದಿನ ದಿನದ ಸಮಾರಂಭದಲ್ಲಿ ಕರ್ನಾಟಕದ ಜನರಿಗೆ ಆಗುತ್ತಿದ್ದ ಅನ್ಯಾಯಗಳನ್ನು, ನಿರ್ಲಕ್ಷತೆಯನ್ನು ಕುರಿತು ನಾವು ಕೆಲವರು ದೂರು ನೀಡಿದ್ದು ಫಲಿಸಿತ್ತು. ಮೊದಲ ದಿನದಿಂದ ಆರಂಭಿಸಿ, ನಮಗಾದ ತೊಂದರೆ, ನಿರ್ಲಕ್ಷ್ಯ ಎಲ್ಲವನ್ನೂ ತೋಡಿಕೊಂಡ ಮೇಲೆ ಅವರು ಅದನ್ನು ಅರ್ಥ ಮಾಡಿಕೊಂಡು, ಸರಿಪಡಿಸುವ ಭರವಸೆ ನೀಡಿದರು. ಜೊತೆಗೆ ಅಂದು ಖರದುಂಗ್ಲಾಗೆ ಕಳುಹಿಸುವ ಏರ್ಪಾಟನ್ನೂ ಮಾಡಿದರು. ಕೇಂದ್ರದವರೆಗೂ ಈ ಅವ್ಯವಸ್ಥೆಯನ್ನು ಮುಟ್ಟಿಸುತ್ತೇವೆ, ಪ್ರಧಾನಮಂತ್ರಿಯವರೆಗೂ ಒಯ್ಯುತ್ತೇವೆ ಎಂದು ಹೇಳಿದ್ದರಿಂದಲೋ ಏನೋ ಕರ್ನಾಟಕದವರನ್ನು ಗಮನಿಸಲು ಆರಂಭಿಸಿದ್ದರು. ಆದರೆ ಬೇರೆ ಬೇರೆ ಲಾಡ್ಜ್‌ಗಳಲ್ಲಿ ಹಂಚಿಹೋಗಿದ್ದ ನಮ್ಮ ಬಸ್ಸಿನವರ ಗತಿ ಏನಾಗಿದೆಯೋ ಗೊತ್ತಾಗಲಿಲ್ಲ.

ಖರದುಂಗ್ಲ ಎನ್ನುವುದು ಭಾರತದ ಅತ್ಯಂತ ತಣ್ಣಗಿನ ಪ್ರದೇಶ. ಇಲ್ಲಿಂದ ಮುಂದೆ ಸಿಗುವುದೇ ಸಿಯಾಚಿನ್. ಅತೀ ಎತ್ತರದ ಪ್ರದೇಶವಾದ್ದರಿಂದ ಆಮ್ಲಜನಕದ ಕೊರತೆ ಇರುತ್ತದೆ. ಇಲ್ಲಿಯ ಜನಕ್ಕೆ, ಸೈನಿಕರಿಗೆ ಅದು ಬಹುಶಃ ಅಭ್ಯಾಸವಾಗಿರುತ್ತದೆ. ರೂಢಿ ಇಲ್ಲದವರಿಗೆ ಬಹಳ ಕಷ್ಟ ಆಗುತ್ತದೆ. ಇಪ್ಪತ್ತು ನಿಮಿಷಕಿಂತ ಹೆಚ್ಚು ಇಲ್ಲಿ ಇರಬೇಡಿ. ತಲೆಸುತ್ತುವಂತಾದರೆ ಕೂಡಲೇ ಕೆಳಗೆ ಇಳಿಯಲಾರಂಭಿಸಿ ಎಂದು ಅಲ್ಲಿ ಫಲಕವನ್ನು ಹಾಕಿಬಿಟ್ಟಿದ್ದಾರೆ. ಐದು ಹತ್ತು ನಿಮಿಷಗಳಲ್ಲೇ ನಮಗೆ ತಲೆಯೊಳಗೆ ಧಿಂ ಎನ್ನಲಾರಂಭಿಸಿತು. ದೇಹ ತೂರಾಡುತ್ತಿದೆಯೇನೋ ಎಂಬ ಭಾವ. ಅಂತೂ ಕೂಡಲೇ ಕೆಳಗಿಳಿಯಲು ಪ್ರಾರಂಭಿಸಿದೆವು.

ಮರುದಿನ ಬೆಳಗ್ಗೆಯೇ ನಮ್ಮನ್ನು ಪ್ಯಾಂಗಾಂಗ್ ಲೇಕಿಗೆ ಕರೆದೊಯ್ಯುವ ವ್ಯವಸ್ಥೆಯೂ ಆಗಿತ್ತು. ಆದರೆ ಅದಕ್ಕೆ ಹೋಗುವಾಗ ಬರುವಾಗ ಐದೈದು ಗಂಟೆಗಳ ಪ್ರಯಾಣ ಅಷ್ಟೆ! ಅದೂ ಎಂತಹ ರಸ್ತೆ! ಕಲ್ಲು ಬಂಡೆಗಳ ಪರ್ವತದ ನಡುವೆ ಮಾಡಿದ ಕಡಿದಾದ ಕಚ್ಚಾ ರಸ್ತೆ. ಅರ್ಧ ದಾರಿಯವರೆಗೆ ಸುಖ ಪ್ರಯಾಣ. ನಂತರ ಆರಂಭವಾಯಿತು ಕಠಿಣ ಹಾದಿಯ ಪಯಣ. ಅದರಲ್ಲಿ ಬೆನ್ನು ಮೂಳೆ ಮುರಿಯದಿದ್ದರೆ ಅದು ನಮ್ಮ ಪುಣ್ಯ ಅಷ್ಟೆ. ಇಲ್ಲಿಯ ನೋಟವಂತೂ ರುದ್ರ ರಮಣೀಯ ಎಂಬ ಮಾತಿಗೆ ನಿದರ್ಶನದಂತೆ. ನಾನಾ ಆಕಾರದ ಬೃಹತ್ ಬಂಡೆಗಳ ಸಾಲು ಸಾಲು ಸೇರುತ್ತಲೇ ಉಂಟಾಗಿರುವ ಪರ್ವತ ಶ್ರೇಣಿ. ಒಂದು ಬೆಟ್ಟದ ಆರಂಭವೆಲ್ಲೋ... ಅಂತ್ಯವೆಲ್ಲೋ... ತಿಳಿಯಲು ಸಾಧ್ಯವೇ ಇಲ್ಲ. ಬೆಟ್ಟಗುಡ್ಡಗಳು ಒಂದರ ಹೆಗಲ ಮೇಲೆ ಮತ್ತೊಂದು ಕೈ ಇಟ್ಟಂತೆ ಉದ್ದಾನುದ್ದಾನ ಸಾಲು. ಕೆಲವೆಡೆ ಎದೆ ನಡುಗಿಸುವ ಬೆಟ್ಟ ಕುಸಿತದ ಕುರುಹು. ಕೆಲವೆಡೆ ರಸ್ತೆ ಅದೆಷ್ಟು ಕಡಿದಾಗಿರುತ್ತದೆಯೆಂದರೆ ಎಡಗೈಯಲ್ಲಿ ಜೀವ ಹಿಡಿದು ಉಸಿರು ಬಿಗಿಹಿಡಿದು ಮುಂದುವರೆಯಬೇಕು. ಇಂತಹ ರಸ್ತೆಗಳಲ್ಲಿ ಏನೇ ತೊಂದರೆಗೂ ಅಳುಕಿಲ್ಲದೆ ಸಹಾಯಕ್ಕಾಗಿ ಧಾವಿಸುವ ನಮ್ಮ ಸೈನಿಕರ ಪಡೆಗೆ ಮನಸ್ಸು ಗೌರವದಿಂದ ತಲೆಬಾಗುತ್ತದೆ. ಈ ಪ್ಯಾಂಗಾಂಗ್ ಲೇಕಿನ ಬಹುಭಾಗ ಚೀನಾದಲ್ಲಿದೆ. ಭಾರತದಲ್ಲಿ ಅದರ ಮೂರನೆಯ ಒಂದು ಭಾಗ ಮಾತ್ರ ಇದೆ. ಕಣ್ಣು ಹಾಯಿಸಿದಷ್ಟು ದೂರದವರೆಗೂ ಕಾಣುವ ಸ್ವಚ್ಛ-ನೀಲ ಸಲಿಲವು ಪ್ರಯಾಣದ ಆಯಾಸವನ್ನು ಕ್ಷಣಮಾತ್ರದಲ್ಲಿ ಮರೆಸಬಲ್ಲದು. ದಡದ ಉದ್ದಕ್ಕೂ ಕುಳಿತುಕೊಳ್ಳಲು ಆಸನ, ಫೋಟೋ ತೆಗೆಸಿಕೊಳ್ಳಲು ಸ್ಕೂಟರ್ ಮುಂತಾದುವು ಕಾಣುತ್ತದೆ. ಎಷ್ಟುಹೊತ್ತು ಬೇಕಾದರೂ ಆಳವಿಲ್ಲದ ನೀರಿನಲ್ಲಿ ನೀವು ವಿಹರಿಸಬಹುದು. ಹಿಂದಿರುಗಲು ಮತ್ತೆ ಐದು ಗಂಟೆಗಳ ಪ್ರಯಾಣದ ನೆನಪಾಗಿ ಹೊರಟು, ಲಾಡ್ಜಿಗೆ ಮರಳಿದಾಗ ದೇಹಕ್ಕೆ ವಿಶ್ರಾಂತಿ ಬಿಟ್ಟು ಬೇರೇನೂ ಬೇಕಿರಲಿಲ್ಲ.

ಇಂದು ನಮ್ಮದು ಲಡಾಕಿನಲ್ಲಿ ಕೊನೆಯ ದಿನ. ಬೆಳಗ್ಗೆ ಬೇಗ ಎದ್ದು ಬ್ರೆಡ್ ತಿಂದು 8.30ಕ್ಕೆ ಕೆಲಾಂಗಿಗೆ ಹೊರಟೆವು. ರಾತ್ರಿ 9.30ರವರೆಗೆ ಬಸ್ಸು ಹೋಗುತ್ತಲೇ ಇತ್ತು. ಕೆಲಾಂಗಿನಲ್ಲಿ ಒಳ್ಳೆಯ ಲಾಡ್ಜಿನಲ್ಲಿ ನಮ್ಮ ಸಾಮಾನುಗಳನ್ನಿಟ್ಟು ಹಸಿದ ಹೊಟ್ಟೆಯನ್ನು ತುಂಬಿಸಿದ ಹೊಟೆಲಿನವನಿಗೆ ಧನ್ಯವಾದ ಅರ್ಪಿಸಿ ಮಲಗಿದ್ದೊಂದೇ ಗೊತ್ತು. ಬೆಳಗ್ಗೆ ಎಂಟಕ್ಕೆ ತಯಾರಾಗಿ ಪರೋಟ ತಿಂದು ನಾವು ದಾರಿಯಲ್ಲಿ ಅಟಲ್‌ಬಿಹಾರಿ ಟನಲ್ ಮೂಲಕ ಮನಾಲಿಗೆ ಪಯಣ ಆರಂಭಿಸಿದೆವು. ಅಲ್ಲಿಯ ಸೋಲಾಂಗ್ ವ್ಯಾಲಿಯಲ್ಲಿ ಬಸ್ ನಿಲ್ಲಿಸಿದೆವು. ಇಲ್ಲಿ ಪ್ರವಾಸಿಗಳಿಗಾಗಿಯೇ ರೋಪ್ ವೇ, ಸ್ಕೀಯಿಂಗ್, ಪ್ಯಾರಾಗ್ಲೈಡಿಂಗ್, ಯಾಕ್ ಮತ್ತು ಕುದುರೆಸವಾರಿ ಮುಂತಾದ ಅನೇಕ ಕ್ರೀಡೆಗಳ ಆಕರ್ಷಣೆಗಳಿವೆ. ಸುತ್ತಲೂ ಕಣ್ತುಂಬುವ ಹಸಿರು ಹೊದ್ದುನಿಂತ ಎತ್ತರೆತ್ತರ ಪರ್ವತಗಳು, ಎಲ್ಲಿ ನೋಡಿದರೂ ಸಿಲ್ವರ್ ಓಕ್, ಮೇಪಲ್ ವೃಕ್ಷಗಳು, ಗಿಜಿಗಿಜಿಗುಟ್ಟುವ ರಸ್ತೆಗಳು, ತಿನಿಸುಗಳನ್ನು ಮಾರುವ ಅಂಗಡಿಗಳ ಸಾಲು, ಗಡಿಬಿಡಿಯಿಂದ ಓಡಾಡುವ ದಳಾಳಿಗಳು. ಕಾಡಿನ ಪ್ರಶಾಂತತೆಯನ್ನು ಒಂದುಳಿದು ಮಿಕ್ಕೆಲ್ಲವೂ ಇಲ್ಲಿ ಲಭ್ಯ. ಮನಾಲಿ ಮತ್ತು ಕುಲುವಿನ ಮುಖ್ಯ ಆಕರ್ಷಣೆ ಎಂದರೆ ಒಂದು-ಬೆಚ್ಚಗಿನ ಉಡುಪುಗಳು, ಮತ್ತೊಂದು ಕಲಾವಿದ ರೋರಿಚ್-ದೇವಿಕಾರಾಣಿ ಅವರ ಮನೆ ಮತ್ತು ಪೇಂಟಿಂಗ್‌ಗಳು. ಅದರ ವರ್ಣನೆ ಮಾಡಲು ಪದಗಳು ಸಾಲದು. ಅಲ್ಲಿಂದ ಚಂಡೀಗಡಕ್ಕೆ ಬಂದು ಅಲ್ಲಿ ವಿಮಾನವನ್ನೇರಿ ಬೆಂಗಳೂರಿಗೆ ಹಿಂದಿರುಗಿದೆವು. ಭಾರತ ಸರ್ಕಾರ ನೀಡುವ ಪ್ರಯಾಣದ ರಿಯಾಯ್ತಿಯನ್ನು ಕರ್ನಾಟಕವನ್ನು ಬಿಟ್ಟು ಉಳಿದ ಎಲ್ಲ ರಾಜ್ಯಗಳವರೂ ಪಡೆದರು. **(ಮುಗಿಯಿತು)**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಬಕ್ರೀದ್ ಹಬ್ಬದ ಸಂಭ್ರಮದ ಸಿದ್ಧತೆ; ಕುರಿ ಸಂತೆ ಮಿಲೇನಿಯಂ ವೃತ್ತದಿಂದ ಬಾಲಭವನ ಆವರಣಕ್ಕೆ ಸ್ಥಳಾಂತರ

ಪಾಲಿಕೆ, ಪೊಲೀಸ್ ಅಧಿಕಾರಿಗಳ ಕ್ರಮಕ್ಕೆ ಶ್ಲಾಘನೆ; ಉತ್ತಮ ರೀತಿ ನಿರ್ವಹಣೆಗೆ ಸಲಹೆ ಸೂಚನೆ




ಮೈಸೂರಿನ ಬನ್ನಿಮಂಟಪ ಕವಾಯತು ಮೈದಾನದ ಬಳಿಯ ಬಾಲಭವನ ಆವರಣಕ್ಕೆ ಕುರಿ ವ್ಯಾಪಾರ ಸ್ಥಳಾಂತರಿಸುವ ಹಿನ್ನೆಲೆಯಲ್ಲಿ ನಗರ ಪಾಲಿಕೆ ವಲಯ ಕಚೇರಿ 7ರ ಆಯುಕ್ತರಾದ ರತ್ನಾಂಬಿಕಾ ಹಾಗೂ ಪೊಲೀಸ್ ಅಧಿಕಾರಿಗಳು (ಎಡಚಿತ್ರ) ಶನಿವಾರ ಪರಿಶೀಲನೆ ನಡೆಸಿದರು. ಬಲ ಚಿತ್ರದಲ್ಲಿ ಕಳೆದ ವರ್ಷ ಬಕ್ರೀದ್ ಸಂದರ್ಭದಲ್ಲಿ ಮಿಲೇನಿಯಂ ವೃತ್ತದಲ್ಲಿ ಬಳಿ ನಡೆದಿದ್ದ ಕುರಿ ಸಂತೆ ದೃಶ್ಯವನ್ನು ಕಾಣಬಹುದು

ಮೈಸೂರು, ಮೇ 23– ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಕುರಿ ವ್ಯಾಪಾರಕ್ಕೆ ಮೈಸೂರು ನಗರ ಪಾಲಿಕೆ ವತಿಯಿಂದ ಅಂತೂ ಇಂತೂ ಉತ್ತಮ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ.

ಇಷ್ಟು ವರ್ಷ ಬನ್ನಿಮಂಟಪದ ಮಿಲೇನಿಯಂ ಸರ್ಕಲ್(ಎಲ್‌ಐಸಿ ವೃತ್ತ)ನಲ್ಲಿ ನಡೆಯುತ್ತಿದ್ದ ಕುರಿ ವ್ಯಾಪಾರವನ್ನು ಸಮೀಪದ ಟಾರ್ಚ್‌ಲೈಟ್ ಪರೇಡ್ ಮೈದಾನದ ಪಕ್ಕದ ಬಾಲಭವನ ಆವರಣಕ್ಕೆ ಸ್ಥಳಾಂತರಿಸುವ ಮೂಲಕ ಸುಗಮ ವ್ಯಾಪಾರಕ್ಕೆ ಅನುವು ಮಾಡಿಕೊಡಲಾಗಿದೆ.

ಬಕ್ರೀದ್ ಹಬ್ಬ ಸಮೀಪಿಸುತ್ತಿದ್ದಂತೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಎಲ್‌ಐಸಿ ವೃತ್ತದ ಬಳಿ ಕುರಿಗಳ ಸಂತೆಯೇ ಸೇರುತ್ತಿತ್ತು. ರಸ್ತೆ ಬದಿ, ವೃತ್ತದ ಕಟ್ಟೆ, ಸೇರಿದಂತೆ ಎಲ್ಲೆಂದರಲ್ಲಿ ಕುರಿಗಳ ವ್ಯಾಪಾರ ನಡೆಸಲಾಗುತ್ತಿತ್ತು. ವಿವಿಧ ಊರುಗಳಿಂದ ಕುರಿಗಳನ್ನು ಮಾರಾಟಕ್ಕೆ ತರುತ್ತಿದ್ದವರು ವಾಹನಗಳನ್ನು ರಸ್ತೆ ಬದಿಯಲ್ಲೇ ನಿಲ್ಲಿಸುತ್ತಿದ್ದರು. ಭಾರೀ ಸಂಖ್ಯೆಯಲ್ಲಿ ವ್ಯಾಪಾರಿಗಳು ಹಾಗೂ ಗ್ರಾಹಕರು ಜಮಾಯಿಸುತ್ತಿದ್ದರು.

ಪರಿಣಾಮ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿತ್ತು. ಸಂಜೆಯಾಗುತ್ತಿದ್ದಂತೆ ವಿಪರೀತ ವಾಹನ ದಟ್ಟಣೆಯಿಂದ ವಾಹನ ಸವಾರರು ಹೈರಾಣಾಗುತ್ತಿದ್ದರು. ಆಗಾಗ ಸಣ್ಣಪುಟ್ಟ ಅಪಘಾತಗಳೂ ಸಂಭವಿಸುತ್ತಿದ್ದವು. ವಾಹನ ದಟ್ಟಣೆ ನಿರ್ವಹಿಸುವುದು ಸಂಚಾರ ಪೊಲೀಸರಿಗೆ ಸವಾಲಾಗಿ ಪರಿಣಮಿಸುತ್ತಿತ್ತು. ಅಲ್ಲದೆ ಈ ಸ್ಥಳ ವ್ಯಾಪಾರಿಗಳು ಹಾಗೂ ಗ್ರಾಹಕರಿಗೂ ಸುರಕ್ಷಿತವಾಗಿರಲಿಲ್ಲ. ನಿರಂತರ ವಾಹನ ಸಂಚಾರದ ನಡುವೆ ಅಪಾಯದ ಸ್ಥಿತಿಯಲ್ಲಿ ವ್ಯಾಪಾರ ನಡೆಸುತ್ತಿದ್ದರು. ಇದೆಲ್ಲದರ ಬಗ್ಗೆ ಪ್ರತಿವರ್ಷ 'ಮೈಸೂರು ಮಿತ್ರ'ದಲ್ಲಿ ಸಚಿತ್ರ ವರದಿ ಪ್ರಕಟಿಸಿ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನ ಸೆಳೆಯಲಾಗಿತ್ತು. ಸದ್ಯ ಈಗಲಾದರೂ ಕುರಿಗಳ ವ್ಯಾಪಾರವನ್ನು ಸೂಕ್ತ ಹಾಗೂ ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಿರುವುದು ಎಲ್ಲರಿಗೂ ಸಮಾಧಾನ ತಂದಿದೆ.

ಅಧಿಕಾರಿಗಳ ಪರಿಶೀಲನೆ: ಕುರಿ ವ್ಯಾಪಾರ ಸ್ಥಳಾಂತರಿಸುವ ಬಾಲಭವನ ಆವರಣಕ್ಕೆ ನಗರ ಪಾಲಿಕೆ ವಲಯ ಕಚೇರಿ 7ರ ಆಯುಕ್ತರಾದ ಕೆ.ಆರ್.ರತ್ನಾಂಬಿಕಾ ಅವರು ನರಸಿಂಹರಾಜ ವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್, ಎನ್‌ಆರ್ ಠಾಣೆ ಇನ್ಸ್‌ಪೆಕ್ಟರ್ ರಾಜು ಇನ್ನಿತರ ಅಧಿಕಾರಿಗಳೊಂದಿಗೆ ಶನಿವಾರ ಭೇಟಿ ನೀಡಿ, ಪರಿಶೀಲಿಸಿದರು. ಕವಾಯತು ಮೈದಾನದ ರಸ್ತೆ ಮಧ್ಯೆ ಕುರಿಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿದ್ದವರಿಗೆ ತಿಳಿ ಹೇಳಿ, ಫುಟ್‌ಪಾತ್‌ನಲ್ಲಿ ಸಾಲಾಗಿ ನಿಲ್ಲಿಸಿ, ವ್ಯಾಪಾರ ನಡೆಸುವ ಮೂಲಕ ರಸ್ತೆಯಲ್ಲಿ ಗ್ರಾಹಕರ ಓಡಾಟಕ್ಕೆ ಅನುವು ಮಾಡಿಕೊಡಬೇಕು. ತಮ್ಮ ವಾಹನಗಳನ್ನು ಸೂಕ್ತ ಸ್ಥಳದಲ್ಲಿ ನಿಲುಗಡೆ ಮಾಡಬೇಕು. ತಮ್ಮ ವ್ಯಾಪಾರದ ಸ್ಥಳವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಈ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಲಯ ಆಯುಕ್ತರಾದ ರತ್ನಾಂಬಿಕ, ಬಕ್ರೀದ್ ಮಾಸದಲ್ಲಿ ಎಲ್‌ಐಸಿ ವೃತ್ತದ ಬಳಿ ಕುರಿಗಳ ವ್ಯಾಪಾರ ಮಾಡುತ್ತಿದ್ದ ಪರಿಣಾಮ ವಾಹನ ದಟ್ಟಣೆ ಉಂಟಾಗಿ, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರು ಸಮಾಲೋಚನೆ ನಡೆಸಿ, ಕುರಿ ವ್ಯಾಪಾರವನ್ನು ಬಾಲಭವನ ಆವರಣಕ್ಕೆ ಸ್ಥಳಾಂತರಿಸುವ ಸಂಬಂಧ ಕ್ರಮ ವಹಿಸಲು ಸೂಚಿಸಿದರು. ಅದರಂತೆ ಪರಿಶೀಲನೆ ನಡೆಸಿ, ಸಾಧಕ–ಬಾಧಕಗಳ ಬಗ್ಗೆ ಪೊಲೀಸರೊಂದಿಗೆ ಚರ್ಚಿಸಿ, ಈ ಬಗ್ಗೆ ವ್ಯಾಪಾರಿಗಳಿಗೆ ಮಾಹಿತಿ ನೀಡಿ, ಇಲ್ಲಿಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು.

ವ್ಯಾಪಾರ ಸ್ಥಳಾಂತರಕ್ಕೆ ಯಾರೂ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಪಾಲಿಕೆ ಸಿಬ್ಬಂದಿ ಅದರಲ್ಲೂ ಅಭಯ ತಂಡದವರು ಉತ್ತಮ ಸಹಕಾರ ನೀಡಿದ್ದಾರೆ. ಎಲ್‌ಐಸಿ ವೃತ್ತದ ಬಳಿ ಸೇರುವ ವ್ಯಾಪಾರಿಗಳಿಗೆ ಮಾಹಿತಿ ನೀಡಿ, ಬಾಲಭವನ ಆವರಣಕ್ಕೆ ಕಳುಹಿಸುತ್ತಿದ್ದಾರೆ. ಇಲ್ಲಿಗೆ ವಾಯುವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಯಾವ ತೊಂದರೆಯೂ ಆಗದಂತೆ ನಿಗಾ ವಹಿಸಲಾಗಿದೆ. ನಿತ್ಯ ಮುಂಜಾನೆ ಪಾಲಿಕೆ ವತಿಯಿಂದ ಸ್ವಚ್ಛಗೊಳಿಸಲಾಗುತ್ತದೆ. ವ್ಯಾಪಾರಿಗಳಿಗೂ ಸ್ವಚ್ಛತೆ ಕಾಯ್ದುಕೊಳ್ಳುವಂತೆ ಸೂಚನೆ ನೀಡಲಾಗಿದೆ. ಕುರಿಗಳಿಗೆ ಹಾಕುವ ಆಹಾರ ತ್ಯಾಜ್ಯ ಇನ್ನಿತರ ಕಸವನ್ನು ಡಸ್ಟ್‌ಬಿನ್‌ನಲ್ಲೇ ಹಾಕುವಂತೆ ತಿಳಿ ಹೇಳಲಾಗಿದೆ. ವ್ಯಾಪಾರಿಗಳಿಗೆ ತಾತ್ಕಾಲಿಕ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಂಬಂಧ ಆಯುಕ್ತರ ಗಮನಕ್ಕೆ ತಂದು ಕ್ರಮ ವಹಿಸಲಾಗುವುದು. ಒಟ್ಟಾರೆ ಎಲ್ಲರ ಸಹಕಾರದಿಂದ ಕುರಿ ವ್ಯಾಪಾರವನ್ನು ಸ್ಥಳಾಂತರಿಸಿ, ಉತ್ತಮ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಮೈಸೂರಿನ ಏಳಿಗೆಗೆ ಸೇವಾ ಮನೋಭಾವನೆ ಉಳ್ಳವರು ಕಾರ್ಪೊರೇಟರ್‌ಗಳಾಗಿ ಆಯ್ಕೆಯಾಗಬೇಕು

● ಮಾಜಿ ಸಂಸದ ಪ್ರತಾಪ ಸಿಂಹ ಪ್ರತಿಪಾದನೆ ● ಪ್ರತಿಭಾನ್ವಿತ ಎಸ್‌ಎಸ್‌ಎಲ್‌ಸಿ, ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಮೇ 23(ಎಸ್‌ಪಿಎನ್)– ಮೈಸೂರು ನಗರವನ್ನು ಸಾಂಸ್ಕೃತಿಕ ನಗರಿ, ಸ್ವಚ್ಛನಗರಿ ಎಂಬೆಲ್ಲಾ ವಿಶೇಷಣಗಳಿಂದ ಕರೆಯುತ್ತೇವೆ. ಆದರೆ, ಈ ಹೆಸರನ್ನು ಉಳಿಸುವಂತಹ ಕೆಲಸ ಮಾಡುವುದು ಕಷ್ಟ. ಹಾಗಾಗಿ ಮೈಸೂರಿನ ಏಳಿಗೆಗಾಗಿ, ಬಡತನ ಹಿನ್ನೆಲೆಯಿರುವ ಹಾಗೂ ಸೇವಾ ಮನೋಭಾವವುಳ್ಳವರನ್ನು ಮುಂಬರುವ ಚುನಾವಣೆಗಳಲ್ಲಿ ನಗರ ಪಾಲಿಕೆ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಮತದಾರರಲ್ಲಿ ಮನವಿ ಮಾಡಿದರು.

ಮೈಸೂರು ನಿವೇದಿತಾನಗರದ ಎಸ್.ಆರ್.ಸುಬ್ಬರಾವ್ ಉದ್ಯಾನವನದಲ್ಲಿ ಜೆ.ಎಸ್.ಜಗದೀಶ್ ಸ್ನೇಹ ಬಳಗದ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿ ಮಾತನಾಡಿದ ಅವರು, ಶಾರದಾದೇವಿ ನಗರ, ನಿವೇದಿತಾ ನಗರ, ರಾಮಕೃಷ್ಣನಗರ ಹಾಗೂ ಜನತಾನಗರ ಭಾಗದಲ್ಲಿ ಜೆ.ಎಸ್.ಜಗದೀಶ್ ಅವರು, ಒಮ್ಮೆ ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿ ಈ ಭಾಗದಲ್ಲಿ ಉತ್ತಮ ಕೆಲಸ ಮಾಡಿದ್ದು, ಎಸ್.ಆರ್.ಸುಬ್ಬರಾವ್ ಪಾರ್ಕ್ ಅಭಿವೃದ್ಧಿಗೆ ಇವರ ಶ್ರಮ ಅಪಾರ ಎಂದು ಹೇಳಿದರು.

ಇದೇ ರೀತಿ ನಗರ ಪಾಲಿಕೆ ಮಾಜಿ ಸದಸ್ಯರಾದ ನಾಗಭೂಷಣ್, ಪ್ರಶಾಂತ್‌ಗೌಡ, ಕೆ.ವಿ.ಮಲ್ಲೇಶ್ ಇನ್ನಿತರರು ಮೈಸೂರಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇಂತಹವರನ್ನು ನಗರ ಪಾಲಿಕೆ ಸದಸ್ಯರನ್ನಾಗಿ ಆಯ್ಕೆ ಮಾಡಿದರೆ, ಶಿಸ್ತುಬದ್ಧ, ಸ್ವಚ್ಛತಾ ನಗರಿಯನ್ನಾಗಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಾರೆ.

ಅಲ್ಲದೆ, ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ 45 ಸಾವಿರ ಮತಗಳನ್ನು ಪಡೆದು ಜನ ಮನ್ನಣೆಗಳಿಸಿರುವ ಇನ್‌ಸೈಟ್ಸ್ ಐಎಎಸ್ ಕೋಚಿಂಗ್ ಸೆಂಟರ್‌ನ ಸಂಸ್ಥಾಪಕ ನಿರ್ದೇಶಕ ಜಿ.ಬಿ.ವಿನಯ್ ಕುಮಾರ್ ಸಾಧನೆ ಅಮೋಘ. ಹಣವಂತ ಕುಟುಂಬವನ್ನು ಎದುರು ಹಾಕಿಕೊಂಡು ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರ ಅಭ್ಯರ್ಥಿಯಾಗಿ 45 ಸಾವಿರ ಮತಗಳನ್ನು ಪಡೆಯುವುದು ಸುಲಭದ ಮಾತಲ್ಲ ಎಂದರು.

ನಾನು ಚಿಕ್ಕವನಿದ್ದಾಗ ಮನೆಮನೆಗೆ ಹಾಲು ಹಾಕಿಕೊಂಡು ಈ ಮಟ್ಟಕ್ಕೆ ಬೆಳೆದಿದ್ದೇನೆ. ಸ್ನಾತಕೋತ್ತರ ಪದವಿ ಪಡೆದು, ಪತ್ರಕರ್ತನಾಗಿ, ಬರಹಗಾರನಾಗಿ ಬೆಳೆದು ನಿಂತಿದ್ದೇನೆ. ನಾನು ಮೈಸೂರಿಗೆ ಬಂದಾಗ ಈ ಪ್ರದೇಶ ಹೊಸದು. ಈ ಭಾಗದ ಜನ ನನ್ನನ್ನು ಗುರುತಿಸಿ, 2 ಬಾರಿ ಸಂಸದನನ್ನಾಗಿ ಗೆಲ್ಲಿಸಿದರು. ಅವರ ನಿರೀಕ್ಷೆಗೆ ತಕ್ಕಂತೆ ಕುಡಿಯುವ ನೀರು, ಚಾಮುಂಡಿಬೆಟ್ಟದ ಅಭಿವೃದ್ಧಿ, ರಿಂಗ್‌ರೋಡ್ ಅಭಿವೃದ್ಧಿ, ವಿಮಾನ ನಿಲ್ದಾಣ ವಿಸ್ತರಣೆ ಹಾಗೂ ಹುಯಿಲಾಳು ಬಳಿ ಕ್ರಿಕೆಟ್ ಸ್ಟೇಡಿಯಂಗೆ 26 ಎಕರೆ ಗುರುತು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಈ ಕೆಲಸಕ್ಕೆ ಹಿರಿಯ ಶಾಸಕರಾದ ಜಿ.ಟಿ.ದೇವೇಗೌಡರ ಪ್ರೋತ್ಸಾಹವೂ ಇತ್ತು. ರಿಂಗ್‌ರೋಡ್‌ನಲ್ಲಿ 14 ಸಾವಿರ ಬೇವಿನ ಮರ ಸೇರಿದಂತೆ ಇತರೆ ಜಾತಿಯ ಮರಗಳನ್ನು ಬೆಳೆಸಲು ಶ್ರಮಿಸಿ ದ್ದೇನೆ. ಈ ಕಾರ್ಯವನ್ನು ಈಗಲೂ ಜನ ನೆನೆಯುತ್ತಾರೆ ಎಂದರು.

ಈ ವೇದಿಕೆಯಲ್ಲಿ ಜಿ.ಟಿ.ದೇವೇಗೌಡರ ಪುತ್ರ, ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಉಪಸ್ಥಿತರಿ ದ್ದಾರೆ. ಹೆಚ್‌ಡಿಕೆ ಮತ್ತು ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಹಾಗೂ ಜಿ.ಟಿ.ದೇವೇಗೌಡರ ಪ್ರೋತ್ಸಾಹ ದಿಂದ ಹುಣಸೂರಿಗೂ 17.5 ಟಿಎಂಸಿ ನೀರು ಹರಿಸಲು ಶ್ರಮಿಸಿದ್ದೇನೆ. ಹೀಗೆ ಅಭಿವೃದ್ಧಿ ಕುರಿತು ಸಾಲು, ಸಾಲು ಯೋಜನೆಗಳ ಹೆಸರುಗಳನ್ನು ಹೇಳಬಲ್ಲೆ. ಇದು ಸೂಕ್ತ ವೇದಿಕೆಯಲ್ಲ. ಈ ವೇದಿಕೆಯಲ್ಲಿ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸುತ್ತಿರುವ ಹಿನ್ನೆಲೆ ಯಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ಅವರ ಕರೆಯ ಮೇರೆಗೆ ಇಲ್ಲಿಗೆ ಬಂದಿದ್ದು, ಇಲ್ಲಿಯವರೆಗೆ ಜೆ.ಎಸ್.ಜಗದೀಶ್ ಅವರು 2 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಜೆ.ಎಸ್.ಜಗದೀಶ್, ಕೆವಿ.ಮಲ್ಲೇಶ್, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯೆ ಡಾ.ಯಶಸ್ವಿನಿ ಸಂಜಯ್, ಇನ್ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್, ಬಿಜೆಪಿ ಮುಖಂಡರಾದ ಸತ್ಯಾನಂದವಿಟ್ಟು, ಟಿ.ಎಸ್.ಅರುಣ್, ಪ್ರಸನ್ನಕುಮಾರ್, ಮೋಹನ್, ವೀರಶೈವ ಲಿಂಗಾಯತ ಮುಖಂಡ ಮಂಜುನಾಥ್, ರಘು, ರವಿ, ಬಿ.ಆರ್. ಶಿವಕುಮಾರ್, ರೋಟರಿ ಮೈಸೂರು ಉತ್ತರದ ಕಾರ್ಯದರ್ಶಿ ರೋ.ಆಯರಹಳ್ಳಿ ಪಿ.ವಿರೂಪಾಕ್ಷ ಉಪಸ್ಥಿತರಿದ್ದರು.

ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸಬೇಕು: ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಮತ

ಪೋಷಕರು ತಮ್ಮ ಮಕ್ಕಳ ಬದುಕು ರೂಪಿಸಬೇಕು. ಅವರ ಆಸಕ್ತಿ ಪ್ರತಿಭೆಗೆ ಅನುಗುಣವಾಗಿ ಶಿಕ್ಷಣ ಪಡೆಯಲು ಪ್ರೋತ್ಸಾಹಿಸಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಕರೆ ನೀಡಿದರು.

ವಿಶ್ವದ ಎಲ್ಲಾ ಸಾಧಕರು ಕಷ್ಟದ ಪರಿಸರದಲ್ಲೇ ಬೆಳೆದು ತಮ್ಮತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಹಾಗಾಗಿ ಮಕ್ಕಳಿಗೆ ಸಮಾಜದ ಸಮಸ್ಯೆ, ಕಷ್ಟದ ಜೀವನವನ್ನು ಪರಿಚಯ ಮಾಡಿಸಬೇಕು. ಕಳೆದ 15 ವರ್ಷಗಳಿಂದ ಜೆ.ಎಸ್.ಜಗದೀಶ್ ಅವರು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಈ ಭಾಗದ ಪ್ರತಿಭಾವಂತರನ್ನು ಗುರುತಿಸಿ, ಈ ವೇದಿಕೆ ಯಲ್ಲಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ತಂದೆ–ತಾಯಿಗಳನ್ನು ಗೌರವದಿಂದ ಕಾಣುವುದರ ಜತೆಗೆ ಚೆನ್ನಾಗಿ ನೋಡಿಕೊಳ್ಳಬೇಕು. ದೇಶದ ಉತ್ತಮ ಪ್ರಜೆಗಳಾಗಬೇಕು. ಶಿಕ್ಷಣದ ಜತೆಗೆ ಕ್ರೀಡೆ, ಪಠ್ಯೇತರ ಚಟುವಟಿಕೆಗಳಲ್ಲೂ ಭಾಗಿಯಾಗಬೇಕು ಎಂದು ತಿಳಿಸಿದರು.

ಬಿಜೆಪಿ ಮೈಸೂರು ಯುವ ಮೋರ್ಚಾಗೆ ಪದಾಧಿಕಾರಿಗಳ ನೇಮಕ


ರಾಕೇಶ್‌ಗೌಡ


ಲೋಹಿತ್


ಆರ್.ಸಚಿನ್

ಮೈಸೂರು, ಮೇ 23– ಮೈಸೂರು ನಗರ(ಜಿಲ್ಲಾ) ಯುವ ಮೋರ್ಚಾ ಅಧ್ಯಕ್ಷರಾಗಿ ಆರ್.ರಾಕೇಶ್ ಗೌಡ, ಪ್ರಧಾನ ಕಾರ್ಯದರ್ಶಿಗಳಾಗಿ ಲೋಹಿತ್ ದೊರೆಸ್ವಾಮಿ ಹಾಗೂ ಆರ್.ಸಚಿನ್ ಅವರು ಪುನರ್ ನೇಮಕಗೊಂಡಿದ್ದಾರೆ.

ಈ ಮೂವರು ಕಳೆದ ಎರಡು ವರ್ಷಗಳಿಂದ ಪಕ್ಷ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿರುವ ಹಿನ್ನೆಲೆಯಲ್ಲಿ ಇವರನ್ನು ಪುನರ್ ನೇಮಕ ಮಾಡಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರು ಆದೇಶಿಸಿದ್ದಾರೆ. ಇದಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹಾಗೂ ಮುಖಂಡ ಕವೀಶ್ ಗೌಡ ಅವರು ಸಹಕರಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸೂಚನೆ ಮೇರೆಗೆ ಸಂಘಟನಾತ್ಮಕ ದೃಷ್ಟಿಯಿಂದ ವಿವಿಧ ಮೋರ್ಚಾಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳನ್ನು ನೇಮಕಗೊಳಿಸಲಾಗಿದೆ.

ಉಚಿತ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 23–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಬಾಲಕರ ಉಚಿತ ವಿದ್ಯಾರ್ಥಿನಿಲಯದ ವತಿಯಿಂದ 2026–27ನೇ ಸಾಲಿನ ಹಾಸ್ಟೆಲ್ ಪ್ರವೇಶಾತಿಗೆ 5 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಗಳಿಂದ ಅರ್ಜಿ ಆಹ್ವಾನಿಸಿದೆ. ಅಗತ್ಯ ದಾಖಲೆಗಳೊಡನೆ ಅರ್ಜಿ ಸಲ್ಲಿಸಲು ಜೂನ್ 8 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9964476167, 9945615028 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ

1ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮ

ನೀವು ನಮ್ಮನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಗಂಡ ಶ್ರೀ ಟಿ. ನಾಗರಾಜು, ಮಗ, ಸೊಸೆ, ಎನ್. ಪ್ರಸನ್ನ & ಶ್ರೀಮತಿ ರತ್ನಕುಮಾರಿ & ಆದರ್ಶ್ ಎನ್ & ಶ್ರೀಮತಿ ರಶ್ಮಿ, ಮಗಳಾದ ಶ್ರೀಮತಿ ಎನ್. ರಮಾಮಣಿ ಮತ್ತು ಅಳಿಯ ಗೋಪಾಲ. ಡಿ, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು, ಮೈಸೂರು

ಸಾರ್ವಜನಿಕ ಪ್ರಕಟಣೆ

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಕ್ಯಾತನಹಳ್ಳಿ ಅಂಚೆ, ಎಲೆಕೆರೆ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ.ಚೂಡಾಮಣಿ.ವಿ.ಕೆ ರವರು ಬೆಂಗಳೂರು ನಗರ, ರಾಜಾಜಿನಗರ, 2ನೇ ಬ್ಲಾಕ್, 34ನೇ ಎ ಕ್ರಾಸ್, ಮನೆ ನಂ.173/6 ರಲ್ಲಿ ವಾಸವಾಗಿರುವ ಶ್ರೀಮತಿ. ಸೀಮಾ. ಎಸ್ ರವರಿಂದ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಪತ್ರದ ಮೂಲಕ ಖರೀದಿಸಿಕೊಳ್ಳಲಿದ್ದಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ತಕರಾರು, ಹಕ್ಕು, ನ್ಯಾಯಾಲಯದ ವ್ಯಾಜ್ಯ ಅಥವಾ ಆಕ್ಷೇಪಣೆ ಹೊಂದಿದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 10 (ಹತ್ತು) ದಿನಗಳೊಳಗೆ ತಮ್ಮ ಕಾನೂನುಬದ್ಧ ದಾಖಲಾತಿಗಳೊಂದಿಗೆ ಕೆಳಕಂಡ ವಿಳಾಸದ ವಕೀಲರಿಗೆ ಲಿಖಿತವಾಗಿ ಸಲ್ಲಿಸಬೇಕು. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಷೆಡ್ಯೂಲ್ ಸ್ವತ್ತು ಯಾವುದೇ ವಿಧವಾದ ಬಾಧ್ಯತೆ ಅಥವಾ ಹಕ್ಕುಗಳಿಂದ ಮುಕ್ತವಾಗಿದೆ ಎಂದು ಪರಿಗಣಿಸಿ ಶುದ್ಧ ಕ್ರಯಪತ್ರವನ್ನು ನೋಂದಣಿ ಮಾಡಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ. ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್, SITE NO.7722, Katha No.5954802563, 30x40 ವಿಸ್ತೀರ್ಣವುಳ್ಳ ಖಾಲಿ ನಿವೇಶನ.

ಸಹಿ/– ನವೀನ್.ಎಸ್, ಬಿ.ಎಸ್.ಸಿ., ಎಲ್.ಎಲ್.ಬಿ, ವಕೀಲರು
ಕಛೇರಿ ವಿಳಾಸ : ನಂ. 2801, 2ನೇ ಮಹಡಿ, 2ನೇ ಹಂತ, ಜಯನಗರ, ಮೈಸೂರು. ಮೊ. ನಂ. 9740434246.

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ನಂದೀಶ್. ಎಂ. ಹೆಚ್. ಬಿನ್ ಹನುಮಂತೇಗೌಡ, ಇವರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಕೆ.ಎಸ್.ಪ್ರಭಾಮಣಿ ವಾಸ ಮನೆ. ನಂ.401, ಅಹಿಂಸಾ ಮಾರ್ಗ, ಸಿದ್ಧಾರ್ಥನಗರ, ಮೈಸೂರು ಇವರ ಹಕ್ಕು ಭಾಧ್ಯತೆ ಅಧಿಕಾರ ಮಾಲೀಕತ್ವಕ್ಕೆ ಒಳಪಟ್ಟು ಸ್ವಾಧೀನದಲ್ಲಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡುತ್ತಿರುತ್ತಾರೆ. ಆದ್ದರಿಂದ ಷೆಡ್ಯೂಲ್ ಸತ್ತಿಗೆ ಸಂಬಂಧಿಸಿದಂತೆ ಯಾರಿಗಾದರು ಹಕ್ಕು ಭಾಧ್ಯತೆ, ಅಧಿಕಾರ, ಹಿತಾಸಕ್ತಿ, ಮಾಲೀಕತ್ವ ಭಾಗಾಂಶ ಅಥವಾ ದಾವೆಗಳು ಇದ್ದಂತಹ ಪಕ್ಷದಲ್ಲಿ ಸೂಕ್ತ ದಾಖಲೆಯೊಂದಿಗೆ ತಮ್ಮ ತಕರಾರುಗಳನ್ನು ಪತ್ರಿಕೆಯಲ್ಲಿ ಪ್ರಕಟಣೆ ಗೊಂಡ 7 ದಿನಗಳ ಒಳಗಾಗಿ ವಕೀಲರ ಕಚೇರಿಗಾಗಲಿ ಅಥವಾ ನಮ್ಮ ಕಕ್ಷಿದಾರರಿಗಾಗಲಿ ಸಲ್ಲಿಸತಕ್ಕದ್ದು. ಒಂದು ವೇಳೆ ಮೇಲ್ಕಂಡ ನಿಗದಿತ ಕಾಲದಲ್ಲಿ ಯಾವುದೇ ತಂಟೆ ತಕರಾರು ಬರದಿದ್ದ ಪಕ್ಷದಲ್ಲಿ ಬೇರೆ ಯಾರಿಗೂ ಷೆಡ್ಯೂಲ್ ಸ್ವತ್ತಿಗೆ ಅನುಗುಣವಾಗಿ ಹಕ್ಕು ಭಾಧ್ಯತೆ, ಮಾಲೀಕತ್ವ ಮತ್ತು ಸ್ವಾಧೀನ ಇರುವುದಿಲ್ಲವೆಂದು ತಿಳಿದು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದು ಕೊಳ್ಳುತ್ತಾರೆಂದು ಈ ಮೂಲಕ ತಿಳಿಯ ಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಆಲನಹಳ್ಳಿ ಬಡಾವಣೆ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ಸೇರಿದ ಸ್ವತ್ತಿನ ಸಂಖ್ಯೆ. 4437569055, ನಿರ್ಧರಣಾ ಸಂಖ್ಯೆ 1125/1083 ನಿವೇಶನ ನಂಬರ್ 11 ಪೂರ್ವ ಪಶ್ಚಿಮ 9 ಮೀಟರ್, ದಕ್ಷಿಣೋತ್ತರ 12 ಮೀಟರ್ ಒಟ್ಟು ವಿಸ್ತೀರ್ಣ 108 ಚದುರ ಮೀಟರ್‌ವುಳ್ಳ ನಿವೇಶನಕ್ಕೆ ಚಕ್ಕುಬಂದಿ; ಪೂರ್ವಕ್ಕೆ– ನಿವೇಶನ ಸಂಖ್ಯೆ 10, ಪಶ್ಚಿಮಕ್ಕೆ– ನಿವೇಶನ ಸಂಖ್ಯೆ 12, ಉತ್ತರಕ್ಕೆ– ನಿವೇಶನ ಸಂಖ್ಯೆ 6, ದಕ್ಷಿಣಕ್ಕೆ– 9 ಮೀಟರ್ ರಸ್ತೆ.

ಸಹಿ/– ಹೆಚ್.ಎಂ.ಮಾದೇಗೌಡ, ವಕೀಲರು, ನಂ.2393, ಎಸ್.ಜೆ.ಕಾಂಪ್ಲೆಕ್ಸ್, ನ್ಯೂ ಕಾಂತರಾಜೇ ಅರಸ್ ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು–570009
ಮೊಬೈಲ್: 9341392621

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷೀದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು, ಮೈಸೂರು ಸಿಟಿ, ಸಿದ್ಧಾರ್ಥನಗರದ ಕೈವಲ್ಯ ಮಾರ್ಗದ ಮನೆ ನಂ. 9/4 ರಲ್ಲಿ ವಾಸವಾಗಿರುವ ಜೆ. ಎಲ್. ರಾಮ ತಂತ್ರಿ ರವರ ಮಗ ಶ್ರೀ ಸುಬ್ರಮಣ್ಯ ಆರ್ ಹಾಗೂ ಬೆಂಗಳೂರು ನಿವಾಸಿಗಳಾದ ಶ್ರೀ. ರಾಘವೇಂದ್ರ ತಂತ್ರಿ ಮತ್ತು ಶ್ರೀ ಲಕ್ಷ್ಮೀಶ ತಂತ್ರಿ ಇವರಿಂದ ಖರೀದಿಸುತ್ತಿದ್ದು/ಕ್ರಯಕ್ಕೆ ಪಡೆಯುತ್ತಿದ್ದು ಸದರಿ ಸ್ವತ್ತಿನಲ್ಲಿ ಹಾಗೂ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಹಕ್ಕು, ಅಧಿಕಾರ, ಹಿತಾಸಕ್ತಿಗಳಿಗೆ ಸಂಬಂಧ ಪಟ್ಟಂತೆ ಯಾರದೆ, ಯಾವುದೇ ತರಹದ ಹಕ್ಕು, ಅಧಿಕಾರ, ಹಿತಾಸಕ್ತಿಗಳು ಇದ್ದಲ್ಲಿ ಸದರಿ ತಕರಾರು/ಆಕ್ಷೇಪಣೆಗಳ ಬಗ್ಗೆ ಖುದ್ದಾಗಿ ಅಥವಾ ವಕೀಲರ ಮೂಲಕ 7 (ಏಳು) ದಿನಗಳೊಳಗೆ ಸಲ್ಲಿಸುವುದು. ಸದರಿ ದಿನಗಳಲ್ಲಿ ಹಕ್ಕು ಹಿತಾಸಕ್ತಿಗಳ ಬಗ್ಗೆ ಯಾವುದೇ ತಕರಾರು / ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ ನಮ್ಮ ಕಕ್ಷೀದಾರರು ಕಾನೂನಿನಡಿ ಷೆಡ್ಯೂಲ್ ಸ್ವತ್ತನ್ನು ವ್ಯವಹರಿಸಲು ಮುಂದುವರಿಯುವರು. ವ್ಯವಹರಿಸಿದ ನಂತರ ಯಾವುದೇ ತಕರಾರು / ಆಕ್ಷೇಪಣೆಗಳು ಬಂದಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಮಂಡಿ ಮೊಹಲ್ಲಾದ ಬನ್ನಿಮಂಟಪ ಬಡಾವಣೆಯ ಹೊಸ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ನಿವೇಶನ ನಂ. 48, ಮನೆ ನಂ. 3843/1: ಹೊಸ ನಂ. ಎಂ. 3 ರ ಪೂರ್ವ ಪಶ್ಚಿಮ 110 ಅಡಿಗಳು, ಉತ್ತರ ದಕ್ಷಿಣ 86+80/2 ಅಡಿಗಳು ಉಳ್ಳ ಈಗ ಖಾಲಿ ನಿವೇಶನ. ಇದಕ್ಕೆ ಚಕ್ಕುಬಂದಿ.
ಪೂರ್ವಕ್ಕೆ : ನಿವೇಶನ ನಂ .53 ಮತ್ತು 54.
ಪಶ್ಚಿಮಕ್ಕೆ : ಹೊಸ ಸಯ್ಯಾಜಿ ರಾವ್ ರಸ್ತೆ.
ಉತ್ತರಕ್ಕೆ : ನಿವೇಶನ ನಂ.49.
ದಕ್ಷಿಣಕ್ಕೆ : ನಿವೇಶನ ನಂ.47.

ಸಹಿ/– ಗೌಡ ರಾಜಶ್ರೀ ಗೋವಿಂದ್, ಬಿ.ಎಸ್ಸಿ, ಎಲ್.ಎಲ್.ಬಿ, ವಕೀಲರು, ರೋಲ್ ನಂ. 1110/99, #296/3, ಲಕ್ಷ್ಮಿ ವಿಲಾಸ ರಸ್ತೆ, ಕರೂರು ವೈಶ್ಯ ಬ್ಯಾಂಕ್ ಎದುರು, ದೇವರಾಜ ಮೊಹಲ್ಲಾ, ಮೈಸೂರು–04.
ಮೊ: 9880479678, 9900655615

ಮೈಸೂರಲ್ಲಿ ಜೋರು ಮಳೆಗೆ ರಸ್ತೆಗಳು ಜಲಮಯ; ವಾಹನ ಚಾಲಕರ ಪರದಾಟ


ಸಬ್ ಅರ್ಬನ್ ಬಸ್ ನಿಲ್ದಾಣದ ಮುಂಭಾಗದ ರಸ್ತೆ ಮೇಲೆ ಕೊಳಚೆ ನೀರು ನಿಂತಿರುವುದು.

ಮೈಸೂರು, ಮೇ 23(ವಿವಿಹೆಚ್)– ಮೈಸೂರು ನಗರದಲ್ಲಿ ಇಂದು ಸಂಜೆ ಅರ್ಧ ಗಂಟೆಗೂ ಹೆಚ್ಚುಕಾಲ ಸುರಿದ ಜೋರು ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. ವಿಶಾಲಿಕ ಸುರಿದ ಮಳೆಯಿಂದ ಪ್ರಮುಖ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಯಿತು.

ರಾಮಸ್ವಾಮಿ ವೃತ್ತ, ನಜರಬಾದ್, ಗಂಗೋತ್ರಿ ಲೇಔಟ್, ಕೆ.ಜಿ.ಕೊಪ್ಪಲು, ಒಂಟಿಕೊಪ್ಪಲು, ಸರಸ್ವತಿಪುರಂ, ವಿದ್ಯಾರಣ್ಯಪುರಂ, ಲಕ್ಷ್ಮೀಪುರಂ, ಅಗ್ರಹಾರ ಸೇರಿದಂತೆ ನಗರದ ಹಲವೆಡೆ ಸುರಿದ ಜೋರು ಮಳೆಗೆ ರಸ್ತೆ ಬದಿಯಲ್ಲಿ ಅಲ್ಲಲ್ಲಿ ನೀರು ನಿಂತಿತ್ತು ಈ ಭಾಗದಲ್ಲಿ ಮಳೆ ತೀವ್ರವಾಗಿದ್ದ ಕಾರಣ ನಗರದ ಕೆಲ ಭಾಗಗಳಲ್ಲಿ ಒಳಚರಂಡಿಗಳು ತುಂಬಿ ಹರಿದವು. ಅನೇಕ ಕಡೆ ಮ್ಯಾನ್‌ಹೋಲ್‌ಗಳಲ್ಲಿ ನೀರು ಉಕ್ಕಿ ಬಂದ ದೃಶ್ಯಗಳು ಕಂಡುಬಂದವು. ಮಳೆಯ ಜೊತೆ ಗಾಳಿ ಸಹ ಜೋರಾಗಿದ್ದರಿಂದ ಕೆಲವೆಡೆ ಮರದ ಕೊಂಬೆಗಳು ರಸ್ತೆಗೆ ಬಿದ್ದಿದ್ದು, ಕಂಡುಬಂದಿತು.

ಕೆಸರಾದ ರಸ್ತೆಗಳು: ಹಾರ್ಡಿಂಜ್ ಸರ್ಕಲ್ ಬಳಿ ರಸ್ತೆಯಲ್ಲಿನ ಎರಡು ಬದಿಗಳಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಸುರಿದ ಜೋರು ಮಳೆಗೆ ಅರಮನೆ ಮುಂಭಾಗದ ರಸ್ತೆಯಲ್ಲಿ ಬೈಕ್‌ಗಳು ಸಂಚರಿಸಲು ಪರದಾಡಿದವು. ಇತ್ತ ಹೂಳೆತ್ತಲಾದ ಮಣ್ಣಿನಿಂದಾಗಿ ಹಾರ್ಡಿಂಜ್ ಬಳಿಯ ರಸ್ತೆ ಒಂದು ಬದಿ ಸಂಪೂರ್ಣವಾಗಿ ಕೆಸರುಮಯವಾಗಿತ್ತು.

ಟ್ರಾಫಿಕ್: ಇನ್ನೂ ನಾಲ್ಕನೇ ಶನಿವಾರ ರಜೆ ದಿನವಾಗಿದ್ದರಿಂದ ಮೈಸೂರಿನ ಬಹುತೇಕ ರಸ್ತೆಗಳು ವಾಹನ ದಟ್ಟಣೆಯಿಂದ ಹೈರಾಣಾಗಿದ್ದವು. ಅರಮನೆ ಮುಂಭಾಗದ ರಸ್ತೆ, ದಕ್ಷಿಣ ದ್ವಾರದ ಮೂಲಕ ಸಾಗುವ ರಸ್ತೆಯಲ್ಲಿ ಸುಮಾರು ಅರ್ಧ ಕಿ.ಮೀಗೂ ಹೆಚ್ಚು ದೂರ ಟ್ರಾಫಿಕ್ ಜಾಮ್ ಉಂಟಾಗಿತ್ತು. ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಒಂದು ಕಿ.ಮೀ ಟ್ರಾಫಿಕ್ ಜಾಮ್ ಆಗಿತ್ತು. ಕಾರು, ಬೈಕ್ ಹಾಗೂ ಆಟೋ ಚಾಲಕರು ಮುಂದೆ ಸಾಗಲು ಪರದಾಡಿದರು.

ಒಕ್ಕಲಿಗ ನಾಯಕರು ಕಪ್ಪುಚುಕ್ಕೆ ಇಲ್ಲದೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವುದು ಸಮುದಾಯಕ್ಕೆ ಹೆಮ್ಮೆ ವಿಷಯ

ಸುಳ್ಯದ ಕೊಡಿಯಾಲಬೈಲು ಗೌಡ ಸಮುದಾಯ ಭವನದಲ್ಲಿ ನಡೆದ ಸಮಾರಂಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಅಭಿಮತ


ದಕ್ಷಿಣ ಕನ್ನಡ ಜಿಲ್ಲೆ ಸುಳ್ಯದ ಕೊಡಿಯಾಲಬೈಲು ಗೌಡ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಶ್ರೀ ಲಕ್ಷ್ಮೀ ಸಹಿತ ಸತ್ಯನಾರಾಯಣ ದೇವರ ಪೂಜೆ, ವಧು–ವರರ ನೂತನ ಗೃಹ ಉದ್ಘಾಟನೆ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಪಿ.ಸಿ.ಜಯರಾಮ ಅವರಿಗೆ ಸನ್ಮಾನ ಸಮಾರಂಭದಲ್ಲಿ ಐದು ದಶಕಗಳ ದಾಂಪತ್ಯ ಜೀವನ ಪೂರೈಸಿದ ಹಿರಿಯ ಜೋಡಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಮೇ 23– ರಾಜ್ಯದಲ್ಲಿ ಈವರೆಗೆ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿರುವ ಒಕ್ಕಲಿಗ ಸಮುದಾಯದ ನಾಯಕರು, ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಕಾರ್ಯ ನಿರ್ವಹಿಸಿರುವುದು ಸಮಾಜಕ್ಕೆ ಹೆಮ್ಮೆ ತಂದಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯದ ಕೊಡಿಯಾಲಬೈಲು ಗೌಡ ಸಮುದಾಯ ಭವನದಲ್ಲಿ ಗೌಡ ಯುವಸೇವಾ ಸಂಘ ಹಾಗೂ ಗೌಡ ಸಮುದಾಯ ಭವನ ನಿರ್ವಹಣಾ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀ ಲಕ್ಷ್ಮೀ ಸಹಿತ ಸತ್ಯನಾರಾಯಣ ದೇವರ ಪೂಜೆ, ವಧು–ವರರ ನೂತನ ಗೃಹ ಉದ್ಘಾಟನೆ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಪಿ.ಸಿ.ಜಯರಾಮ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಹಳ್ಳಿಯಲ್ಲಿ ಹುಟ್ಟಿ–ಬೆಳೆದ ಹೆಚ್.ಡಿ. ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಅಪಾರ ಕೊಡುಗೆ ನೀಡಿದರು. ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ, ಎಸ್.ಎಂ.ಕೃಷ್ಣ ಅವರು ವಿಕಾಸಸೌಧವನ್ನು ಕಟ್ಟಿದರು. ಡಿ.ವಿ.ಸದಾನಂದಗೌಡ, ಹೆಚ್.ಡಿ.ಕುಮಾರಸ್ವಾಮಿ ಅವರು ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸಿ, ಜನ ಮೆಚ್ಚುಗೆ ಪಡೆದರು. ಒಕ್ಕಲಿಗ ಸಮಾಜದ ನಾಯಕರು ನೀಡಿರುವ ಉತ್ತಮ ಆಡಳಿತ ಜನಮಾನಸದಲ್ಲಿ ಹಸಿರಾಗಿದೆ ಎಂದರು.

ಸಹಕಾರಿಗಳು ಸಮಾಜ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬಂದಿರುವುದು ಸಂತೋಷದ ಸಂಗತಿ. ಸಮಾಜಕ್ಕೆ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಒಗ್ಗಟ್ಟು ಕಾಪಾಡಿಕೊಂಡಿರುವುದು ಶ್ಲಾಘನೀಯ. ಸಮಾಜದ ಕೆಲಸ ಎಂದರೆ ಅನೇಕರು ಸ್ವಾರ್ಥಿಗಳಾಗುತ್ತಾರೆ. ಆದರೆ, ಡಾ.ವೆಂಕಟರಮಣಗೌಡರು, ರೇಣುಕಾ ಪ್ರಸಾದ್ ಅವರೊಂದಿಗೆ ಎಲ್ಲರೂ ಕೈಜೋಡಿಸಿರುವುದು ಅನುಕರಣೀಯ ಎಂದು ಅಭಿಪ್ರಾಯಿಸಿದರು.

ಸುಳ್ಯ ಭಾಗದಲ್ಲಿ ನರ್ಸಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು ಆರಂಭಿಸಲಾಗಿದೆ. ವೈದ್ಯಕೀಯ ಕಾಲೇಜಿನ ಮೂಲಕ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ. ಹಳ್ಳಿಯ ರೈತರ ಮಕ್ಕಳು ವಿದ್ಯಾವಂತರಾಗಬೇಕು, ವೈದ್ಯಕೀಯ ಶಿಕ್ಷಣ ಪಡೆಯಬೇಕೆಂಬ ಅಭಿಲಾಷೆಯಿಂದ ಡಾ.ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ ಅವರು ಬೆಳ್ಳೂರು ಬಳಿ ಮೆಡಿಕಲ್ ಕಾಲೇಜು ಸ್ಥಾಪಿಸಿದರು. ಆ ಸಂಸ್ಥೆಯನ್ನು ಇಂದಿನ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸರ್ವರ ಒಳಿತಿಗಾಗಿ ಆಯೋಜಿಸಿರುವ ಸತ್ಯನಾರಾಯಣ ಪೂಜೆಯಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ಇಂತಹ ಸತ್ಕಾರ್ಯಗಳು ನಿರಂತರವಾಗಿ ನಡೆಯಬೇಕು. ಈ ಸಮಾರಂಭದಲ್ಲಿ ಐದು ದಶಕ ದಾಂಪತ್ಯ ಜೀವನ ನಡೆಸಿದ ದಂಪತಿಗಳನ್ನು ಅಭಿನಂದಿಸುವ ಮೂಲಕ ಮುಂದಿನ ಸುಖಕರ ಜೀವನಕ್ಕೆ ಆಶಿಸುತ್ತಿರುವುದು ಮಾದರಿಯಾಗಿದೆ ಎಂದರು.

ಪ್ರಸ್ತುತ ರೈತರ ಬದುಕು ಕಷ್ಟಕರವಾಗಿದೆ. ದಕ್ಷಿಣ ಕನ್ನಡ, ಚಿಕ್ಕಮಗಳೂರು ಭಾಗದಲ್ಲಿ ಅಡಿಕೆಗೆ ಕೊಳೆರೋಗ ಬಾಧಿಸುತ್ತಿದೆ. ಅತಿವೃಷ್ಟಿಯಾಗಲೀ ಅನಾವೃಷ್ಟಿಯಾಗಲೀ ರೈತರು ಸಂಕಷ್ಟ ಎದುರಿಸುತ್ತಾರೆ. ಕೃಷಿಯನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಒಕ್ಕಲಿಗ ಸಮುದಾಯದವರು ತೊಂದರೆ ಅನುಭವಿಸುತ್ತಿದ್ದಾರೆ. ರಸಗೊಬ್ಬರದ ಬೆಲೆ ಹೆಚ್ಚಾಗಿದೆ ರೈತರು ಯಾವುದೇ ಬೆಳೆ ಬೆಳೆದರೂ ಲಾಭದಾಯಕವಾಗುತ್ತಿಲ್ಲ ಯಾವ ಸರ್ಕಾರ ಬಂದರೂ ರೈತರ ಬದುಕನ್ನು ಸ್ಥಿರವಾಗಿಸುವ ಯೋಜನೆಗಳನ್ನು ರೂಪಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಒಕ್ಕಲಿಗ ಸಮುದಾಯ ಒಕ್ಕಲು ಮಾಡುವಾಗ ಪೂಜೆ ಮಾಡುವ ಮೂಲಕ ಸಮಾಜದ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುತ್ತಿದ್ದೇ ಹಾಗೆಯೇ ನೀವು ಸ್ವಾಭಿಮಾನಿಗಳು, ಗಟ್ಟಿಯಾಗಿದ್ದೀರಿ. ಸುಳ್ಯದಲ್ಲಿ ಕಮ್ಮಿಯಿದ್ದರೂ ಶ್ರದ್ಧೆ, ಗೌರವ, ಭಕ್ತಿ ಮುಖ್ಯ ಎಂಬ ಸಂದೇಶ ಸಾರಿದ್ದೀರಿ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುವ ಮೂಲಕ ಸಮಾಜದ ಪರಂಪರೆ, ಇತಿಹಾಸವನ್ನು ಉಳಿಸುವ ಕೆಲಸವಾಗಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷರಾದ ಡಾ.ರೇಣುಕಾ ಪ್ರಸಾದ್, ಡಾ.ಜ್ಯೋತಿ ಪ್ರಸಾದ್, ಗೌಡ ಯುವ ಸೇನಾ ಅಧ್ಯಕ್ಷ ಗಂಗಾಧರ್, ಸಹಕಾರಿ ರತ್ನ ಪಿ.ಸಿ.ಜಯರಾಮ್, ಜೆಡಿಎಸ್ ಜಿಲ್ಲಾಧ್ಯಕ್ಷ ಜಾಕಿ ಮಾಧವಗೌಡ, ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಸೇರಿದ ರಾಘವ್ ಚಡ್ಡಾ ಈಗ ರಾಜ್ಯಸಭೆಯ ಅರ್ಜಿಗಳ ಸಮಿತಿ ಅಧ್ಯಕ್ಷ



ನವದೆಹಲಿ: ಇತ್ತೀಚೆಗೆ ಆಮ್ ಆದ್ಮಿ ಪಕ್ಷ ತೊರೆದು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರನ್ನು ಮೇಲ್ಮನೆಯ ಅರ್ಜಿಗಳ ಸಮಿತಿಯ ಹೊಸ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಅರ್ಜಿಗಳ ಸಮಿತಿಯನ್ನು ಪುನರ್‌ರಚಿಸಿದ ನಂತರ, ರಾಜ್ಯಸಭಾ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಅವರು ಸದನದ 10 ಸದಸ್ಯರನ್ನು ಸಮಿತಿಗೆ ನಾಮನಿರ್ದೇಶನ ಮಾಡಿದರು.

ರಾಘವ್ ಚಡ್ಡಾ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ರಾಜ್ಯಸಭೆ ಅಧಿಸೂಚನೆಯಲ್ಲಿ ತಿಳಿಸಿದೆ. ಮೇ 20 ರಿಂದ ಜಾರಿಗೆ ಬರುವಂತೆ ರಾಜ್ಯಸಭಾ ಅಧ್ಯಕ್ಷರು ಸಮಿತಿಯನ್ನು ಪುನರ್‌ರಚಿಸಿದ್ದಾರೆ ಎಂದು ಅಧಿಸೂಚನೆ ಹೇಳಿದೆ.

ರಾಘವ್ ಚಡ್ಡಾ ನೇತೃತ್ವದ ಸಮಿತಿಯ ಸದಸ್ಯರು: ಹರ್ಷ್ ಮಹಾಜನ್, ಗುಲಾಮ್ ಅಲಿ, ಶಂಭು ಶರಣ್ ಪಟೇಲ್, ಮಯಂಕ್ ಕುಮಾರ್ ನಾಯಕ್, ಮಸ್ತಾನ್ ರಾವ್ ಯಾದವ್ ಬೀಡಾ, ಜೆಬಿ ಮಾಥರ್ ಹಿಶಾಮ್, ಸುಭಾಶಿಶ್ ಖುಂಟಿಯಾ, ರುಂಗ್ವ್ರಾ ನರ್ಜಾರಿ ಮತ್ತು ಸಂತೋಷ್ ಕುಮಾರ್ ಪಿ.

ಮತ್ತೊಂದು ಅಧಿಸೂಚನೆಯಲ್ಲಿ, ರಾಜ್ಯಸಭೆಯ ಅಧ್ಯಕ್ಷರು, ಮೇ 20, 2026 ರಂದು, ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆ, 2026ರ ಜಂಟಿ ಸಮಿತಿಯ ಸದಸ್ಯರಾಗಿ ರಾಜ್ಯಸಭಾ ಸದಸ್ಯರಾದ ಡಾ ಮೇನಕಾ ಗುರುಸ್ವಾಮಿ ಅವರನ್ನು ನಾಮನಿರ್ದೇಶನ ಮಾಡಿದ್ದಾರೆ.

17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಬಾಕ್ಸಿಂಗ್ ಕೋಚ್ ವಿರುದ್ಧ ಪೋಕ್ಸೋ ಕೇಸ್

ಬೆಂಗಳೂರು: ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದ 17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕುಟುಂಬಕ್ಕೆ ಬೆದರಿಕೆ ಹಾಕಿರುವ ಆರೋಪದ ಮೇಲೆ 50 ವರ್ಷದ ಬಾಕ್ಸಿಂಗ್ ಕೋಚ್ ವಿರುದ್ಧ ಸಂಪಂಗಿರಾಮನಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕೇಸ್ ದಾಖಲಿಸಲಾಗಿದೆ.



17 ವರ್ಷದ ಬಾಲಕಿಯ ತಾಯಿ ನೀಡಿದ ದೂರಿನ ಪ್ರಕಾರ, ಮೇ 17 ರಂದು, ತನ್ನ ಮಗಳು ಬಾಕ್ಸಿಂಗ್ ಸ್ಪರ್ಧೆಗಾಗಿ ಚೆನ್ನೈಗೆ ಹೋದಾಗ, ತರಬೇತುದಾರ ಅವಳನ್ನು ತನ್ನ ಖಾಸಗಿ ಕೋಣೆಗೆ ಕರೆದುಕೊಂಡು ಹೋಗಿ ಅವಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ.

ಆರೋಪಿ, ಈ ವಿಷಯವನ್ನು ಯಾರಿಗೂ ಹೇಳದಂತೆ ಬಾಲಕಿಗೆ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಎಫ್‌ಐಆರ್ ಪ್ರಕಾರ, ಹದಿಹರೆಯದ ಬಾಲಕಿ ಸುಮಾರು 10 ವರ್ಷಗಳಿಂದ ತರಬೇತಿ ಪಡೆಯುತ್ತಿದ್ದು, ಸುಮಾರು ನಾಲ್ಕು ವರ್ಷಗಳಿಂದ ತರಬೇತುದಾರ ತನ್ನೊಂದಿಗೆ ಅನುಚಿತವಾಗಿ ವರ್ತಿಸಲು ಆರಂಭಿಸಿದರು. ಕಳೆದ ಐದರಿಂದ ಆರು ತಿಂಗಳುಗಳಲ್ಲಿ ಈ ನಡವಳಿಕೆ ಮತ್ತಷ್ಟು ತೀವ್ರಗೊಂಡಿತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಫೋಮ್ ತಯಾರಿಕಾ ಕಾರ್ಖಾನೆಯಲ್ಲಿ ಬೆಂಕಿ ಅವಘಡ

ಲಕ್ಷಾಂತರ ಮೌಲ್ಯದ ಪದಾರ್ಥ ಅಗ್ನಿಗಾಹುತಿ; ಸದ್ಯ ಪ್ರಾಣಹಾನಿ ಇಲ್ಲ


ಫೋಮ್ ಕಾರ್ಖಾನೆಯಲ್ಲಿ ಹೊತ್ತಿಕೊಂಡಿದ್ದ ಬೆಂಕಿ ನಂದಿಸುವಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ.

ಮೈಸೂರು, ಮೇ 23(ವಿವಿಹೆಚ್)– ನಂಜನಗೂಡು ತಾಲೂಕಿನ ಕಡಕೊಳ ಕೈಗಾರಿಕಾ ಪ್ರದೇಶದ ಕೋಚನಹಳ್ಳಿ ಸಮೀಪದಲ್ಲಿರುವ 'ಮೀರಾ ಶ್ರೀ' ಹೆಸರಿನ ಫೋಮ್ ತಯಾರಿಕಾ ಕಾರ್ಖಾನೆಯಲ್ಲಿ ಶನಿವಾರ ಸಂಭವಿಸಿದ ಅಗ್ನಿ ಅವಘಡದಿಂದ ಲಕ್ಷಾಂತರ ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿವೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಕಾರ್ಖಾನೆಯೊಳಗಿದ್ದ ಸುಮಾರು 50 ಲಕ್ಷ ರೂ. ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿವೆ ಎಂದು ತಿಳಿದು ಬಂದಿದೆ.

ಸಂಜೆ 4.30ರ ವೇಳೆಗೆ ಅವಘಡ ಸಂಭವಿಸಿದೆ. ಈ ಅವಧಿಯಲ್ಲಿ ಕಾರ್ಖಾನೆಯೊಳಗೆ ಐವರು ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಕಾರ್ಖಾನೆಯೊಳಗಿನಿಂದ ಹೊಗೆ ಬರುತ್ತಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣ ಸಿಬ್ಬಂದಿಗೆ ಮಾಹಿತಿ ನೀಡಿ ಹೊರಬರುವಂತೆ ಎಚ್ಚರಿಸಿದರು. ಸಿಬ್ಬಂದಿ ಸುರಕ್ಷಿತವಾಗಿ ಹೊರಬಂದ ಕೆಲವೇ ಕ್ಷಣಗಳಲ್ಲಿ ಬೆಂಕಿಯು ವೇಗವಾಗಿ ವ್ಯಾಪಿಸಿ, ದಟ್ಟ ಹೊಗೆ ಆವರಿಸಿತು. ಇದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಸ್ಥಳೀಯರು ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಬೆಂಕಿ ಪಕ್ಕದ ಕಾರ್ಖಾನೆಗಳಿಗೆ ಹರಡದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡ ಪರಿಣಾಮ ದೊಡ್ಡ ಅನಾಹುತ ತಪ್ಪಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಮಾಹಿತಿ ದೊರೆತ ಕೂಡಲೇ ಸ್ಥಳಕ್ಕೆ ನಂಜನಗೂಡು, ಮೈಸೂರಿನ ಇತರೇ ನಾಲ್ಕು ಅಗ್ನಿಶಾಮಕ ಕಚೇರಿಯಿಂದ 5 ವಾಹನಗಳನ್ನು ಬಳಸಿಕೊಂಡು ಬೆಂಕಿ ನಂದಿಸಲು ಮುಂದಾದೆವು. ಮೊದಲಿಗೆ ಬೆಂಕಿ ಪಕ್ಕದ ಕಾರ್ಖಾನೆಗಳಿಗೆ ಹರಡದಂತೆ ತಡೆದೆವು.

ಬೆಂಕಿ ತೀವ್ರತೆ ಪಡೆದುಕೊಳ್ಳುತ್ತಿರುವುದನ್ನು ಗಮನಿಸಿ, ತಕ್ಷಣವೇ ಟಿವಿಎಸ್ ಹಾಗೂ ಏಷಿಯನ್ ಪೇಂಟ್ಸ್ ಕಾರ್ಖಾನೆಯ ಅಗ್ನಿಶಾಮಕ ವಾಹನಗಳ ಸಹಾಯವನ್ನೂ ಪಡೆದು ಸತತ ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಲಾಗಿದೆ. ಫೋಮ್ ಹಾಗೂ ಇತರೆ ವಸ್ತುಗಳು ಸಂಪೂರ್ಣ ಹಾನಿಗೊಳಗಾಗಿವೆ. ಆದರೆ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಠಾಣಾಧಿಕಾರಿ ಲಕ್ಷ್ಮೀಕಾಂತ್ ಯಾದವ್, ಚೆಲುವರಾಜು, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಸಿ.ರಮೇಶ್ ಹಾಗೂ ಗುರುರಾಜ್ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಕುಸಿದ ಫಲವತ್ತತೆ ದರ; ನಗರಗಳಲ್ಲಿ ದುಡಿಯುವ ಮಹಿಳೆಯರ ಬಲ ವೃದ್ಧಿ

ಎಸ್‌ಆರ್‌ಎಸ್ ವರದಿಯಲ್ಲಿ ಬಹಿರಂಗ

ಬೆಂಗಳೂರು: ಕರ್ನಾಟದಲ್ಲಿ ಒಟ್ಟು ಫಲವತ್ತತೆ ದರದಲ್ಲಿ ಕುಸಿತ ಕಂಡು ಬಂದಿದ್ದು, ಇದು ರಾಷ್ಟ್ರೀಯ ಸರಾಸರಿ 1.9ಕ್ಕಿಂತ ಕಡಿಮೆಯಾಗಿದೆ ಎಂಬ ವಿಚಾರ ಎಸ್‌ಆರ್‌ಎಸ್ ವರದಿಯಲ್ಲಿ ಬಯಲಾಗಿದೆ.

ಭಾರತದ ಜನಸಂಖ್ಯಾ ಬೆಳವಣಿಗೆ, ಫಲವತ್ತತೆ, ಶಿಶು ಮರಣ ಪ್ರಮಾಣ, ಮರಣ ಸೇರಿದಂತೆ ದೇಶದ ಆರೋಗ್ಯದ ಸ್ಥಿತಿ ಬಿಂಬಿಸುವ ಸಮೀಕ್ಷೆಯನ್ನು ಭಾರತದ ರಿಜಿಸ್ಟಾರ್ ಜನರಲ್ ಬಿಡುಗಡೆ ಮಾಡಿದ್ದು, ಈ ವರದಿಯಲ್ಲಿ ಈ ಅಂಶ ಬಹಿರಂಗೊಂಡಿದೆ

ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ಕಚೇರಿ ಈ ಮಾದರಿ ನೋಂದಣಿ ವ್ಯವಸ್ಥೆ–ಎಸ್‌ಆರ್‌ಎಸ್ ನಡೆಸಿದ್ದು, 1971 ರಿಂದ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಫಲವತ್ತತೆ ಮತ್ತು ಮರಣದ ಬಗ್ಗೆ ಮಾಹಿತಿಯ ಮುಖ್ಯ ಪರಿಕರವಾಗಿ ಎಸ್‌ಆರ್‌ಎಸ್ ಕಾರ್ಯನಿರ್ವಹಿಸುತ್ತಿದೆ.

ಭಾರತದ ಒಟ್ಟು ಫಲವತ್ತತೆಯ ದರ (ಟಿಆರ್‌ಎಫ್) 1.9ರಷ್ಟಿದೆ. ಕರ್ನಾಟಕದಲ್ಲಿ ಇದು ಕೇವಲ 1.5ರಷ್ಟಿದೆ. ಜೀವನಶೈಲಿ ಬದಲಾವಣೆ, ವಿಳಂಬ ಮದುವೆಯಿಂದಾಗಿ ರಾಜ್ಯದಲ್ಲಿ ನಗರದ ಒಟ್ಟು ಫಲವತ್ತತೆ ದರ 2024ರಲ್ಲಿ 1.3ಕ್ಕೆ ಇಳಿದಿದೆ ಎಂಬುದು ವರದಿಯಲ್ಲಿ ಉಲ್ಲೇಖವಾಗಿದೆ.

2023ರಿಂದ 2024ರವರೆಗೆ ಎಲ್ಲಾ ವಯಸ್ಸಿನ ಸಮೂಹದಲ್ಲಿ ಈ ಫಲವತ್ತತೆ ದರ ಕುಸಿತ ಕಂಡಿದೆ. 25–29 ವರ್ಷಗಳ ವಯಸ್ಸಿನ ಸಮೂಹದಲ್ಲಿ ಗರಿಷ್ಠ ಫಲವತ್ತತೆಯು 116.8ರಿಂದ 113.5ಕ್ಕೆ ಇಳಿದಿದೆ.

ಜನನ ಪ್ರಮಾಣವು ಭಾರತದ ಜನಸಂಖ್ಯೆಯಲ್ಲಿ ವೇಗದ ಬದಲಾವಣೆಗೆ ಕಾರಣವಾಗಿದ್ದು, ರಾಜ್ಯದಲ್ಲಿ 0–4ವರ್ಷದೊಳಗಿನ ಮಕ್ಕಳಲ್ಲಿ ಕರ್ನಾಟದ ಅನುಪಾತ ರಾಷ್ಟ್ರೀಯ ಸರಾಸರಿಗಿಂತ ತೀರಾ ಕಡಿಮೆ ಇದೆ. ಇದು ಪುರುಷರಲ್ಲಿ 7.4 ಆಗಿದ್ದರೆ, ಮಹಿಳೆಯರಲ್ಲಿ 6.8 ರಷ್ಟಾಗಿದೆ.

2024ರ ವರದಿಯಲ್ಲಿ ರಾಜ್ಯದ ಒಟ್ಟಾರೆ ಜನನ ಪ್ರಮಾಣ 14.9ಕ್ಕೆ ಇಳಿದಿದ್ದು, ಇದು ರಾಷ್ಟ್ರೀಯ ಸರಾಸರಿಯಾದ 18.3ಕ್ಕಿಂತ 3 ಅಂಕಗಳಷ್ಟು ಹಿಂದಿದೆ.

ರಾಜ್ಯದಲ್ಲಿ ಜನನ ಪ್ರಮಾಣ ದರ ರಾಷ್ಟ್ರೀಯ ಸರಾಸರಿಗೆ ಹೋಲಿಕೆ ಮಾಡಿದಾಗ ಇಳಿಕೆ ಕಂಡಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಫಲವತ್ತತೆಯನ್ನು ಬಿಂಬಿಸಿದೆ. ಇದಕ್ಕೆ ಉತ್ತಮ ಶಿಕ್ಷಣ, ಆರೋಗ್ಯ ಸೌಕರ್ಯ ಮತ್ತು ಕುಟುಂಬ ಯೋಜನೆ ಅಳವಡಿಕೆಗಳು ಕಾರಣವಿರಬಹುದು.

ನಗರ ಜನನ ಪ್ರಮಾಣದಲ್ಲೂ ರಾಷ್ಟ್ರಮಟ್ಟಕ್ಕೆ ಹೋಲಿಕೆ ಮಾಡಿದಾಗ ಕುಸಿತ ಕಂಡಿದೆ. ಇದು ಜೀವನಶೈಲಿ ಬದಲಾವಣೆ, ವಿಳಂಬ ವಿವಾಹ ಮತ್ತು ಸಣ್ಣ ಕುಟುಂಬಗಳ ವ್ಯವಸ್ಥೆಗಳಿಂದಾಗಿ ಇದು ಪರಿಣಾಮ ಬೀರಿರುವ ಸಾಧ್ಯತೆಗಳಿವೆ.

ಪುಸ್ತಕಗಳ ಖರೀದಿಗಾಗಿ ಆಯ್ಕೆ ಪಟ್ಟಿ ಪ್ರಕಟ

ಮೈಸೂರು: 2022ನೇ ವರ್ಷದಲ್ಲಿ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಕನ್ನಡ, ಆಂಗ್ಲ, ಹಿಂದಿ ಮತ್ತು ಭಾರತೀಯ ಇತರೆ ಪುಸ್ತಕಗಳ ಆಯ್ಕೆಪಟ್ಟಿಯನ್ನು ಪುಸ್ತಕಗಳ ಖರೀದಿಗಾಗಿ ಬಿಡುಗಡೆ ಮಾಡಲಾಗಿದೆ. ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಾಶನ ಸಂಸ್ಥೆಗಳು ಹಾಗೂ ಸಾರ್ವಜನಿಕರು ದರ ಸದುಪಯೋಗಪಡೆದುಕೊಳ್ಳಬಹುದು. ಆಯ್ಕೆ ಗೊಂಡ ಪುಸ್ತಕಗಳನ್ನು ಇದರ ನಿಯಮಾನುಸಾರ ಹಾಗೂ ಷರತ್ತುಗಳಿಗೊಳಪಟ್ಟಂತೆ ಗ್ರಂಥಾಲಯಗಳಲ್ಲಿ ಸ್ಥಳಾವಕಾಶಕ್ಕೆ ಅನುಗುಣವಾಗಿ ಖರೀದಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ ಪೀಪಲ್ಸ್ ಪಾರ್ಕ್ ಗ್ರಂಥಾಲಯ, ಮಲೆಮಹದೇಶ್ವರ ರಸ್ತೆ, ನಜರ್‌ಬಾದ್, ಮೈಸೂರು ಇಲ್ಲಿ ಸಂಪರ್ಕಿಸಬಹುದು.

ಮೈಸೂರಿನಲ್ಲಿ ಸುಗಮವಾಗಿ ನಡೆದ ಎಂಟೆಕ್, ಡಿಪ್ಲೋಮಾ ಇಂಜಿನಿಯರಿಂಗ್ ಕೋರ್ಸ್‌ಗಳ ಪಿಜಿ ಪ್ರವೇಶ ಪರೀಕ್ಷೆ

● ಎಂಟೆಕ್ ಪರೀಕ್ಷೆಗೆ 1,519 ವಿದ್ಯಾರ್ಥಿಗಳು ಹಾಜರು ● ಡಿಪ್ಲೋಮಾ ಇಂಜಿನಿಯರಿಂಗ್ ಬರೆದ 2,978 ಮಂದಿ ● ಪ್ರತಿ ತರಗತಿಗೆ ಸಿಸಿಟಿವಿ ಕ್ಯಾಮರಾ ಅಳವಡಿಕೆ ● ಮೊಬೈಲ್ ಬಳಕೆ ನಿರ್ಬಂಧಕ್ಕೆ ಜಾಮರ್ ಅಸ್ತ್ರ


ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಜೂನಿಯರ್ ಕಾಲೇಜಿನಲ್ಲಿ ಶನಿವಾರ ಎಂಟೆಕ್ ಹಾಗೂ ಡಿಪ್ಲೋಮಾ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಾತಿಗೆ ನಡೆಯುತ್ತಿದ್ದ ಪಿಜಿ ಸಿಇಟಿಯಲ್ಲಿ ಪಾಲ್ಗೊಳ್ಳುವ ಮುನ್ನ ಅಂತಿಮ ಸಿದ್ಧತೆಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳು.

ಮೈಸೂರು, ಮೇ23(ಬಿಎಲ್‌ಯು)– ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮೈಸೂರಿನಲ್ಲಿ ಇಂದು ಎಂಟೆಕ್ ಹಾಗೂ ಡಿಪ್ಲೋಮಾ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಾತಿಗೆ ಪಿಜಿ ಸಿಇಟಿ ಪರೀಕ್ಷೆ ನಡೆಯಿತು.

ಮೈಸೂರಿನ 5 ಪರೀಕ್ಷಾ ಕೇಂದ್ರಗಳಲ್ಲಿ ಎಂಟೆಕ್ ಪಿಜಿ ಸಿಇಟಿ ಪರೀಕ್ಷೆಯು ಇಂದು ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆವರೆಗೆ ನಡೆಯಿತು. ಈ ಪರೀಕ್ಷೆಗೆ ಒಟ್ಟು 1,648 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಆದರೆ 129 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಅಂತಿಮವಾಗಿ ಒಟ್ಟು 1,519 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಡಿಪ್ಲೋಮಾ ಇಂಜಿನಿಯರಿಂಗ್ ಪಿಜಿ ಸಿಇಟಿ ಪರೀಕ್ಷೆಯು ಇಂದು ಮಧ್ಯಾಹ್ನ 2 ರಿಂದ 5 ಗಂಟೆವರೆಗೆ ನಡೆಯಿತು. ಈ ಪರೀಕ್ಷೆಗೆ ಒಟ್ಟು 3,085 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದರು. ಆದರೆ 107 ವಿದ್ಯಾರ್ಥಿಗಳು ಗೈರಾಗಿದ್ದರು. ಅಂತಿಮವಾಗಿ ಒಟ್ಟು 2,978 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಪ್ರತಿ ತರಗತಿಯಲ್ಲಿ 24 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿತ್ತು. 11 ಪರೀಕ್ಷಾ ಕೇಂದ್ರಗಳಲ್ಲಿ 11 ಪರೀಕ್ಷಾ ಮುಖ್ಯಸ್ಥರು, 11 ವೀಕ್ಷಕರು, 11 ಸ್ಕ್ವಾರ್ಡ್ ಗಳು, 11 ಕಸ್ಟೋಡಿಯನ್‌ಗಳು ಹಾಗೂ 11 ಸೂಪರ್‌ವೈಸರ್‌ಗಳನ್ನು ನಿಯೋಜಿಸಲಾಗಿತ್ತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನೇಮಕಗೊಂಡಿರುವ ಪರೀಕ್ಷಾ ಪ್ರಕ್ರಿಯೆ ಮುಖ್ಯಸ್ಥ ಹನುಮಂತ ರಾವ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಬಯೋ ಮೆಟ್ರಿಕ್ ಫೇಸ್ ಅಂಥೆಟಿಕೇಷನ್ ಡಿವೈಸ್ ಬಳಕೆ

ಪರೀಕ್ಷಾ ಅಕ್ರಮ ತಡೆಗಟ್ಟಲು ಆಧುನಿಕ ತಂತ್ರಜ್ಞಾನ ವಿಧಾನವಾದ ಬಯೋ ಮೆಟ್ರಿಕ್ ಫೇಸ್ ಅಂಥೆಟಿಕೇಷನ್ ಡಿವೈಸ್ ಬಳಸಲಾಗಿತ್ತು. ಮೊಬೈಲ್ ಮೂಲಕ ಪರೀಕ್ಷೆ ಬರೆಯುವ ವಿದ್ಯಾರ್ಥಿಯನ್ನು ಈ ವಿಧಾನದಿಂದ ಖಚಿತಪಡಿಸಿಕೊಂಡ ನಂತರ ಪರೀಕ್ಷಾ ಕೇಂದ್ರದೊಳಗೆ ಪ್ರವೇಶಾತಿ ನೀಡಲಾಗುತ್ತಿತ್ತು.

ಅಲ್ಲದೆ 11 ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಲಾಗಿತ್ತು. ಕಾಲೇಜಿನ ಪ್ರವೇಶ ದ್ವಾರ ಮಾತ್ರವಲ್ಲದೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ತರಗತಿಗಳಿಗೆ ಕೂಡ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಪರೀಕ್ಷಾ ಕೇಂದ್ರದ ಸುತ್ತ ಮುತ್ತ ಜೆರಾಕ್ಸ್ ಅಂಗಡಿ ಹಾಗೂ ಬ್ರೌಸಿಂಗ್ ಸೆಂಟರ್‌ಗಳನ್ನು ಮುಚ್ಚಿಸಲಾಗಿತ್ತು.

ಪರೀಕ್ಷಾ ಕೇಂದ್ರಗಳ ಬಳಿ ಅಕ್ರಮ ತಡೆಗಟ್ಟಲು 200 ಮೀಟರ್ ವ್ಯಾಪ್ತಿಯಲ್ಲಿ ಸೆಕ್ಷನ್ 163ರ ಪ್ರಕಾರ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿತ್ತು. ಅಲ್ಲದೆ ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಹೊರತುಪಡಿಸಿ ಉಳಿದವರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು.

ಬಿಇಎಂಎಲ್ ಆವರಣದಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಮರಗಳ ಕಡಿಯುವ ಪ್ರಸ್ತಾಪ; ಆಕ್ಷೇಪಿಸದಿರಲು 'ಪರಿಸರಕ್ಕಾಗಿ ನಾವು' ನಿರ್ಧಾರ


ಮೈಸೂರಿನ ಹೊರವಲಯದ ಬಿಇಎಂಎಲ್ ಸಂಸ್ಥೆ ಆವರಣದಲ್ಲಿ ಆಸ್ಪತ್ರೆ ನಿರ್ಮಾಣಕ್ಕಾಗಿ 137 ಮರ ಕಡಿಯಲು ಉದ್ದೇಶಿಸಿರುವ ಸ್ಥಳಕ್ಕೆ 'ಪರಿಸರಕ್ಕಾಗಿ ನಾವು' ಸಂಘಟನೆ ನಿಯೋಗ ತೆರಳಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿತು.

ಮೈಸೂರು, ಮೇ 23(ಎಂಟಿವೈ)– ಮೈಸೂರು ತಾಲೂಕಿನ ಕೂರ್ಗಳ್ಳಿ ಬಳಿಯಿರುವ ಬಿಇಎಂಎಲ್ ಕಾರ್ಖಾನೆ ಆವರಣದಲ್ಲಿ ಔದ್ಯೋಗಿಕ ಆರೋಗ್ಯ ಕೇಂದ್ರ ನಿರ್ಮಿಸಲು ತೆರವು ಮಾಡಲು ಉದ್ದೇಶಿಸಿದ್ದ 137 ಮರಗಳ ಕಡಿಯಲು ಆಕ್ಷೇಪಿಸದಿರಲು 'ಪರಿಸರಕ್ಕಾಗಿ ನಾವು' ಸಂಘಟನೆ ತೀರ್ಮಾನಿಸಿದೆ.

ಸಂಘಟನೆಯ ಐವರು ಸದಸ್ಯರ ತಂಡ, ಸ್ಥಳ ಪರಿಶೀಲಿಸಿದ ಬಳಿಕ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯ ಗಿಡ–ಮರ ನೆಡುವುದಾಗಿ ಭರವಸೆ ನೀಡಿದ್ದರಿಂದ ಸಮ್ಮತಿ ಸೂಚಿಸಿದೆ.

ಬಿಇಎಂಎಲ್ ಸಂಸ್ಥೆ 450 ಎಕರೆ ವಿಸ್ತೀರ್ಣ ಹೊಂದಿದ್ದು, ಕಾರ್ಖಾನೆಯ ಆವರಣದಲ್ಲಿ ಶೇ.50ಕ್ಕಿಂತ ಹೆಚ್ಚು ಹಸಿರು ಹೊದಿಕೆ ಇದೆ. ಇಲ್ಲಿ 1890 ಸಿಬ್ಬಂದಿಗಳಿದ್ದಾರೆ. ಈಗಿರುವ ಆರೋಗ್ಯ ಕೇಂದ್ರ ತುಂಬಾ ಚಿಕ್ಕದಿದ್ದು ಇನ್ನೊಂದು ಆರೋಗ್ಯ ಕೇಂದ್ರದ ಅಗತ್ಯವಿದೆ. ಆ ಕಾರಣಕ್ಕೆ ಹೊಸದಾಗಿ ಆಸ್ಪತ್ರೆಯನ್ನು ನಿರ್ಮಿಸಲು ಐಎಸ್‌ಓ 45001 ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತಾ ಪ್ರಮಾಣೀಕರಣ ಸಂಸ್ಥೆ ಸೂಚಿಸಿದೆ. ಅದನ್ನು ಕಾರ್ಖಾನೆಯ ಆಡಳಿತ ಮಂಡಳಿ ಪಾಲಿಸಬೇಕಾಗಿರುವುದರಿಂದ ಆಸ್ಪತ್ರೆ ನಿರ್ಮಾಣ ಅನಿವಾರ್ಯ ಎಂದು ಅಧಿಕಾರಿಗಳು, ಪರಿಸರವಾದಿಗಳಿಗೆ ಸ್ಪಷ್ಟಪಡಿಸಿದೆ.

ಈಗ ಪ್ರಸ್ತಾಪಿಸಿರುವ ಆರೋಗ್ಯ ಕೇಂದ್ರವನ್ನು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕೌಂಪೌಂಡ್ ಮತ್ತು ಮುಖ್ಯ ಗೇಟ್ ಸಮೀಪ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಗಾಯಾಳುಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಅಗತ್ಯ ಚಿಕಿತ್ಸೆಗಾಗಿ ಹೊರಗಿನ ಆಸ್ಪತ್ರೆಗಳಿಗೆ ಸರಾಗವಾಗಿ ಸಾಗಿಸಬಹುದು. ಜೊತೆಗೆ, ಈ ಕಾರ್ಖಾನೆಯ ಅಕ್ಕಪಕ್ಕ, ರಸ್ತೆ ಅಪಘಾತಗಳಲ್ಲಿ ಗಾಯಗೊಂಡ ಸಾರ್ವಜನಿಕರಿಗೂ ತುರ್ತು ಪ್ರಾಥಮಿಕ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ.

ಗುರುತು ಮಾಡಿರುವ ಎಲ್ಲಾ 137 ಮರಗಳನ್ನು ಕಡಿಯದೆ ಆದಷ್ಟೂ ಮರಗಳನ್ನು ಉಳಿಸಲು ಪ್ರಯತ್ನಿಸುತ್ತೇವೆ. ಅಲ್ಲದೆ ಕಡಿದ ಮರಗಳ ಸಂಖ್ಯೆಯ ಹತ್ತರಷ್ಟು ಗಿಡಗಳನ್ನು ನೆಟ್ಟು ಬೆಳೆಸಲಾಗುವುದು. ಕಾರ್ಖಾನೆಯ ಆವರಣದಲ್ಲಿ ಸ್ಥಳೀಯ ವಿವಿಧ ಪ್ರಭೇಧದ ಗಿಡಗಳನ್ನು ಮತ್ತು ಹಣ್ಣಿನ ಗಿಡಗಳನ್ನು ನೆಟ್ಟು ಜೀವ ವೈವಿಧ್ಯತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕಾರ್ಖಾನೆಯ ಜನರಲ್ ಮ್ಯಾನೇಜರ್ ಸುಧಾಕರ್ ಎಸ್, ಹೆಚ್‌ಆರ್ ಮ್ಯಾನೇಜರ್ ಕರಿತಿರುಮಲ್, ಡೆಪ್ಯುಟಿ ಜನರಲ್ ಮ್ಯಾನೇಜರ್ ಮಾಲತೇಶ್ ಕೆ ಹಾಗೂ ಇನ್ನಿತರ ಅಧಿಕಾರಿಗಳು ಭರವಸೆ ನೀಡಿ, ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಮರ ತೆರವಿಗೆ ಆಕ್ಷೇಪಿಸಲು ನಿರ್ಧರಿಸಿದ್ದ 'ಪರಿಸರಕ್ಕಾಗಿ ನಾವು' ಸಂಘಟನೆ ತನ್ನ ನಿಲುವನ್ನು ಬದಲಿಸಿ, ಮರ ಕಡಿಯಲು ಯಾವುದೇ ಆಕ್ಷೇಪ ಸಲ್ಲಿಸದಿರಲು ಸಮ್ಮತಿಸಿದೆ.

ಪರಿಸರಕ್ಕಾಗಿ ನಾವು ಸಂಘಟನೆ ನಿಯೋಗದಲ್ಲಿ ಪರಶುರಾಮೇಗೌಡ, ರವಿ ಬಳೆ, ಬಾನು ಪ್ರಶಾಂತ್, ವಿಶ್ವನಾಥ್ ಮತ್ತು ಸುಧೀರ್ ಗಣಪತಿ ಇದ್ದರು.

ಮೈಸೂರು ಮಿತ್ರ

ಭಾನುವಾರ 24 ಮೇ 2026

ಮಾನಸಗಂಗೋತ್ರಿ ರೌಂಡ್ ಕ್ಯಾಂಟೀನ್‌ಗೆ ದುಸ್ಥಿತಿ!

● ಸವಿ..ಸವಿ.. ಹಿತಕರವಾಗಿದ್ದ ಕ್ಯಾಂಟಿನ್ ಈಗ ಪ್ಲಾಸ್ಟಿಕ್ ತ್ಯಾಜ್ಯದ ರಾಶಿಯಲ್ಲಿ ಮುಳುಗಿದೆ ● ಮೈಸೂರು ವಿವಿ ಕಾರ್ಯವೈಖರಿಗೆ ಕನ್ನಡಿ ಹಿಡಿದಂತಿದೆ

ಮೈಸೂರು, ಮೇ 23(ಎಂಕೆ)- ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ತಾಣವಾದ 'ರೌಂಡ್ ಕ್ಯಾಂಟಿನ್' ಕಳೆದ ಎಂಟೊಂಬತ್ತು ತಿಂಗಳಿಂದ ಕಸದ ತೊಟ್ಟಿಯಾಗಿದೆ...!

ಕಳೆದ ಸರಿ ಸುಮಾರು 50 ವರ್ಷಗಳಿಂದ ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ವೇಳೆ ವಿದ್ಯಾರ್ಥಿಗಳು ಸೇರಿದಂತೆ ಬೋಧಕ-ಬೋಧಕೇತರ ಸಿಬ್ಬಂದಿಯ ನೆಚ್ಚಿನ ವಿಶ್ರಾಂತಿ ಸ್ಥಳವಾಗಿದ್ದ ರೌಂಡ್ ಕ್ಯಾಂಟಿನ್ ಒಳ ಮತ್ತು ಹೊರಗಿನ ಆವರಣ ಕಸದಿಂದ ಆವೃತ್ತವಾಗಿದ್ದು, ವಿದ್ಯಾರ್ಥಿಗಳು ಮುಜುಗರಕ್ಕೀಡಾಗುವಂತಾಗಿದೆ.

ವಿನ್ಯಾಸದಿಂದಲೇ ಎಲ್ಲರ ಗಮನ ಸೆಳೆಯುತ್ತಿದ್ದ ರೌಂಡ್ ಕ್ಯಾಂಟಿನ್‌ನ ಕಿಟಕಿ ಗಾಜುಗಳು ಪುಡಿ ಪುಡಿಯಾಗಿದ್ದು, ಬಾಗಿಲು ಮುರಿದು ಮೂಲೆ ಸೇರಿದಂತಿದೆ. ಹೊರಭಾಗದಲ್ಲಿ ಕಸ ರಾಶಿ ಸುರಿದಿದ್ದು, ಹಚ್ಚ ಹಸಿರು ವಾತಾವರಣದ ನಡುವೆ ಕಲ್ಮಶ ಸೇರುತ್ತಿರುವಂತೆ ಭಾಸವಾಗುತ್ತಿದೆ. ರೌಂಡ್ ಕ್ಯಾಂಟಿನ್ ಸುತ್ತಲೂ ತಿಂಡಿ-ತಿನಿಸುಗಳನ್ನು ಸವಿಯುತ್ತಾ ಚರ್ಚಿಸುತ್ತಿದ್ದ ವಿದ್ಯಾರ್ಥಿಗಳು ದಿಕ್ಕಾಪಾಲಾಗಿ ಎಲ್ಲೆಂದರಲ್ಲಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.



ರೌಂಡ್ ಕ್ಯಾಂಟಿನ್ ಹಿಂಭಾಗ ಮಳಿಗೆಗಳ ರೂಪದಲ್ಲಿ ಕ್ಯಾಂಟಿನ್‌ಗಳಿದ್ದರೂ, ವೃತ್ತ ಮಾದರಿಯಲ್ಲೇ ಕಡಲು ಕಾಫಿ ಎಂಬ ಕ್ಯಾಂಟಿನ್ ಇದ್ದರೂ ಹಳೆಯ ರೌಂಡ್ ಕ್ಯಾಂಟಿನ್‌ನಿಂದ ದೊರೆಯುತ್ತಿದ್ದ ಆಹ್ಲಾದಕರ ವಾತಾವರಣ ಮರೆಯಾಗಿದೆ. ಎಷ್ಟು ಬೇಗ ಮತ್ತೆ ರೌಂಡ್ ಕ್ಯಾಂಟಿನ್ ಆರಂಭವಾಗುತ್ತದೆಯೋ ಎಂದು ಕಾಯುತ್ತಿದ್ದೇವೆ ಎಂದು ಕೆಲ ವಿದ್ಯಾರ್ಥಿಗಳು 'ಮೈಸೂರು ಮಿತ್ರ'ನಲ್ಲಿ ತಿಳಿಸಿದರು.

ಕಸ ವಿಲೇವಾರಿ ಇಲ್ಲ: ಕಳೆದ 8-9 ತಿಂಗಳಿಂದ ರೌಂಡ್ ಕ್ಯಾಂಟಿನ್ ಮುಚ್ಚಿದ್ದು, ಇದನ್ನೇ ನೆಪ ಮಾಡಿಕೊಂಡು ಕಸ ಸುರಿಯಲಾಗುತ್ತಿದೆ. ಪ್ಲಾಸ್ಟಿಕ್ ಪದಾರ್ಥಗಳನ್ನು ಇಲ್ಲಿಯೇ ಬಿಸಾಡಲಾಗುತ್ತಿದೆ. ಸ್ವಚ್ಛತಾ ಸಿಬ್ಬಂದಿ ನಿಯೋಜಿಸಿ, ಸ್ವಚ್ಛಗೊಳಿಸಬೇಕೆಂಬ ಜವಾಬ್ದಾರಿ ಅಧಿಕಾರಿಗಳಲ್ಲಿ ಇಲ್ಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಸದ್ಯದಲ್ಲೇ ಪುನರಾರಂಭ...

" ಮಾನಸಗಂಗೋತ್ರಿ ಆವರಣದಲ್ಲಿರುವ ರೌಂಡ್ ಕ್ಯಾಂಟಿನ್ ಅನ್ನು ಸದ್ಯದಲ್ಲಿಯೇ ಪುನಾರಂಭಿಸಲಾಗುವುದು. ಇದಕ್ಕಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಕ್ಯಾಂಟೀನ್ ನಿರ್ವಹಣೆಗೆ ಟೆಂಡರ್ ಪೂರ್ಣಗೊಂಡಿದೆ, ಆದರೆ ಗುತ್ತಿಗೆದಾರರು ಇನ್ನೂ ಪ್ರಾರಂಭಿಸಿಲ್ಲ. ಹಾಗಾಗಿ ಅಗತ್ಯವಿದ್ದರೆ, ನಾವು ಮರು-ಟೆಂಡರ್ ಕರೆಯಲಾಗುವುದು. ತೋಟಗಾರಿಕೆ ಇಲಾಖೆಯ ಸಹಾಯದಿಂದ ರೌಂಡ್ ಕ್ಯಾಂಟಿನ್ ಸುತ್ತಲೂ ಹೆಚ್ಚು ಹಸಿರನ್ನು ಬೆಳೆಸಲು ಚಿಂತನೆ ನಡೆಸಲಾಗಿದೆ. **-ಎಂ.ಕೆ.ಸವಿತಾ, ಕುಲಸಚಿವರು(ಆಡಳಿತ).**

ಭಾವನಾತ್ಮಕ ಸ್ಥಳ: ರೌಂಡ್ ಕ್ಯಾಂಟೀನ್ ಕೇವಲ ಆಹಾರ ತಾಣವಲ್ಲ. ಇದು ಮಾನಸ ಗಂಗೋತ್ರಿಯ ವಿದ್ಯಾರ್ಥಿಗಳೊಂದಿಗೆ ಭಾವನಾತ್ಮಕ ಸಂಪರ್ಕ ಹೊಂದಿದೆ. ರೌಂಡ್ ಕ್ಯಾಂಟಿನ್ ಇಲ್ಲದೆ ಕ್ಯಾಂಪಸ್ ಜೀವನ ಅಪೂರ್ಣವೆಂದು ಭಾವಿಸುತ್ತೇವೆ. ವಿಶೇಷ ಆಕರ್ಷಣೆಯಾಗಿದ್ದ ರೌಂಡ್ ಕ್ಯಾಂಟಿನ್ ಪುನಾರಂಭವಾಗಬೇಕು. ಇಲ್ಲಿ ಸುರಿದಿರುವ ಕಸ ವಿಲೇವಾರಿಯಾಗಬೇಕು ಎಂದು ಸ್ನಾತಕೋತ್ತರ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಸರ್ವರ್ ಸಮಸ್ಯೆ: ಪಡಿತರಕ್ಕೆ ಫಜೀತಿ

● ಹಗಲು-ರಾತ್ರಿ ಕಾದು ಕುಳಿತಿರುವ ಜನ ● ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದ 'ಗ್ಯಾರಂಟಿ' ಸರ್ಕಾರ



ಮಂಚೇಗೌಡನಕೊಪ್ಪಲು ನ್ಯಾಯಬೆಲೆ ಅಂಗಡಿ ಮುಂಭಾಗ ರಾತ್ರಿ ವೇಳೆ ಪಡಿತರ ಲಾಗ್‌ಇನ್‌ಗಾಗಿ ಕಾದು ನಿಂತಿರುವ ಸಾರ್ವಜನಿಕರು.

ಮೈಸೂರು, ಮೇ 23(ವಿಎಚ್)- ಮೈಸೂರು ನಗರದಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪಡಿತರ ಚೀಟಿದಾರರು ಹಾಗೂ ಅಂಗಡಿ ಮಾಲೀಕರು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ.

ಬೆಳಗ್ಗೆಯಿಂದಲೇ ಪಡಿತರ ಪಡೆಯಲು ಬರುವ ಸಾರ್ವಜನಿಕರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಪಡಿತರ ಚೀಟಿದಾರರು ಆಗ್ರಹಿಸಿದ್ದಾರೆ.

ನಗರದ ಮಂಚೇಗೌಡನ ಕೊಪ್ಪಲು ನ್ಯಾಯಬೆಲೆ ಅಂಗಡಿಯಲ್ಲಿ ತೀವ್ರ ಸರ್ವರ್ ಸಮಸ್ಯೆಯಿಂದಾಗಿ ರಾತ್ರಿಯ ಪಡಿತರ ಚೀಟಿದಾರರು ಕಾಯಬೇಕಾಯಿತು. ಮೇ ಮತ್ತು ಜೂನ್ ತಿಂಗಳ ಪಡಿತರವನ್ನು ಮೇ ತಿಂಗಳಲ್ಲಿಯೇ ವಿತರಿಸುತ್ತಿರುವುದರಿಂದ ಒಬ್ಬರಿಗೆ ಎರಡೆರಡು ಬಾರಿ ಲಾಗ್‌ಇನ್ ಮಾಡಬೇಕಿದೆ. ಇದರಿಂದಾಗಿ ಒಬ್ಬರಿಗೆ ಕನಿಷ್ಠ 5 ನಿಮಿಷಗಳ ಕಾಲಾವಕಾಶ ಬೇಕಿದೆ. ಇದರ ನಡುವೆ ಸರ್ವರ್ ಸಮಸ್ಯೆ ಹೆಚ್ಚಾಗಿ ಕಾಡುತ್ತಿದ್ದು, ಹಿರಿಯ ನಾಗರಿಕರು, ಮಹಿಳೆಯರು ಹಾಗೂ ಕೂಲಿ ಕಾರ್ಮಿಕರು ತೊಂದರೆ ಅನುಭವಿಸುತ್ತಿದ್ದಾರೆ. ಬೆಳಗ್ಗೆಯಿಂದ ಸಾಲಿನಲ್ಲಿ ನಿಂತರೂ ಪಡಿತರ ಸಿಗದೇ ಹಿಂತಿರುಗುವ ಪರಿಸ್ಥಿತಿ ಎದುರಾಗುತ್ತಿದೆ.

ಈ ಬಗ್ಗೆ ಮಾತನಾಡಿದ ಸಾಮಾಜಿಕ ಕಳಕಳಿಯುಳ್ಳ ನಾಗರಿಕರೊಬ್ಬರು, ಇಲ್ಲಿನ ನ್ಯಾಯಬೆಲೆ ಅಂಗಡಿಯಲ್ಲಿ ರಾತ್ರಿ 9.30ರ ಬಳಿಕ ಸರ್ವರ್ ಸಿಗುತ್ತದೆ ಎಂದು ಬೆಳಗ್ಗೆಯಿಂದ ರಾತ್ರಿವರೆಗೂ ಪಡಿತರ ಲಾಗ್‌ಇನ್ ಕೆಲಸ ಮಾಡುತ್ತಿದ್ದಾರೆ. ಹಾಗಿದ್ದರೂ ಸರ್ವರ್ ಸಮಸ್ಯೆಯಿಂದಾಗಿ ಕನಿಷ್ಠ 3 ಗಂಟೆಗಳವರೆಗೂ ನಾವು ಕಾಯುತ್ತಿದ್ದೇವೆ. ಪುರುಷರು ಕಾಯುವುದರಲ್ಲಿ ಅರ್ಥವಿದೆ. ಆದರೆ ಮಹಿಳೆಯರು ಕಾಯುವುದರಲ್ಲಿ ಯಾವುದೇ ಅರ್ಥವಿಲ್ಲ. ಅಂಗಡಿಗಳಲ್ಲಿ ಕೇಳಿದರೆ, ಕೇಂದ್ರ ಕಚೇರಿ ಸರ್ವರ್ ಸರಿಪಡಿಸಬೇಕು ಎನ್ನುತ್ತಾರೆ. ಇದರಿಂದ ತ್ವರಿತವಾಗಿ ಮುಕ್ತಿ ಹೊಂದಲು ವಿಭಾಗ ಮಟ್ಟದಲ್ಲಿ ಸರ್ವರ್ ಸಂಬಂಧ ಕಚೇರಿ ಸ್ಥಾಪಿಸಿ, ಸರಿಪಡಿಸುವಂತಾಗಬೇಕು ಎಂದು ಆಗ್ರಹಿಸಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ತಾಂತ್ರಿಕ ದೋಷ ಸರಿಪಡಿಸಿ, ನ್ಯಾಯಬೆಲೆ ಅಂಗಡಿಗಳಲ್ಲಿ ಸುಗಮ ಪಡಿತರ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸರ್ಫ್, ಡೆಟಾಲ್ ಹಾಕಿ ತೊಳೆದರೂ ಈ ಸರ್ಕಾರದ ದುಷ್ಟ ಬುದ್ಧಿ ಹೋಗಲ್ಲ!

ಅಲ್ಪಸಂಖ್ಯಾತರ ಓಲೈಕೆಗೆ ಹಿಜಾಬ್ ಮರು ಜಾರಿ ಮಾಡಿದ ರಾಜ್ಯ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ

ಬೆಂಗಳೂರು, ಮೇ 23(ಕೆಎಂಶಿ)-ಹಿಜಾಬ್ ಮರು ಜಾರಿ, ಆಳಂದ ಗಲಭೆ ಪ್ರಕರಣ ವಾಪಸ್ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರ ಓಲೈಕೆಯಲ್ಲೇ ಸದಾ ನಿರತವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಫ್, ಡೆಟಾಲ್ ಹಾಕಿ ತೊಳೆದರೂ ಸರ್ಕಾರದ ದುಷ್ಟ ಬುದ್ಧಿ ಹೋಗುವುದಿಲ್ಲ, ಪೊಲೀಸರ ಮೇಲೆ ಹಲ್ಲೆ ಮಾಡಿದವರು, ಕೇಂದ್ರ ಸಚಿವರ ಕಾರು ಒಡೆದವರ ಮೇಲಿನ ಪ್ರಕರಣಗಳನ್ನು ಕೈಬಿಟ್ಟಿದ್ದಾರೆ, ಕೋಮುಗಲಭೆ ಹಬ್ಬಿಸುವವರ ಮೇಲಿನ ಮೊಕದ್ದಮೆಗಳನ್ನು ವಾಪಸ್ ಪಡೆದಿರುವುದು ಸರಿಯಲ್ಲ ಎಂದರು.

ಎಲ್ಲ ಸಮುದಾಯಗಳನ್ನೂ ಸಮಾನವಾಗಿ ಕಾಣುವುದು, ಪ್ರಗತಿಯತ್ತ ಒಟ್ಟಿಗೆ ತೆಗೆದುಕೊಂಡು ಹೋಗುವುದು ಸರ್ಕಾರದ ಕರ್ತವ್ಯ, ಆದರೆ, ಸಿದ್ದರಾಮಯ್ಯ ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ. ದೇಶದ ಭದ್ರತೆಗೆ ಅಪಾಯ ಆಗುವಂತಹ ರಾಜ್ಯ ಸರ್ಕಾರದ ನಿರ್ಧಾರಗಳನ್ನು ಬಿಜೆಪಿ ವಿರೋಧಿಸುತ್ತದೆ, ಕೂಡಲೇ ಆದೇಶ ವಾಪಸ್ ಪಡೆಯಬೇಕು.

ಬಹು ಸಂಖ್ಯಾತರಿಗೆ ದ್ರೋಹ: ರೈತರು ಮತ್ತು ಕನ್ನಡಪರ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯುವ ಬದಲಿಗೆ ಕೋಮುಗಲಭೆಗೆ ಪ್ರಚೋದನೆ ನೀಡಿದವರ ಮೇಲಿನ ಪ್ರಕರಣಗಳನ್ನು ಕೈಬಿಡುವ ಮೂಲಕ ಬಹುಸಂಖ್ಯಾತರಿಗೆ ಸರ್ಕಾರ ದ್ರೋಹ ಎಸಗಿದೆ ಎಂದು ಅಶೋಕ್ ಹೇಳಿದರು.



ರೈತರು, ಪರಿಸರವಾದಿಗಳ ವಿರೋಧದ ನಡುವೆ ಆನೇಕಲ್ ಸಮೀಪ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಮುಂದಾಗಿದೆ. ಈಗಿರುವ ಕ್ರಿಕೆಟ್ ಕ್ರೀಡಾಂಗಣ ವರ್ಷದಲ್ಲಿ ನಾಲ್ಕು ಬಾರಿ ಮಾತ್ರ ತೆರೆಯುತ್ತದೆ. ಮತ್ತೊಂದು ಸ್ಟೇಡಿಯಂ ಯಾವ ಪುರುಷಾರ್ಥಕ್ಕೆ ಎಂದರು.

ಉದ್ದೇಶಿತ ನೂತನ ಕ್ರೀಡಾಂಗಣ ಸುತ್ತಲಿನ ಜಮೀನಿನ ಲೆಕ್ಕ ನೀಡಬೇಕು. ಇಲ್ಲಿ ಯಾರೂ ಕ್ರೀಡಾಂಗಣ ಬೇಕೆಂದು ಕೇಳಿರಲಿಲ್ಲ. ಗೃಹ ಮಂಡಳಿ ಮನೆ ಇಲ್ಲದವರಿಗೆ ವಸತಿ ನಿರ್ಮಿಸಬೇಕೇ ಹೊರತು ಸ್ಟೇಡಿಯಂ ಅಲ್ಲ. ರೈತರ ಸಮಾಧಿ ಮೇಲೆ ಬಿಡದಿ ಟೌನ್‌ಶಿಪ್ ಮಾಡಲು ಸರ್ಕಾರ ಹೊರಟಿದೆ. ಇಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಾವಿರಾರು ಕೋಟಿ ರೂ. ಲಾಭವಾಗಲಿದೆ ಎಂದು ಹೇಳಿದರು.

ಈ ಟೌನ್‌ಶಿಪ್ ನಿರ್ಮಾಣವನ್ನು ಬಿಜೆಪಿ ಸರ್ಕಾರ ಕೈ ಬಿಟ್ಟಿತ್ತು. ಈಗ ಮತ್ತೆ ಮಾಡಲು ಹೊರಟಿದ್ದಾರೆ. ರೈತರ ಶಾಪ ತಟ್ಟಿದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಡಿಪಾಸಿಟ್ ಕಳೆದುಕೊಳ್ಳಲಿದೆ. ಟೌನ್‌ಶಿಪ್‌ಗೆ ರೈತರೇ ಬೆಂಬಲ ನೀಡುತ್ತಿದ್ದಾರೆ ಎಂಬುದು ಸುಳ್ಳು. ಬೆಂಬಲ ನೀಡುತ್ತಿರುವವರು ಒರಿಜಿನಲ್ ರೈತರಲ್ಲ. ಸರ್ಕಾರ ಬೀದರ್‌ನಿಂದ ಚಾಮರಾಜನಗರವರೆಗೆ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಮನೆಗೆ ಹೋಗುವುದು ಗ್ಯಾರಂಟಿ ಎಂದರು.

ತೈಲ ಬೆಲೆ ಏರಿಕೆಯಿಂದ ಕೇಂದ್ರ ಸರ್ಕಾರಕ್ಕೆ ಲಾಭವಿಲ್ಲ. 6 ಸಾವಿರದಿಂದ 7 ಸಾವಿರ ಕೋಟಿ ಆದಾಯ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಇದರ ಬಗ್ಗೆ ಕಾಂಗ್ರೆಸ್‌ಗೆ ಬುದ್ಧಿ ಬಂದಿಲ್ಲ. ಕೀಟನಾಶಕ 'ಹಿಟ್' ಸಿಂಪಡಿಸಿದರೆ ಕಾಕ್ರೋಚ್‌ಗಳು ಸಾಯುತ್ತವೆ. ಕಾಕ್ರೋಚ್ ಜನತಾ ಪಾರ್ಟಿ, ಆಮ್ ಆದ್ಮಿ ಮತ್ತು ಕಾಂಗ್ರೆಸ್ ಕಾಕ್ರೋಚ್‌ಗಳಂತೆ ಎಂದರು.

ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ

ಮೈಸೂರು,ಮೇ 23-ಮೈಸೂರಿನ ಬೋಗಾದಿ 2ನೇ ಹಂತ, 1ನೇ ಮುಖ್ಯರಸ್ತೆಯಲ್ಲಿರುವ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿ ನಿಲಯದಿಂದ 5 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಹಾಸ್ಟೆಲ್ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿಯನ್ನು ನೇರವಾಗಿ ಕಚೇರಿಗೆ ಭೇಟಿ ನೀಡಿ ಪಡೆಯಬಹುದು ಅಥವಾ ವಾಟ್ಸಪ್ ಮೂಲಕ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂ: ಜೆಎಸ್‌ಎಸ್ ಹಾಸ್ಟೆಲ್ ವಿಭಾಗ 0821-2548212, ಕೆ.ಎಸ್.ಗೌರೀಶಂಕರಸ್ವಾಮಿ 9741452271, ಡಿ.ಎಂ.ಮಧು 9620501469 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರದಿಂದ ಮಿತಿ ಮೀರಿದ ಅಲ್ಪಸಂಖ್ಯಾತರ ಓಲೈಕೆ ಪ್ರಯತ್ನ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ● ದೇಶ ದ್ರೋಹಿಗಳ ವಿರುದ್ಧದ ಕೇಸ್ ವಾಪಸ್ ಪಡೆದು ವೋಟ್ ಬ್ಯಾಂಕ್ ಸುಭದ್ರ ಪ್ರಯತ್ನ

ಬೆಂಗಳೂರು, ಮೇ 23(ಕೆಎಂಶಿ)- ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ತುಷ್ಟೀಕರಣದ ಎಲ್ಲ ಮಿತಿಗಳನ್ನು ಮೀರಿ ಅಲ್ಪಸಂಖ್ಯಾತರ ಓಲೈಕೆ ನಡೆದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ, ಅಲ್ಪಸಂಖ್ಯಾತರನ್ನು ಓಲೈಸಲು ಯಾವ ಮಟ್ಟಕ್ಕಾದರೂ ಸರ್ಕಾರ ಇಳಿಯಲಿದೆ ಎಂದರು.

ಆಳಂದ ಗಲಭೆ ಪ್ರಕರಣದ ಆರೋಪಿಗಳನ್ನು ಮುಕ್ತಗೊಳಿಸಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ, ದೇಶದ್ರೋಹಿಗಳ ವಿರುದ್ಧ, ಕಾನೂನು ದಮನ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಸರ್ಕಾರ ಹಾಗೂ ಕಾಂಗ್ರೆಸ್ ತನ್ನ ಓಟ್ ಬ್ಯಾಂಕ್ ಸುಭದ್ರ ಮಾಡಿಕೊಳ್ಳುತ್ತಿದೆ.

ಹಿಂದೂಗಳಿಗೆ ಪದೇ ಪದೆ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ನೀತಿಯನ್ನು, ರಾಜ್ಯದ ಜನ ಗಮನಿಸುತ್ತಿದ್ದಾರೆ, ವಿರೋಧ ಪಕ್ಷವಾಗಿ ನಾವೂ ಹೋರಾಟ ಮಾಡುತ್ತೇವೆ. ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವುದರ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಲಾಗುವುದು ಎಂದರು.

ಆನೇಕಲ್ ಸಮೀಪ ರೈತರ ಫಲವತ್ತಾದ ಜಮೀನನ್ನು ಪಡೆದು ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುತ್ತಿರುವುದು ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗೆಗಿನ ಅಸಡ್ಡೆ ತೋರುತ್ತಿದೆ. ಸರ್ಕಾರವೇ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ. ಪ್ರವಾಹ ಬಂದಾಗ ರೈತರ ಪರ ನಿಲ್ಲಲಿಲ್ಲ. ಬರಗಾಲ ಇದ್ದಾಗಲೂ ಸಹಾಯ ಮಾಡಲಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಜನರ ನೋವು ಆಲಿಸಲಿಲ್ಲ.

ರೈತ ವಿರೋಧಿ ನೀತಿ: ಬೆಂಗಳೂರು ವಿಮಾನ ನಿಲ್ದಾಣ ಸಮೀಪ ಸಾವಿರಾರು ಎಕರೆ ಜಾಗ ಇದೆ. ಅಲ್ಲೇ ಕ್ರೀಡಾಂಗಣ ನಿರ್ಮಿಸಬಹುದಿತ್ತು. ಆದರೆ, ಆನೇಕಲ್‌ನ ಫಲವತ್ತಾದ ಜಮೀನು ಪಡೆದು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಇಂತಹ ಕೃತ್ಯದ ವಿರುದ್ಧ ಹೋರಾಟ ಮಾಡುತ್ತೇವೆ, ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ, ಬಿಜೆಪಿ ರೈತರ ಪರ ನಿಲ್ಲಲಿದೆ ಎಂದರು.

ಬಿಜೆಪಿಯಿಂದ ರಾಜ್ಯಸಭೆಗೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಚರ್ಚೆ ಆಗಿದೆ. ಒಂದು ಸ್ಥಾನಕ್ಕೆ ಅವಕಾಶ ಇದೆ, ಜೆಡಿಎಸ್ ನಾಯಕ ಎಚ್.ಡಿ.ದೇವೇಗೌಡ ಅವರನ್ನು ರಾಜ್ಯಸಭೆಗೆ ಕಳುಹಿಸಲು ಪಕ್ಷದ ವಿರೋಧಿ ಇಲ್ಲ. ದೇವೇಗೌಡ ಅವರಿಗೆ ಅವಕಾಶ ನೀಡುವ ನಿರ್ಧಾರ ಬಿಜೆಪಿ ರಾಷ್ಟ್ರೀಯ ನಾಯಕರದಾಗಿದ್ದು, ಈ ಸಂಬಂಧ ಇದುವರೆಗೂ ಯಾವುದೇ ಸೂಚನೆ ಸಿಕ್ಕಿಲ್ಲ.

ಜಾಗತಿಕ ವಿದ್ಯಮಾನ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಕೇಂದ್ರ ಸರ್ಕಾರ ತೈಲ ಬೆಲೆ ಏರಿಸಿದೆ, ಸರ್ಕಾರಕ್ಕೆ ಇಷ್ಟ ಇಲ್ಲದಿದ್ದರೂ ಕಠಿಣ ನಿರ್ಧಾರ ಕೈಗೊಂಡಿದೆ. ಸಿಎಂ ಸಿದ್ದರಾಮಯ್ಯ ಈ ಹಿಂದೆ ತೈಲ ಬೆಲೆ ಹತ್ತು ರೂ. ಕಡಿಮೆ ಮಾಡುತ್ತೇನೆ ಎಂದಿದ್ದರು, ರಾಜ್ಯದ ಜನರ ಒಳಿತಿಗೆ ತೈಲದ ಮೇಲಿನ ತೆರಿಗೆ ಕಡಿಮೆ ಮಾಡಲಿ. ಜಾಗತಿಕ ಆರ್ಥಿಕ ಸ್ಥಿತಿಗತಿ ಅರ್ಥ ಮಾಡಿಕೊಂಡು ತೈಲದ ಮೇಲಿನ ಹೆಚ್ಚುವರಿ ತೆರಿಗೆ ಇಳಿಸಲಿ ಎಂದು ಆಗ್ರಹಿಸಿದರು.

ಸ್ನೇಹ ಬಳಗದಿಂದ ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ 60ನೇ ಹುಟ್ಟುಹಬ್ಬ ಆಚರಣೆ

ನಂಬಿದ ಸಿದ್ಧಾಂತ, ಪಕ್ಷ, ಸ್ನೇಹಿತರ ಹಿತಕಾಯಲು ಮಲ್ಲೇಶ್ ಬದ್ಧರು

ಮೈಸೂರು,ಮೇ 23(ಎಸ್‌ಪಿಎನ್)- ಮೈಸೂರು ನಗರಪಾಲಿಕೆ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಕೆ.ವಿ.ಮಲ್ಲೇಶ್ ತಾವು ನಂಬಿದ ಸಿದ್ಧಾಂತ, ಪಕ್ಷಕ್ಕೆ ಹಾಗೂ ತಮ್ಮನ್ನು ಇಷ್ಟಪಡುವ ಸ್ನೇಹಿತರ ಹಿತಕಾಯಲು ಬದ್ಧರಾಗಿದ್ದಾರೆ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಅರವಿಂದನಗರದ ಖಾಸಗಿ ಕಲ್ಯಾಣಮಂಟಪದಲ್ಲಿ ಕೆ.ವಿ.ಮಲ್ಲೇಶ್ ಅಭಿಮಾನಿ ಬಳಗ ಹಾಗೂ ಅನಿಕೇತನ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಕೆ.ವಿ.ಮಲ್ಲೇಶ್ ಅವರ 60ನೇ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.



ಮೈಸೂರು ಪಾಲಿಕೆ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಕೆ.ವಿ.ಮಲ್ಲೇಶ್‌ರ 60ನೇ ಹುಟ್ಟುಹಬ್ಬದ ಅಂಗವಾಗಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿನಂದಿಸಿದರು. ಈ ವೇಳೆ ಹಿರಿಯ ಸಾಹಿತಿ ಶಿವಪ್ಪ, ಪ್ರೊ.ಎಂ.ಕೃಷ್ಣೇಗೌಡ, ವಿಧಾನಪರಿಷತ್ ಮಾಜಿ ಸದಸ್ಯರಾದ ಮರಿತಿಬ್ಬೇಗೌಡ, ತೋಂಟದಾರ್ಯ, ರೋ.ಆಯುರಹಳ್ಳಿ ಪಿ.ವಿರೂಪಾಕ್ಷ ಇನ್ನಿತರರಿದ್ದರು.

ಕಳೆದ ಹಲವು ವರ್ಷಗಳ ಹಿಂದೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕರೆಸಿ ಅದ್ಧೂರಿ ಕಾರ್ಯಕ್ರಮ ಮಾಡಿದ್ದರು. ಚಿಕ್ಕ ವಯಸ್ಸಿನಿಂದಲೂ ಉತ್ತಮ ಸಾಂಸ್ಕೃತಿಕ ಸಂಘಟಕರಾಗಿ ಸಮುದಾಯದ ನಡುವೆ ಇದ್ದಾರೆ. ಮೈಸೂರು ಕುವೆಂಪುನಗರದ ಸೌಗಂಧಿಕ ಉದ್ಯಾನವನದಲ್ಲಿ ದೇಶ ಪ್ರೇಮ ಹೆಚ್ಚಿಸುವ ಹಾಗೂ ಭಾವಗೀತೆ ಗಾಯನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಕುವೆಂಪು ನಗರ ಜನತೆಗೆ ಉತ್ತಮ ಸಾಂಸ್ಕೃತಿಕ ವಾತಾವರಣ ನಿರ್ಮಿಸಿ, ಜನಮನ ಗೆದ್ದಿದ್ದರು.

ಕೆ.ವಿ.ಮಲ್ಲೇಶ್ ಅವರ ತಂದೆ ವೀರಭದ್ರಪ್ಪನವರು ಮಂಡ್ಯದ ಕೆರಗೋಡಿನವರು. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಈ ಭಾಗದಲ್ಲಿ ಉತ್ತಮ ಹೆಸರು ಗಳಿಸಿದ್ದರು. ಒಮ್ಮೆ ಮಾಜಿ ಸಿಎಂ ಕೆಂಗಲ್ ಹನುಮಂತಯ್ಯನವರು ಯಾವುದೋ ವಿಚಾರವಾಗಿ ಇವರ ತಂದೆ ವೀರಭದ್ರಪ್ಪನವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದ ಪ್ರಸಂಗ ವಿವರಿಸಿದರಲ್ಲದೆ, ಈ ನಾಡಿನ ಗಣ್ಯ ವ್ಯಕ್ತಿ, ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರೇ ವೀರಭದ್ರಪ್ಪನವರನ್ನು ಹುಡುಕಿಕೊಂಡು ಬಂದಿದ್ದರು ಎಂಬುದೇ ಆಗಿನ ಕಾಲಕ್ಕೆ ದೊಡ್ಡ ವಿಚಾರ ಎಂದರು.


ಕೆ.ವಿ.ಮಲ್ಲೇಶ್ ಎರಡು ಬಾರಿ ಮಹಾನಗರಪಾಲಿಕೆ ಸದಸ್ಯರಾಗಿ, ತಮ್ಮ ವಾರ್ಡ್‌ನಲ್ಲಿ ಪ್ರಾಮಾಣಿಕವಾಗಿ ಉತ್ತಮ ಕೆಲಸ ಮಾಡಿದ್ದಾರೆ. ಎರಡು ಬಾರಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆದರೆ, ಜನರ ಆಶೀರ್ವಾದ ಸಿಗಲಿಲ್ಲ. ಅಲ್ಲದೆ, ಕುವೆಂಪು ನಗರದ ಪ್ರವೇಶದ್ವಾರದಲ್ಲಿ ಕುವೆಂಪು ಅವರ ಪ್ರತಿಮೆ ಹಾಗೂ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ.ಶಿವಕುಮಾರ ಸ್ವಾಮೀಜಿ ಅವರ ಹೆಸರನ್ನು ವೃತ್ತಕ್ಕೆ ಇಟ್ಟು ಆ ವೃತ್ತದಲ್ಲಿ ಅವರ ಪ್ರತಿಮೆ ಸ್ಥಾಪಿಸುವ ವಿಚಾರದಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಸಿದ್ದಗಂಗಾ ಶ್ರೀಗಳ ಪ್ರತಿಮೆ ಸ್ಥಾಪನೆ ಸಾಧ್ಯವಾಗಿಲ್ಲ. ಆದರೆ, ಕುವೆಂಪು ಅವರ ಪ್ರತಿಮೆ ಹಾಗೂ ಜ್ಞಾನತಾಣ ಉದ್ಘಾಟಿಸುವಲ್ಲಿ ಮಲ್ಲೇಶ್ ಪಾತ್ರ ಮಹತ್ವದ್ದು ಎಂದರು.

ಕೆ.ವಿ.ಮಲ್ಲೇಶ್, 60 ವಸಂತಗಳನ್ನು ಪೂರೈಸಿದ್ದಾರೆ. ಇವರ ಸ್ನೇಹಿತರೆಲ್ಲ ಒಟ್ಟುಗೂಡಿ ಜನ್ಮ ದಿನಾಚರಣೆ ಆಯೋಜಿಸಿರುವುದು ಸಾರ್ಥಕ ಸಂಗತಿ. ಈ ಕಾರ್ಯಕ್ರಮ ಆಯೋಜಿಸುವ ಮುನ್ನ ಅವರೊಂದು ಕೋರಿಕೆ ಇತ್ತು. ಅದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಜನ್ಮ ದಿನಾಚರಣೆ ಕಾರ್ಯಕ್ರಮ ಜರುಗಬೇಕು. ಅವರ ಬಯಕೆಯಂತೆ ಸುತ್ತೂರು ಶ್ರೀಗಳು ಇಂದು ಉಪಸ್ಥಿತರಿದ್ದಾರೆ. ಅವರಿಗೆ ಈಗಿನ ಸರ್ಕಾರದಲ್ಲಿ ಉನ್ನತ ಹುದ್ದೆಗಳು ಲಭಿಸಲಿ ಎಂದು ಶುಭ ಹಾರೈಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ತೋಂಟದಾರ್ಯ, ಮರಿತಿಬ್ಬೇಗೌಡ, ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಬಿ.ಎಸ್.ಪ್ರಶಾಂತ್, ಮಾಜಿ ಮೇಯರ್‌ಗಳಾದ ಭೈರಪ್ಪ, ಟಿ.ಬಿ.ಚಿಕ್ಕಣ್ಣ, ಕಾಂಗ್ರೆಸ್ ನಗರ ಘಟಕ ಅಧ್ಯಕ್ಷ ಆರ್.ಮೂರ್ತಿ, ಮಲ್ಲಿಗೆ ವೀರೇಶ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ರೋಟರಿ ಮೈಸೂರು ಉತ್ತರ ಕಾರ್ಯದರ್ಶಿ ಪಿ.ವಿರೂಪಾಕ್ಷ, ಮಂಜುನಾಥ್, ವೀರಶೈವ ಲಿಂಗಾಯತ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಆರ್.ಶಿವಕುಮಾರ್, ಬಿಜೆಪಿ ಮುಖಂಡರಾದ ವಸಂತಕುಮಾರ್, ಮಹೇಶ್, ಜ್ಞಾನಬುತ್ತಿಯ ಜೈನಹಳ್ಳಿ ಸತ್ಯನಾರಾಯಣಗೌಡ, ಗೆಜ್ಜಗಳ್ಳಿ ಮಹೇಶ್, ಡಾ.ಎಸ್.ವಿಶ್ವನಾಥ್, ಮಧು, ಪಟೇಲ್ ಸೇರಿದಂತೆ ಇತರರಿದ್ದರು.

ದೇಶ - ವಿದೇಶ


ಭಾರತೀಯ ಸೇನಾ ಹೆಲಿಕಾಪ್ಟರ್ ಪತನ; ಮೂವರು ಅಧಿಕಾರಿಗಳು ಪಾರು

ಲೇಹ್: ಲಡಾಖ್‌ನ ಲೇಹ್ ಬಳಿಯ ಟ್ಯಾಂಗ್ಸ್ಟೆ ಪರ್ವತ ಪ್ರದೇಶದಲ್ಲಿ ಭಾರತೀಯ ಸೇನೆಯ ಚೀತಾ ಹೆಲಿಕಾಪ್ಟರ್ ಮೇ 20ರಂದು ಪತನವಾಗಿದ್ದು, ತಡವಾಗಿ ವರದಿಯಾಗಿದೆ. ಈ ಅಪಘಾತದಲ್ಲಿ 3ನೇ ಪದಾತಿ ದಳದ ಜನರಲ್ ಆಫೀಸರ್ ಕಮಾಂಡಿಂಗ್ ಮೇಜರ್ ಜನರಲ್ ಸಚಿನ್ ಮೆಹ್ತಾ, ಹೆಲಿಕಾಪ್ಟರ್‌ನ್ನು ಚಾಲಿಸುತ್ತಿದ್ದ ಲೆಫ್ಟಿನೆಂಟ್ ಕರ್ನಲ್ ಮತ್ತು ಮೇಜರ್ ಚಾಲಕ ಸೇರಿ ಮೂವರು ಹಿರಿಯ ಸೇನಾಧಿಕಾರಿಗಳು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತದ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ನಡೆಸಿ, ಈ ಮೂವರನ್ನೂ ರಕ್ಷಣೆ ಮಾಡಲಾಗಿದೆ. ಅಪಘಾತದ ನಂತರ ಮೇಜರ್ ಜನರಲ್ ಸಚಿನ್ ಮೆಹ್ತಾ ಅವರು ಅಪಘಾತ ಸ್ಥಳದಲ್ಲೇ ಸೆಲ್ಫಿ ತೆಗೆದುಕೊಂಡಿದ್ದು, ಆ ಫೋಟೋ ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ವೈರಲ್ ಆಗುತ್ತಿದೆ. ಸೈನಿಕರ ಧೈರ್ಯ ಮತ್ತು ಮನೋಸ್ಥೈರ್ಯಕ್ಕೆ ಈ ಘಟನೆ ಸಾಕ್ಷಿಯಾಗಿದೆ ಎಂದು ನೆಟ್ಟಿಗರು ಪ್ರಶಂಸಿದ್ದಾರೆ. ಹೆಲಿಕಾಪ್ಟರ್ ಪತನಕ್ಕೆ ಕಾರಣ ಏನು ಎಂಬುದು ತಿಳಿದುಬಂದಿಲ್ಲ. ತಾಂತ್ರಿಕ ದೋಷ ಅಥವಾ ಹವಾಮಾನ ಸಂಬಂಧಿ ಕಾರಣಗಳ ಬಗ್ಗೆ ಸೇನೆಯು ಉನ್ನತ ಮಟ್ಟದ ತನಿಖೆಗೆ ಆದೇಶಿಸಿದೆ.



ಕಲ್ಲಿದ್ದಲು ಗಣಿಯಲ್ಲಿ ಸ್ಫೋಟ; 90ಕ್ಕೂ ಹೆಚ್ಚು ಕಾರ್ಮಿಕರು ಸಾವು

ಶಾಂಗೈ: ಕಲ್ಲಿದ್ದಲು ಗಣಿಯಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಭೀಕರ ಅನಿಲ ಸ್ಫೋಟದಲ್ಲಿ ಕನಿಷ್ಠ 90ಕ್ಕೂ ಹೆಚ್ಚು ಕಾರ್ಮಿಕರು ಸಾವನ್ನಪ್ಪಿರುವ ದುರ್ಘಟನೆ ಚೀನಾ ಉತ್ತರ ಭಾಗದ ಶಾಂಕ್ಸಿ ಪ್ರಾಂತ್ಯದ ಚಾಂಗ್‌ಝಿ ನಗರದಲ್ಲಿ ನಡೆದಿದೆ. ಅವಘಢದ ಸಮಯದಲ್ಲಿ ಗಣಿಯ ಒಳಗಡೆ ಇದ್ದ ಹಲವು ಕಾರ್ಮಿಕರು ಸಿಲುಕಿಕೊಂಡಿದ್ದು, ಅವರ ರಕ್ಷಣಾ ಕಾರ್ಯ ಭರದಿಂದ ಸಾಗುತ್ತಿದೆ. ಇಂದು ಸಾವಿನ ಸಂಖ್ಯೆ ತೀವ್ರವಾಗಿ ಏರಿಕೆಯಾಗಿದ್ದು, ಗಣಿಗಾರಿಕೆ ವಲಯದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.



ಘಟನೆ ವೇಳೆ ಒಟ್ಟು 247 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ರಕ್ಷಣಾ ತಂಡಗಳು ಇಂದು ಮುಂಜಾನೆ ವೇಳೆಗೆ 201 ಕಾರ್ಮಿಕರನ್ನು ರಕ್ಷಿಸಿ, ಸುರಕ್ಷಿತವಾಗಿ ಮೇಲಕ್ಕೆ ಕರೆತಂದಿದ್ದು ಉಳಿದವರಿಗಾಗಿ ತೀವ್ರ ಶೋಧ ಕಾರ್ಯ ಮುಂದುವರಿದಿದೆ. ಸದ್ಯಕ್ಕೆ ಈ ಸ್ಫೋಟಕ್ಕೆ ನಿಖರವಾದ ಕಾರಣವೇನೆಂಬುದು ತಿಳಿದುಬಂದಿಲ್ಲ.

ಈ ದುರಂತದ ಬೆನ್ನಲ್ಲೇ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದು, ನಾಪತ್ತೆಯಾದ ಕಾರ್ಮಿಕರನ್ನು ರಕ್ಷಣೆ ಹಾಗೂ ಘಟನೆ ಸಂಬಂಧ ಸಮಗ್ರ ತನಿಖೆ ನಡೆಸಲು ಸೂಚಿಸಿದ್ದಾರೆ.

ತಮಿಳುನಾಡಲ್ಲಿ 10 ವರ್ಷದ ಬಾಲಕಿ ಅಪಹರಿಸಿ ಹತ್ಯೆ; ಇಬ್ಬರ ಬಂಧನ

ತಮಿಳುನಾಡು: ಕೊಯಮತ್ತೂರಿನ ಸುಲೂರು ಪ್ರದೇಶದ ಕಣ್ಣಂಪಾಳಯಂ ಸರೋವರದ ಬಳಿ ಗಾಯಗಳಿಂದ ಕೂಡಿದ 10 ವರ್ಷದ ಬಾಲಕಿಯ ಶವ ಪತ್ತೆಯಾಗಿದ್ದು, ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಿದ ಆರೋಪದಡಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಾರ್ತಿಕ್ ಮತ್ತು ಮೋಹನ್ ರಾಜ್ ಬಂಧಿತ ಆರೋಪಿಗಳಾಗಿದ್ದು, ಇವರು ದಿನಸಿ ಖರೀದಿಸಲು ಅಂಗಡಿಗೆ ಹೋಗಿದ್ದ ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿ ವಿಜಯ್ ಅವರಿಂದ ನ್ಯಾಯದ ಭರವಸೆ ಸಿಗುವವರೆಗೂ ನಾವು ಶವವನ್ನು ತೆಗೆದುಕೊಂಡು ಹೋಗುವುದಿಲ್ಲ. ಈ ರೀತಿಯ ಕೃತ್ಯಗಳು ಆಗಬಾರದು ಎಂದು ಬದಲಾವಣೆಗೆ ಮತ ಹಾಕಿದ್ದೇವೆ. ಆದರೆ, ಅವರು ಈಗ ಯಾವುದೇ ಹೇಳಿಕೆ ಅಥವಾ ಭರವಸೆ ನೀಡುತ್ತಿಲ್ಲ ಎಂದು ಬಾಲಕಿಯ ಪೋಷಕರು ಮತ್ತು ಸಂಬಂಧಿಕರು ಸುಲೂರು ಪೊಲೀಸ್ ಠಾಣೆ ಬಳಿ ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ, ನೂರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ರಸ್ತೆ ತಡೆದು ಪ್ರತಿಭಟಿಸಿದ್ದಾರೆ. ತಮಿಳುನಾಡು ಪೊಲೀಸ್ ಮಹಾ ನಿರ್ದೇಶಕ ಸಂದೀಪ್ ರೈ ರಾಥೋಡ್ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಹೇಳಿದ್ದಾರೆ. ತಮಿಳುನಾಡಿನ ಕಾನೂನು-ಸುವ್ಯವಸ್ಥೆ ಪರಿಸ್ಥಿತಿ ಕುರಿತು ವಿಪಕ್ಷ ಡಿಎಂಕೆ ಕಿಡಿಕಾರಿದೆ.

ಅಮೆರಿಕ ಅಧ್ಯಕ್ಷ ಟ್ರಂಪ್ ಪುತ್ರಿ ಹತ್ಯೆಗೆ ಸಂಚು; ಆರೋಪಿ ಹಸ್ತಾಂತರ

ವಾಷಿಂಗ್ಟನ್: ಇರಾಕಿನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನಿಂದ ತರಬೇತಿ ಪಡೆದ ಗುಂಪೊಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ಪುತ್ರಿ ಇವಾಂಕಾ ಹತ್ಯೆಗೆ ಸಂಚು ನಡೆಸಿದ್ದ ವಿಚಾರ ಬೆಳಕಿಗೆ ಬಂದಿದೆ.




ಸಂಚು ರೂಪಿಸಿದ ಶಂಕಿತ ಆರೋಪಿಯನ್ನು 32 ವರ್ಷದ ಮೊಹಮ್ಮದ್ ಬಕರ್‌ಸಾದ್ ದಾವೂದ್ ಅಲ್-ಸಾದಿ ಎಂದು ಗುರುತಿಸಲಾಗಿದೆ. ಈತ 2020ರ ಯುಎಸ್ ಡ್ರೋನ್ ದಾಳಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಹಿಂದಿನ ಅವಧಿಯಲ್ಲಿ ಇರಾನಿನ ಮಿಲಿಟರಿ ಕಮಾಂಡರ್ ಖಾಸಿಮ್ ಸೊಲೈಮಾನಿಯನ್ನು ಕೊಂದಿದ್ದಕ್ಕಾಗಿ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದ್ದ ಎಂದು ಆರೋಪಿಸಲಾಗಿದೆ.

ಇವಾಂಕಾ ಅವರ ಫ್ಲೋರಿಡಾ ನಿವಾಸದ ನೀಲನಕ್ಷೆಯನ್ನು ಹೊಂದಿದ್ದ ಆರೋಪಿ, ನಿಮ್ಮ ಅರಮನೆಗಳು ಅಥವಾ ರಹಸ್ಯ ತಾಣಗಳು ನಿಮ್ಮನ್ನು ರಕ್ಷಿಸುವುದಿಲ್ಲ ಎಂದು ಆನ್‌ಲೈನ್ ಬೆದರಿಕೆಗಳನ್ನು ಪೋಸ್ಟ್ ಮಾಡಿದ್ದ. ಇವಾಂಕಾ ಅವರನ್ನು ಕೊಲ್ಲುವ ಬಗ್ಗೆ ಅಲ್-ಸಾದಿ ಪದೇ ಪದೆ ಮಾತನಾಡಿದ್ದಾನೆ ಎಂದು ಇರಾಕಿನ ಮಾಜಿ ರಾಜತಾಂತ್ರಿಕ ಎಂಟಿಫಾದ್ ಕಾನ್ಬರ್ ತಿಳಿಸಿದ್ದಾರೆ. ಮೇ 15 ರಂದು ಟರ್ಕಿಯಲ್ಲಿ ಬಂಧಿಸಿ, ಅಮೆರಿಕಕ್ಕೆ ಹಸ್ತಾಂತರಿಸಲಾಗಿದೆ. ಈತ ಯುರೋಪ್ ಮತ್ತು ಉತ್ತರ ಅಮೆರಿಕಾದಾದ್ಯಂತ 18 ದಾಳಿಗಳು ಮತ್ತು ದಾಳಿ ಪ್ರಯತ್ನಗಳಲ್ಲಿ ಭಾಗಿಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆಲಂಗಾಣದ ಬಳಿಕ ರಣಬಿಸಿಲಿಗೆ ಆಂಧ್ರದಲ್ಲಿ ಒಂದೇ ದಿನ 21 ಮಂದಿ ಬಲಿ

ಆಂಧ್ರಪ್ರದೇಶ: ಬಿಸಿಲಿನ ತಾಪಕ್ಕೆ ಆಂಧ್ರಪ್ರದೇಶದಲ್ಲಿ ಒಂದೇ ದಿನದಲ್ಲಿ ಬರೋಬ್ಬರಿ 21 ಮಂದಿ ಸಾವನ್ನಪ್ಪಿರುವುದಾಗಿ ವರದಿಯಾಗಿವೆ.



ಮೇ 21ರಂದು 46 ಡಿಗ್ರಿ ಸೆಲ್ಸಿಯಸ್ ತಾಪಮಾನಕ್ಕೆ ಒಂದೇ ದಿನದಲ್ಲಿ ತೆಲಂಗಾಣ ರಾಜ್ಯಾದ್ಯಲ್ಲಿ ಬಿಸಿಲಿನ ರಣಾರ್ಭಟದಿಂದ 22 ಮಂದಿ ಅಸುನೀಗಿದ್ದರು. ಇದರ ಬೆನ್ನಲ್ಲೇ ಮೇ 22 ರಂದು ಆಂಧ್ರ ಪ್ರದೇಶದಲ್ಲೂ ರಣಬಿಸಿಲಿಗೆ 21 ಮಂದಿ ಸಾವನ್ನಪ್ಪಿದ್ದು, ಇದರಿಂದ ತೆಲುಗು ರಾಜ್ಯಗಳಲ್ಲಿ ಆತಂಕ ಹೆಚ್ಚಾಗಿದೆ. ಆಂಧ್ರದ ವಿಜಯವಾಡ ಜಿಲ್ಲೆಯೊಂದರಲ್ಲೇ 10 ಮಂದಿ ಸಾವನ್ನಪ್ಪಿದ್ದು, ಈ ಪೈಕಿ ಇಬ್ಬರ ಗುರುತು ಮಾತ್ರ ಪತ್ತೆಯಾಗಿದೆ. ಉಳಿದಂತೆ 8 ಮಂದಿ ಅಪರಿಚಿತ ಭಿಕ್ಷುಕರಾಗಿದ್ದಾರೆ. ಸೀತಾರಾಮಪುರಂನ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾದ 40 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಸಾವನ್ನಪ್ಪಿದ್ದಾರೆ. ಹನುಮಾನಪೇಟೆಯ 50 ವರ್ಷದ ವ್ಯಕ್ತಿ ರಾಘವಯ್ಯಾ ಪಾರ್ಕ್ ಬಳಿ, 65 ವರ್ಷದ ವೃದ್ಧ ಬೇಸಂಟ್ ರಸ್ತೆಯಲ್ಲಿನ ಎಲ್‌ಐಸಿ ಕಚೇರಿ ಬಳಿ ಕುಸಿದು ಬಿದ್ದು ಅಸುನೀಗಿದ್ದಾರೆ. ಪಶ್ಚಿಮ ಗೋದಾವರಿ ಜಿಲ್ಲೆಯ ಪಾಲಕೊಲ್ಲು ತಾಲೂಕಿನ ಪೂಲಪಲ್ಲಿಯಲ್ಲಿ ಮೂಲತಃ ಒಡಿಶಾದ 28 ವರ್ಷದ ಯುವಕ ಮೃತಪಟ್ಟಿದ್ದಾನೆ. ಹೀಗೆ ಸಾಲು ಸಾಲು ಸಾವುಗಳಿಂದ ಜನರು ಆತಂಕಗೊಂಡಿದ್ದಾರೆ.

ಬಕ್ರೀದ್ ಹಿನ್ನೆಲೆ: ವಿರಾಜಪೇಟೆಯಲ್ಲಿ ಡಿವೈಎಸ್‌ಪಿ ಶಾಂತಿ ಸಭೆ



ಬಕ್ರೀದ್ ಹಬ್ಬದ ಪ್ರಯುಕ್ತ ಡಿವೈಎಸ್‌ಪಿ ಮಹೇಶ್ ಕುಮಾರ್ ಶಾಂತಿಸಭೆ ನಡೆಸಿದರು.

ವಿರಾಜಪೇಟೆ, ಮೇ.23–ಹಬ್ಬ ಹರಿದಿನಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪ್ರತಿಯೊಬ್ಬರು ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬ ಉತ್ಸವಗಳನ್ನು ಆಚರಿಸಬೇಕು ಎಂದು ಡಿವೈಎಸ್‌ಪಿ ಮಹೇಶ್ ಕುಮಾರ್ ಹೇಳಿದರು.

ಬಕ್ರೀದ್ ಹಬ್ಬದ ಪ್ರಯುಕ್ತ ವೃತ್ತನಿರೀಕ್ಷಕರ ಕಛೇರಿ ಸಭಾಂಗಣದಲ್ಲಿ ನಡೆದ ಉಪ ವಿಭಾಗ ಮಟ್ಟದ ವಿರಾಜಪೇಟೆ, ಗೋಣಿಕೊಪ್ಪ, ಪೊನ್ನಂಪೇಟೆ ಮತ್ತು ಕುಟ್ಟ ವಾಸಿಗಳ ಮುಖಂಡರಿಗೆ ಆಯೋಜಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಬಕ್ರೀದ್ ಹಬ್ಬದ ಸಂದರ್ಭ ಅಕ್ರಮ ಜಾನುವಾರು ಸಾಗಾಟ ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ರಾಜ್ಯ ಮತ್ತು ಜಿಲ್ಲಾ ವ್ಯಾಪ್ತಿಯ ಚೆಕ್‌ಪೋಸ್ಟ್‌ಗಳಲ್ಲಿ ನಿಗಾ ವಹಿಸಲಾಗಿದೆ ಎಂದು ಎಚ್ಚರಿಸಿದರು.

ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಮಾತನಾಡಿ, ಎಲ್ಲರ ಒಗ್ಗಟ್ಟಿನಿಂದ ಶಾಂತಿಯುತವಾಗಿ ಹಬ್ಬವನ್ನು ಆಚರಿಸುವಂತಾಗಬೇಕು ಎಂದರು.

ಶಾಂತಿ ಸಭೆಯಲ್ಲಿ ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿಗಳಾದ ಹೆಚ್.ಎಸ್. ಪ್ರಮೋದ್, ಲತಾ, ಹಾಗೂ ಸಿಬ್ಬಂದಿಗಳು ಹಾಜರಿದ್ದರು. ಸಭೆಯಲ್ಲಿ ವಾಸೀದಿಗಳ ಮುಖಂಡರು, ಹಿಂದೂ ಸಂಘಟನೆಯ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ಪತಿಯ ಅಂಗಾಂಗ ದಾನ

ಅಗಲಿಕೆಯ ನೋವಿನಲ್ಲೂ ಪತ್ನಿಯ ಮಾನವೀಯತೆ



ಮೃತದೇಹಕ್ಕೆ 'ವಾಕ್ ಆಫ್ ಆನರ್' ಮೂಲಕ ಅಂತಿಮ ಗೌರವ ಸಲ್ಲಿಸಿದರು.

ಮಡಿಕೇರಿ, ಮೇ 23–ಪತಿಯ ಸಾವಿನಲ್ಲೂ ಅಂಗಾಂಗ ದಾನಕ್ಕೆ ಪತ್ನಿ ಒಪ್ಪಿಗೆ ಸೂಚಿಸಿದ ಪ್ರಸಂಗವೊಂದು ಪೊನ್ನಂಪೇಟೆ ತಾಲೂಕಿನ ಅರವತ್ತೊಕ್ಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಡಾಲು ಎಂಬವರು ಮೃತಪಟ್ಟಿದ್ದು, ರಾಜೇಶ್ವರಿ ಪತಿಯ ಅಂಗಾಂಗ ದಾನ ಮಾಡಲು ಸಮ್ಮತಿ ನೀಡಿದ್ದಾರೆ. ಇದರ ಜೊತೆಯಲ್ಲೇ ಜಿಲ್ಲಾ ವೈದ್ಯಕೀಯ ಆಸ್ಪತ್ರೆಯಲ್ಲಿಯೂ ಇದೇ ಪ್ರಥಮ ಬಾರಿಗೆ ಅಂಗಾಂಗ ದಾನ ಪ್ರಕ್ರಿಯೆ ನಡೆದಿದ್ದು, ಹೊಸ ಇತಿಹಾಸಕ್ಕೆ ಮುನ್ನುಡಿ ಬರೆಯಲಾಯಿತು.

ಪ್ರಕರಣ ಹಿನ್ನೆಲೆ: ಅರವತ್ತೊಕ್ಲು ಗ್ರಾಮದ 46 ವರ್ಷದ ಡಾಲುರವರಿಗೆ ಮೇ 17ರ ರಾತ್ರಿ ಮನೆಯಲ್ಲಿ ಬಿದ್ದು ತಲೆಗೆ ಗಾಯವಾಗಿದ್ದು, ಗೋಣಿಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮನೆಗೆ ಕರೆದೊಯ್ಯಲಾಗಿದೆ. ಅನಂತರವೂ ಆರೋಗ್ಯದಲ್ಲಿ ತೀವ್ರ ಏರುಪೇರು ಕಂಡು ಬಂದ ಹಿನ್ನೆಲೆಯಲ್ಲಿ ವೈದ್ಯರ ಸಲಹೆಯಂತೆ 108ರ ಆಂಬುಲೆನ್ಸ್‌ನಲ್ಲಿ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಸಿಟಿ ಸ್ಕ್ಯಾನ್ ಮಾಡಿದಾಗ ತಲೆಯ ಒಳ ಭಾಗದಲ್ಲಿ ಗಂಭೀರ ಗಾಯವಾಗಿ ಮಿದುಳು ನಿಷ್ಕ್ರಿಯವಾಗಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಮೇ 22ರಂದು ಬ್ರೇನ್ ಡೆತ್ ಎಂದು ವೈದ್ಯರು ದೃಢಪಡಿಸಿದರು.

ಅಂಗಾಂಗ ದಾನಕ್ಕೆ ಸಮ್ಮತಿ: ಡಾಲು ಅವರ ಮಿದುಳು ನಿಷ್ಕ್ರಿಯವಾಗಿದ್ದು, ಬದುಕುಳಿಯುವ ಸಾಧ್ಯತೆ ಇಲ್ಲ ಅಂಗಾಂಗ ದಾನ ಮಾಡುವಂತೆ ಸಮಾಲೋಚಕರ ಮನವಿಗೆ ಪತ್ನಿ ಮತ್ತು ಕುಟುಂಬ ಸಮ್ಮತಿ ನೀಡಿದ ಹಿನ್ನೆಲೆಯಲ್ಲಿ, ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜು, ಜೆಎಸ್‌ಎಸ್ ಆಸ್ಪತ್ರೆ ಮತ್ತು ಬೆಂಗಳೂರಿನ ನಾರಾಯಣ ಹೃದಯಾಲಯ ತಮ್ಮಲ್ಲಿರುವ ರೋಗಿಗಳಿಗೆ ಬೇಕಾದ ಅಂಗಾಂಗಗಳ ಕುರಿತು ಮಾಹಿತಿ ಒದಗಿಸಿದರು.

ಅಂಗಾಂಗ ಸಂಗ್ರಹ ಪ್ರಕ್ರಿಯೆ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರಾದ ಎ.ಜೆ.ಲೋಕೇಶ್, ಡಾ. ಸೋಮಶೇಖರ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ನಂಜುಂಡಯ್ಯ ಅರಿವಳಿಕೆ ತಂಡದ ಡಾ.ನಿಶಿದ್ ಜೋಸೆಫ್ ಹಾಗೂ ನರ್ಸಿಂಗ್ ಅಧಿಕಾರಿ ಪವನ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ನಿನ್ನೆ ನಡುರಾತ್ರಿ 2 ಗಂಟೆ ಸಮಯದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ 2 ಮೂತ್ರಪಿಂಡ, ಹೃದಯ ಮತ್ತು ಕಣ್ಣುಗಳ ಕಾರ್ನಿಯಾಗಳನ್ನು ಯಶಸ್ವಿಯಾಗಿ ಸಂಗ್ರಹಿಸಿ ಮೈಸೂರಿನಿಂದ ಆಗಮಿಸಿದ ಯೂರೋ ಸರ್ಜನ್‌ಗಳಾದ ಡಾ.ಸುಬ್ರಿ ಧಾರವಾಡ್ ಮತ್ತು ಡಾ.ವಿಜಯ ಕುಮಾರ್ ಮೂತ್ರಪಿಂಡ ಸಂಗ್ರಹಣೆ ಮಾಡಿದರು. ಡಾ. ಅಭಿನಂದನ್ ಮತ್ತು ಡಾ.ಚಂದ್ರಶೇಖರ್ ಹೃದಯ ಕವಾಟಗಳನ್ನು, ಡಾ.ಶ್ರುತಿ ಮತ್ತು ತಂಡ ಕಾರ್ನಿಯಾಗಳನ್ನು ಸಂಗ್ರಹಿಸಿದರು. ನರ್ಸಿಂಗ್ ಸಿಬ್ಬಂದಿ ಜಯಶ್ರೀ, ಅನಿಲ್ ಮತ್ತು ಮಂಜುನಾಥ್ ಹಾಗೂ ಹಿರಿಯ ನರ್ಸಿಂಗ್ ಅಧಿಕಾರಿಗಳಾದ ವಸಂತ್ ಮತ್ತು ಮಹೇಶ್ ಈ ಕಾರ್ಯಕ್ಕೆ ಕೈ ಜೋಡಿಸಿದರು. ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಗ್ರೀನ್‌ರೋ ಟ್ರಾಫಿಕ್ ಮೂಲಕ ಆಯಾ ಆಸ್ಪತ್ರೆಗಳಿಗೆ ಕೊಂಡೊಯ್ಯಲಾಯಿತು.

ಗೌರವ ಸಮರ್ಪಣೆ: ಕೊಡಗು ಮೆಡಿಕಲ್ ಕಾಲೇಜು ಡೀನ್ ಡಾ.ಲೋಕೇಶ್, ಜಿಲ್ಲಾಸ್ಪತ್ರೆ ಮುಖ್ಯ ಶಸ್ತ್ರಚಿಕಿತ್ಸಕ ಡಾ. ಸೋಮಶೇಖರ್, ಡಾ.ನಂಜುಂಡಯ್ಯ, ಡಾ.ನಿಶಿದ್ ಜೋಸೆಫ್, ಡಾ.ಅತೀಕ್, ಡಾ.ಉಮೇಶ್ ಬಾಬು, ಡಾ. ಕಿಶೋರ್ ಕುಮಾರ್, ಡಾ.ಪ್ರಸನ್ನ, ಕೌನ್ಸಿಲರ್‌ಗಳಾದ ವಿನೋದ್ ಕುಮಾರ್, ಕಾರ್ತಿಕ್, ಸ್ನಾತಕೋತ್ತರ ವೈದ್ಯರು, ಶುಶ್ರೂಷಕ ಅಧಿಕಾರಿ, ತಾಂತ್ರಿಕ ಮತ್ತು ಜಿಲ್ಲಾಸ್ಪತ್ರೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಮೃತ ಡಾಲು ಅವರ ಮೃತದೇಹಕ್ಕೆ 'ವಾಕ್ ಆಫ್ ಆನರ್' ಮೂಲಕ ಅಂತಿಮ ಗೌರವ ಸಲ್ಲಿಸಿದರು.

ಇದೇ ವೇಳೆ ಪತ್ನಿಗೆ ಅಂಗಾಂಗ ದಾನದ ಪ್ರಮಾಣ ಪತ್ರವನ್ನು ಹಸ್ತಾಂತರ ಮಾಡಲಾಯಿತು. ವೈದ್ಯಕೀಯ ತಂಡ ಅಂಗಾಂಗ ದಾನಿಯ ಕುಟುಂಬದ ಮಾನವೀಯತೆಗೆ ಶ್ಲಾಘನೆ ವ್ಯಕ್ತಪಡಿಸಿದರು. ಬಳಿಕ ಮೃತದೇಹವನ್ನು ಅಂತ್ಯಕ್ರಿಯೆಗಾಗಿ ಡಾಲು ಅವರ ಹುಟ್ಟೂರಿಗೆ ಕೊಂಡೊಯ್ಯಲಾಯಿತು.

ಕುಟ್ಟಂದಿ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿ



ಕುಟ್ಟಂದಿ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ಮಡಿಕೇರಿ, ಮೇ 23– ವಿರಾಜಪೇಟೆ ತಾಲೂಕಿನ ಬಿ.ಶೆಟ್ಟಿಗೇರಿ ಪಂಚಾಯಿತಿ ವ್ಯಾಪ್ತಿಯ ಕುಟ್ಟಂದಿ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾದ ಘಟನೆ ವರದಿಯಾಗಿದೆ.

ಬಲ್ಲಡಿಚಂಡ ವಿಜುಕುಶಾಲಪ್ಪ ಅವರಿಗೆ ಸೇರಿದ ಹಸುವಿನ ಮೇಲೆ ಹುಲಿ ದಾಳಿ ಮಾಡಿ ಕೊಂದು ಹಾಕಿದ್ದು, ಮಾಲೀಕರಿಗೆ ನಷ್ಟ ಉಂಟಾಗಿದೆ. ಮಾಹಿತಿ ಅರಿತು ಸ್ಥಳಕ್ಕೆ ಸ್ಥಳೀಯ ಬಿಜೆಪಿ ಪ್ರಮುಖರು ಭೇಟಿ ನೀಡಿ ಅರಣ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಬಿಜೆಪಿ ಕೃಷಿ ಮೋರ್ಚಾದ ಅಧ್ಯಕ್ಷ ರಂಜಿ ಪೂಣಚ್ಚ, ಈ ಭಾಗದಲ್ಲಿ ಆನೆ ಮತ್ತು ಹುಲಿಗಳ ದಾಳಿ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಲು ಇಲಾಖೆ ಸಂಪೂರ್ಣ ವಿಫಲ ವಾಗಿದೆ. ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯನ್ನು ಆಗ್ರಹಿಸಿದರು.

ಸ್ಥಳೀಯ ಪ್ರಮುಖರಾದ ಲಾಲಾಭೀಮಯ್ಯ ಮಾತನಾಡಿ, ಇತ್ತೀಚೆಗೆ ಈ ಭಾಗದಲ್ಲಿ ಹುಲಿಯ ಚಲನವಲನ ಇರುವ ಬಗ್ಗೆ ಮಾಹಿತಿ ನೀಡಿದ್ದರು ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದ್ದೇ ಈ ಘಟನೆಗೆ ಕಾರಣವಾಗಿದೆ ಎಂದು ಆರೋಪಿಸಿದರು. ಅರಣ್ಯ ಇಲಾಖೆ ಆರ್‌ಎಫ್‌ಒ ಶ್ರೀಧರ್ ಮಾತನಾಡಿ, ಘಟನೆ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುತ್ತದೆ. ಶೀಘ್ರದಲ್ಲೇ ಸೂಕ್ತ ಸ್ಥಳಗಳಲ್ಲಿ ಕ್ಯಾಮರ ಅಳವಡಿಸಿ ಹುಲಿಯನ್ನು ಪತ್ತೆ ಹಚ್ಚುವ ಭರವಸೆ ನೀಡಿದರು. ಗ್ರಾಮಸ್ಥರಾದ ಮದ್ರೀರ ಗಿರೀಶ್, ಕೊಲ್ಲೀರ ಸಂಜು, ಕುಪ್ಪಂಡ ದಿಲನ್ ಹಾಜರಿದ್ದರು.

ಜಿಲ್ಲೆಯಲ್ಲಿ ಸಾಹಿತ್ಯ ಪ್ರಕಾರ ಶ್ರೀಮಂತವಾಗಿದೆ




ತಾಲೂಕು ಸಮ್ಮೇಳನದ ನಿಯೋಜಿತ ಅಧ್ಯಕ್ಷ ಅಬ್ದುಲ್ ರಶೀದ್ ಅವರನ್ನು ಪತ್ರಕರ್ತರ ಸಂಘ ಅಭಿನಂದಿಸಿತು

ಸುಂಟಿಕೊಪ್ಪ: ಸಾಹಿತ್ಯಾಸಕ್ತರಿಗೆ ಜಿಲ್ಲೆಯಲ್ಲಿ ಎಲ್ಲಾ ರೀತಿಯಲ್ಲಿ ಪ್ರೋತ್ಸಾಹದಾಯಕ ವಾತಾವರಣ ಇರುವುದರಿಂದಲೇ ಜಿಲ್ಲೆಯಲ್ಲಿ ಸಾಹಿತ್ಯ ಪ್ರಕಾರಗಳು ಶ್ರೀಮಂತವಾಗಿ ಇದೆ ಎಂದು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಅಬ್ದುಲ್ ರಶೀದ್ ಶ್ಲಾಘಿಸಿದ್ದಾರೆ.

ಕೊಡಗು ವಿಭಿನ್ನ ಧಾರ್ಮಿಕ, ಸಮುದಾಯಗಳ ಸಹಭಾಳ್ವೆಗೆ ಸಾಕ್ಷಿಯಾಗಿ ವಿಶಿಷ್ಟ ಜೀವನ ಶೈಲಿಯನ್ನು ಅಳವಡಿಸಿಕೊಂಡಿರುವ ಜನರನ್ನು ಹೊಂದಿದೆ. ಕುವೆಂಪು, ದೇವನೂರ ಮಹದೇವ, ತೇಜಸ್ವಿ, ಅನಂತಮೂರ್ತಿ, ಪಿ.ಲಂಕೇಶ್, ಎಂ.ಕೆ. ಇಂದಿರಾ, ಎಂ.ವ್ಯಾಸ, ಕೆ.ಟಿ.ಗಟ್ಟಿ, ಯಶವಂತ ಚಿತ್ತಾಲ, ಮಲಯಾಳದ ಖ್ಯಾತ ಲೇಖಕ ವೈಕಂ ಮಹಮ್ಮದ್ ಬಷೀರ್ ತನ್ನ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಲೇಖಕರಾಗಿದ್ದಾರೆ ಎಂದರು.

ಹೆಚ್.ಟಿ.ಅನಿಲ್, ಎಸ್.ಜಿ. ಉಮೇಶ್, ಬಿ.ಸಿ. ದಿನೇಶ್, ಎಂ.ಬಿ.ವಿನ್ಸೆಂಟ್, ಕೆ.ಎಸ್.ಅನಿಲ್ ಕುಮಾರ್, ನವೀನ್ ಚಿಣ್ಣಪ್ಪ ರವಿಕುಮಾರ್ ಸಂವಾದದಲ್ಲಿದ್ದರು.

ಇಂದ್ರೇಶ್ ಆರೋಗ್ಯ ವಿಚಾರಿಸಿದ ಸಿ.ಎಸ್.ಪುಟ್ಟರಾಜು



ಬಿಜೆಪಿ ಮಂಡ್ಯ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಮನೆಗೆ ಹೋಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆರೋಗ್ಯ ವಿಚಾರಿಸಿದರು.

ಪಾಂಡವಪುರ, ಮೇ 23–ಇತ್ತೀಚೆಗೆ ಸೊಂಟದ ಕೀಲುನೋವಿನ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಮನೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರು ಭೇಟಿಕೊಟ್ಟು ಇಂದ್ರೇಶ್ ಅವರು ಆರೋಗ್ಯ ವಿಚಾರಿಸಿದರು.

ಜಿಲ್ಲೆಯಲ್ಲಿ ಎನ್‌ಡಿಎ ಮೈತ್ರಿ ಸಂಬಂಧವಾಗಿ ಬಿಜೆಪಿಯ ಕೆಲನಾಯಕರು ಅಸಮಾಧಾನವನ್ನು ಸಹ ಹೊರಹಾಕಿದ್ದರು. ಇದರ ನಡುವೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅನಾರೋಗ್ಯಕ್ಕೆ ಒಳಗಾಗಿರುವ ಡಾ.ಎನ್.ಎಸ್.ಇಂದ್ರೇಶ್ ಮನೆಗೆ ಭೇಟಿಕೊಟ್ಟು ಆರೋಗ್ಯ ವಿಚಾರಿಸುವ ಮೂಲಕ ಎನ್‌ಡಿಎ ಮೈತ್ರಿ ಗಟ್ಟಿಯಾಗಿದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆ, ಎನ್‌ಡಿಎ ಮೈತ್ರಿ ಬಗ್ಗೆ ಇಲ್ಲಸಲ್ಲದ ಆರೋಪವಾಡಿ ಚರ್ಚಿಸುತ್ತಿದ್ದ ವಿರೋಧ ಪಕ್ಷಗಳ ನಾಯಕರಿಗೂ ಟಕ್ಕರ್‌ಕೊಟ್ಟಿದ್ದಾರೆ.

ಪದವಿ ನಂತರ ನಿರ್ಲಕ್ಷ್ಯ ಸಲ್ಲದು

ಭಾರತೀ ಕಾಲೇಜಿನ ವಿಜ್ಞಾನ, ಕಲಾ, ವಾಣಿಜ್ಯ ಹಾಗೂ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮಂಡ್ಯ ವಿವಿ ಉಪಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ಭಾರತೀ ಕಾಲೇಜಿನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಭಾರತೀನಗರ ಮೇ 23–ವಿದ್ಯಾರ್ಥಿಗಳು ಪದವಿ ಪಡೆದರೆ ಸಾಲದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮುನ್ನುಗ್ಗುವ ಪ್ರವೃತ್ತಿ ಬೆಳೆಸಿಕೊಳ್ಳಬೇಕೆಂದು ಉಪಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ತಿಳಿಸಿದರು.

ಇಲ್ಲಿನ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ನಡೆದ ವಿಜ್ಞಾನ, ಕಲಾ, ವಾಣಿಜ್ಯ ಹಾಗೂ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಪದವಿ ಪಡೆದ ನಂತರ ನಿರ್ಲಕ್ಷ್ಯರಾಗದೆ ಸಂಶೋಧನೆಯತ್ತ ಗಮನಹರಿಸಬೇಕು. ದೇಶಕ್ಕೆ ಸಂಶೋಧನೆಗಳ ಯಶಸ್ಸಿನ ಅಗತ್ಯತೆ ಇದೆ. ಯುಪಿಎಸ್‌ಸಿ ಪರೀಕ್ಷೆಗಳನ್ನು ತೆಗೆದುಕೊಂಡು ತಮ್ಮ ಬುದ್ದಿ ಶಕ್ತಿಯನ್ನು ಪ್ರದರ್ಶಿಸಬೇಕು. ಹಲವಾರು ಬುದ್ಧಿ ಜೀವಿಗಳು 70 ವರ್ಷದ ನಂತರವೂ ಪಿಎಚ್‌ಡಿ ಪದವಿ ಪಡೆಯಲು ಮುಂದಾಗುತ್ತಿದ್ದಾರೆ. ಹಾಗಾಗಿ ತಮ್ಮ ಕೌಶ್ಯತೆಯನ್ನು ನಿಮ್ಮ ವಿದ್ಯಾಭ್ಯಾಸದ ಜೀವನದಲ್ಲಿ ಬೆಳೆಸಿಕೊಂಡು ಕ್ರಿಯಾಶೀಲರಾಗಬೇಕೆಂದರು.

ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಪರಿವೀಕ್ಷಕ ಪ್ರೊ.ಎನ್.ನಾಗರಾಜು ಮಾತನಾಡಿ, ಪ್ರಸ್ತುತ ಜಾಗತೀಕರಣ ಹಾಗೂ ಸ್ಪರ್ಧಾತ್ಮಕ ಯುಗವಾಗಿದ್ದು ಇಲ್ಲಿ ಸಾಧನೆ ಮಾಡುವುದು ಸುಲಭವಲ್ಲ, ಪ್ರಬಲವಾದ ಶ್ರದ್ಧೆ, ಸಮಯ ಪ್ರಜ್ಞೆ, ಶಿಸ್ತು ರೂಢಿಸಿಕೊಂಡಲ್ಲಿ ಗುರಿಯೆಡೆಗೆ ಸಾಗುವುದು ಸುಲಭವಾಗುತ್ತದೆ. ಈ ರೀತಿಯ ಸಾಧನೆ ಮಾಡಿರುವವರು ಸಮಾಜದಲ್ಲಿ ಸಾಕಷ್ಟು ಮಂದಿ ಇದ್ದಾರೆಂದರು.

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪರೀಕ್ಷಾ ನಿಯಂತ್ರಕ ಸುಂದರೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕಲಾ, ವಾಣಿಜ್ಯ, ವಿಜ್ಞಾನ ಮತ್ತು ಗಣಯಂತ್ರ ಹಾಗೂ ಸ್ನಾತಕೋತ್ತರ ವಿಭಾಗದಿಂದ ಒಟ್ಟು 503 ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲಾಯಿತು. ಇದರಲ್ಲಿ ಅತಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಪ್ರಥಮ, ದ್ವಿತೀಯ ಮತ್ತು ತೃತೀಯ ರ‍್ಯಾಂಕ್ ವಿದ್ಯಾರ್ಥಿಗಳಿಗೆ ನಗದು ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಬಿಇಟಿ ಕಾರ್ಯದರ್ಶಿಗಳಾದ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಎಸ್.ನಾಗರಾಜು, ಪ್ರಾಂಶುಪಾಲ ಮಹದೇವಸ್ವಾಮಿ, ಪ್ರಾಂಶುಪಾಲ ಮಲ್ಲಿಕಾರ್ಜುನ್, ಉಪ ಪರೀಕ್ಷಾ ನಿಯಂತ್ರಕ ಕೆ.ಟಿ.ಗಣೇಶ್, ಟ್ರಸ್ಟಿಗಳಾದ ಬಸವೇಗೌಡ, ಜಯರಾಮು ಇದ್ದರು.

ದ್ವಿಚಕ್ರ ವಾಹನಕ್ಕೆ ಬೊಲೆರೋ ವಾಹನ ಡಿಕ್ಕಿ

ಸ್ಥಳದಲ್ಲೇ ಸವಾರನ ಸಾವು



ನಜ್ಜುಗುಜ್ಜಾಗಿರುವ ಸ್ಕೂಟರ್

ನಾಗಮಂಗಲ: ಪಟ್ಟಣದ ಬಿಂಡಿಗನವಿಲೆ ರಸ್ತೆಯ ಸಾರಿ ಮೇಗಲ ಕೊಪ್ಪಲು ಗ್ರಾಮದ ಸಮೀಪ ನಡೆದ ರಸ್ತೆ ಅಪಘಾತದಲ್ಲಿ ಹೂವಿನ ಹಳ್ಳಿ ಗ್ರಾಮದ ಅರ್ಚಕರೊಬ್ಬರು ಸ್ಥಳದಲ್ಲೇ ಅಸುನೀಗಿರುವ ಘಟನೆಯೊಂದು ಸಂಭವಿಸಿದೆ.

ಹೂವಿನಹಳ್ಳಿ ಗ್ರಾಮದಲ್ಲಿ ಪಡಲ್ಲದಮ್ಮ ದೇವಿಯ ಪೂಜಾರಿ ಶಂಭೋಗೌಡ(45) ಪಟ್ಟಣದಲ್ಲಿ ಕೆಲಸ ಮುಗಿಸಿಕೊಂಡು ಸ್ವಗೃಹಕ್ಕೆ ಹಿಂದಿರುಗುತ್ತಿದ್ದ ಸಂದರ್ಭದಲ್ಲಿ ಬಿಂಡಿಗನವಿಲೆ ಮಾರ್ಗದಿಂದ ವೇಗವಾಗಿ ಬಂದ ಎಚ್‌ಸಿಕೆ ಸಿಮೆಂಟ್ ಟ್ರೇಡರ್ಸ್‌ಗೆ ಸೇರಿದ ಬೊಲೆರೋ ವಾಹನ(ಕೆಎ–11, ಡಿ–1103) ಎದುರಿನಿಂದ ಬರುತ್ತಿದ್ದ ಆಕ್ಟಿವ ಹೋಂಡಾ ದ್ವಿಚಕ್ರ ವಾಹನಕ್ಕೆ (K.A 54, ಆರ್–5989) ಡಿಕ್ಕಿ ಹೊಡೆದಿದೆ. ಚಾಲಕನ ಅತಿ ವೇಗ ಹಾಗೂ ಅಜಾಗರೂಕತೆಗೆ ಕಾರಣವಾಗಿದ್ದು, ಅಪಘಾತವಾದ ಕೂಡಲೇ ಬೊಲೆರೋ ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದಾನೆ. ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದರೆ ಮಾತ್ರ ತಾಲೂಕಿನ ಸಮಗ್ರ ಅಭಿವೃದ್ಧಿ

ಕೆ.ಆರ್.ಪೇಟೆ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಕ್ರೀಡಾ, ಸಾಂಸ್ಕೃತಿಕ ಹಾಗೂ ಎನ್.ಎಸ್.ಎಸ್. ಚಟುವಟಿಕೆಗಳ ಸಮಾರೋಪ ಸಮಾರಂಭವು ಶಾಸಕ ಹೆಚ್.ಟಿ.ಮಂಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೂಲ ಸೌಲಭ್ಯಗಳ ಜೊತೆಗೆ ಶೈಕ್ಷಣಿಕವಾಗಿಯೂ ಉತ್ತಮ ಸಾಧನೆ ಮಾಡಿದರೆ ಮಾತ್ರ ತಾಲೂಕು ಸಮಗ್ರ ಅಭಿವೃದ್ಧಿಯಾಗಿದೆ ಎಂದು ಅರ್ಥೈಸಲಾಗುತ್ತದೆ. ಹಾಗಾಗಿ ತಾಲೂಕಿನಲ್ಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಪಂ ಸಿಇಓ ನಂದಿನಿ ಅವರ ಪರಿಶ್ರಮದಿಂದ ಹಾಗೂ ಸ್ಥಳೀಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಕಾರದಿಂದ ಜಿಲ್ಲೆಯು ರಾಜ್ಯದಲ್ಲಿ ಐದನೇ ಸ್ಥಾನ, ಜಿಲ್ಲಾ ಮಟ್ಟದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದರು.

ಮಹಿಳಾ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಕೆಂಡಗಣ್ಣೇ ಗೌಡ ಮಾತನಾಡಿದರು. ಸಮಾರಂಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಎ.ಟಿ.ಕರಿಶೆಟ್ಟಿ, ಕಿಕ್ಕೇರಿ ಕೆ.ಬಿ.ಮಧು, ವಾಸು, ಹೊಸಹೊಳಲು ವೆಂಕಟಾಚಲ, ಪ್ರಾಂಶುಪಾಲ ಡಾ.ವಿ.ವಿ.ಜಗದೀಶ್, ಮಹಿಳಾ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಕೆಂಡಗಣ್ಣೇ ಗೌಡ, ಕಾಲೇಜಿನ ಪ್ರಾಧ್ಯಾಪಕರಾದ ಡಾ.ಜಯಕೀರ್ತಿ, ಡಾ.ಮಹೇಶ್, ಪ್ರೊ. ಬೋರೇಗೌಡ, ಪ್ರೊ.ಉಮೇಶ್, ಡಾ.ಸವಿತಾ, ಪತ್ರಾಂಕಿತ ವ್ಯವಸ್ಥಾಪಕಿ ಜೆ.ಭುವನೇಶ್ವರಿ, ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸಿ.ಬಿ.ಚೇತನ್ ಕುಮಾರ್, ಉಪಾಧ್ಯಕ್ಷ ದ್ವಿತೀಯ ದರ್ಜೆ ಸಹಾಯಕ ರಾಯಸಮುದ್ರ ಶಿವರಾಂ, ಸೇರಿದಂತೆ ಕಾಲೇಜಿನ ಎಲ್ಲಾ ಉಪನ್ಯಾಸಕರು, ಅತಿಥಿ ಉಪನ್ಯಾಸಕರು, ಆಡಳಿತ ವರ್ಗದ ನೌಕರರು ಉಪಸ್ಥಿತರಿದ್ದರು.



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಸಕ ಮಂಜು ನೆನಪಿನ ಕಾಣಿಕೆಗಳನ್ನು ವಿತರಿಸಿದರು.

ಎಲ್ಲೆಂದರಲ್ಲಿ ಕಸ ಹಾಕುವವರಿಗೆ ದಂಡ



ತ್ಯಾಜ್ಯವನ್ನು ವಿಂಗಡಿಸಿ ವಿಲೇವಾರಿ ಮಾಡುವ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಗುಂಡ್ಲುಪೇಟೆ, ಮೇ 23– ನಾಲ್ಕು ವಿಧದಲ್ಲಿ ತ್ಯಾಜ್ಯವನ್ನು ಕಟ್ಟುನಿಟ್ಟಾಗಿ ವಿಂಗಡಿಸಿ ವಿಲೇವಾರಿ ಮಾಡುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ಇದನ್ನು ಪಾಲಿಸದೆ ಕಸವನ್ನು ಎಲ್ಲೆಂದರಲ್ಲಿ ಹಾಕುವವರಿಗೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಲಾಯಿತು.

ಪುರಸಭೆಯಿಂದ ಸಾರ್ವಜನಿಕರಿಗೆ ಕಡ್ಡಾಯ ತ್ಯಾಜ್ಯ ವಿಂಗಡಣೆಯ ಜಾಗೃತಿ ಕರೆ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಕಸ ವಿಂಗಡಣೆಯನ್ನು ಕಡ್ಡಾಯಗೊಳಿಸಲಾಗಿದ್ದು ಪರಿಸರ ಸಂರಕ್ಷಣೆ ಮತ್ತು ಪಟ್ಟಣದ ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರಿಕರು ತಮ್ಮ ಮನೆಯ ತ್ಯಾಜ್ಯವನ್ನು ಮೂಲದಲ್ಲೇ ನಾಲ್ಕು ವಿಧಗಳಾಗಿ ಪ್ರತ್ಯೇಕಿಸಿ, ಕಸ ಸಂಗ್ರಹಣಾ ವಾಹನಗಳಿಗೆ ನೀಡಬೇಕಾಗಿ ವಿನಂತಿಸಲಾಯಿತು.

ಕಟ್ಟುನಿಟ್ಟಿನ ಕ್ರಮ ಮತ್ತು ದಂಡದ ಎಚ್ಚರಿಕೆ: ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸ ಹಾಕುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಇನ್ನು ಮುಂದೆ ನಿಯಮ ಉಲ್ಲಂಘಿಸುವವರ ವಿರುದ್ಧ ಪುರಸಭೆಯು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದ್ದು, ನೂತನ ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು. ಮೊದಲ ಬಾರಿ ನಿಯಮ ಉಲ್ಲಂಘನೆಗೆ 500ರೂ. ದಂಡ, ಎರಡನೇ ಬಾರಿ ನಿಯಮ ಉಲ್ಲಂಘನೆಗೆ 1000ರೂ. ದಂಡ. ಮೂರನೇ ಬಾರಿ ನಿಯಮ ಉಲ್ಲಂಘಿಸಿದಲ್ಲಿ ಕಾನೂನು ರೀತಿ ನೋಟಿಸ್ ಜಾರಿ ಮಾಡಿ ಕಠಿಣ ಕ್ರಮ ಜರುಗಿಸುವುದಾಗಿ ತಿಳಿಸಲಾಯಿತು.

ರಾಮಸಮುದ್ರದಲ್ಲಿ ಬಸವ ಜಯಂತಿ ಮೆರವಣಿಗೆ



ರಾಮಸಮುದ್ರದಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡೆಯಿತು.

ಚಾಮರಾಜನಗರ: ನಗರದ ರಾಮಸಮುದ್ರ ಬಡಾವಣೆಯಲ್ಲಿ ಶ್ರೀಗುರು ಕಂಬಳೇಶ್ವರ ಭಿಕ್ಷದ ಮಠ ಹಾಗೂ ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಜಗಜ್ಯೋತಿ ಬಸವೇಶ್ವರರ ಭಾವಚಿತ್ರ ಮೆರವಣಿಗೆಗೆ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಚೆನ್ನಬಸವಸ್ವಾಮೀಜಿ ಚಾಲನೆ ನೀಡಿದರು. ಇದೇ ವೇಳೆ ರಾಮ ಸಮುದ್ರ ಮಠದ ಮಹದೇವಸ್ವಾಮೀಜಿ ಹಾಜರಿದ್ದರು. ಬಳಿಕ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ವೀರಗಾಸೆ ಸೇರಿದಂತೆ ವಿವಿಧ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಜೋಡಿ ಎತ್ತುಗಳ ಮೆರವಣಿಗೆ ಕೂಡ ನಡೆಯಿತು.

ಜನರು ಬಸವನಿಗೆ ಮಹಾಮಂಗಳಾರತಿ, ಹಣ್ಣು–ಕಾಯಿ ನೈವೇದ್ಯ ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಿದರು. ವೀರಶೈವ ಲಿಂಗಾಯತ ಸಮುದಾಯದ ಮುಖಂಡರು, ಯಜಮಾನರು ಹಾಗೂ ಶರಣ ಭಕ್ತರು ಕುಣಿದು ಕುಪ್ಪಳಿಸಿದರು. ಸಾರ್ವಜನಿಕರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದ ಬಳಿಕ ಶರಣ ಭಕ್ತರು ಹಾಗೂ ಗ್ರಾಮಸ್ಥರಿಗೆ ಪ್ರಸಾದ ವಿನಿಯೋಗ ನಡೆಯಿತು. ನಾಳೆ ಧಾರ್ಮಿಕ ಸಭೆ, ಗುರು ವಂದನೆ, ಪಾದಪೂಜೆ, ಶ್ರೀಗಳ ನುಡಿ ನಮನ ಹಾಗೂ ಬಸವ ಮಂದಿರದ 12ನೇ ವರ್ಷದ ಮತ್ತು ಮಠದ 30ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಲಿದೆ.

ಕೇಂದ್ರ ಸರ್ಕಾರಕ್ಕೆ ದೇಶದ ಜನರ ಬಗ್ಗೆ ಕಾಳಜಿ ಇಲ್ಲ



ಮಹದೇವಪ್ಪ

ಚಾಮರಾಜನಗರ: ಬೆಲೆ ಏರಿಕೆಯಿಂದಾಗಿ ದೇಶದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಸರ್ಕಾರ ಸಾಂವಿಧಾನಿಕ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಆರೋಪಿಸಿದರು.


ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಪ್ರಾಚ್ಯ ದೇಶದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡುವ ಮೂಲಕ ಮಧ್ಯಮ ದೇಶದ ಜನರನ್ನು ಸಂಕಷ್ಟಕ್ಕೆ ದೂಡಿದ್ದಾರೆ. ಅಲ್ಲದೇ ಚುನಾವಣೆ ಮುಗಿದ ಬಳಿಕ ದೇಶದ ಜನರಿಗೆ ಎಚ್ಚರಿಕೆ ನೀಡಿರುವುದು ಸರಿಯಲ್ಲ. ಕೇಂದ್ರ ಸರ್ಕಾರ ಆರ್ಥಿಕ ಪರಿಸ್ಥಿತಿಯನ್ನು ತಹಬದಿಯಲ್ಲಿ ಇಟ್ಟುಕೊಂಡಿಲ್ಲ ಎಂದು ದೂರಿದರು.

ಕೋವಿಡ್ ಸಂದರ್ಭದಲ್ಲಿಯೂ ಇದೇ ರೀತಿ ಮಾಡಿದರು. ಪ್ರಧಾನಮಂತ್ರಿಗಳು ವೈಚಾರಿಕತೆ, ವೈಜ್ಞಾನಿಕತೆಯಿಂದ ಜನರು ಹಾಗೂ ದೇಶವನ್ನು ರಕ್ಷಣೆ ಮಾಡಬೇಕು. ಜನರ ಗಮನಕ್ಕೆ ತಾರದೇ ಆರ್ಥಿಕ ತಜ್ಞರ ಸಲಹೆ ಪಡೆಯದೇ ನೋಟು ಬ್ಯಾನ್ ಮಾಡುವ ಮೂಲಕ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿದರು. ಇದರಿಂದಾಗಿ 50 ಸಾವಿರ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಸ್ಥಗಿತವಾದವು. ಪರಿಣಾಮ 10 ರಿಂದ 12 ಕೋಟಿ ನೌಕರರ ಜೀವನ ಹಾಳಾಯಿತು ಎಂದರು.

ಒಳ ಮೀಸಲಾತಿಯಿಂದ ಎಲ್ಲರಿಗೂ ಮೀಸಲಾತಿ ಸಿಗಬೇಕು. ಎಲ್ಲರಿಗೂ ಸಮಾಧಾನವಾಗುವ ಸೂತ್ರವನ್ನು ಸರ್ಕಾರ ಮಾಡಿದೆ. ಇದನ್ನು ಎಲ್ಲರೂ ಸ್ವಾಗತಿಸಿದ್ದಾರೆ ಎಂದು ಹೇಳಿದರು.

ಸದ್ಯಕ್ಕೆ ಸಿಎಂ ಕುರ್ಚಿಯಲ್ಲಿ ಸಿದ್ದರಾಮಯ್ಯ ಕೂತಿದ್ದಾರೆ. ಅವರು ಎದ್ದಿಲ್ಲ. ಹೀಗಾಗಿ ಕುರ್ಚಿ ಖಾಲಿ ಇಲ್ಲ. ಬೀದರ್‌ನಿಂದ ಚಾಮರಾಜನಗರ ತನಕ ನನ್ನ ಹೆಸರನ್ನು ಕೂಗುತ್ತಾರೆ. ಕಳೆದ 40 ವರ್ಷಗಳಿಂದಲೂ ನಾನು ಶೋಷಿತರ ಪರ ಇದ್ದೇನೆ. ಅಧಿಕಾರ ಇರಲಿ ಇಲ್ಲದಿರಲಿ, ನನ್ನ ಹೋರಾಟ, ನಿಲುವು ಶೋಷಿತರ ಪರ ಇರಲಿದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಮಹದೇವಸ್ವಾಮಿ ಜಿಲ್ಲಾಧ್ಯಕ್ಷ



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕಕ್ಕೆ ಆಯ್ಕೆಯಾದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಚಾಮರಾಜನಗರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕಕ್ಕೆ 2026–31 ನೇ ಸಾಲಿಗೆ ನಡೆದ ಚುನಾವಣೆಯಲ್ಲಿ ನೂತನ ಜಿಲ್ಲಾಧ್ಯಕ್ಷರಾಗಿ ಮಹಾದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎಸ್.ಮಾದಪ್ಪ, ಉಪಾಧ್ಯಕ್ಷರಾಗಿ ಶಿವಪ್ರಸಾದ್ ಬಹುಮತದೊಂದಿಗೆ ಆಯ್ಕೆಯಾದರು.

ನಗರ ಜಿಲ್ಲಾಡಳಿತ ಭವನದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹದೇವಸ್ವಾಮಿ, ಮಲ್ಲಿಕಾರ್ಜುನ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಕೆ.ಎನ್.ಮಾದಪ್ಪ, ನಟರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಶಿವಪ್ರಸಾದ್, ಆನಂದ್ ಕುಮಾರ್ ನಾಮಪತ್ರ ಸಲ್ಲಿಸಿದ್ದರು.

ಚುನಾವಣೆ ನಡೆದು ಮಹದೇವಸ್ವಾಮಿ 30 ಮತಗಳು, ಮಲ್ಲಿಕಾರ್ಜುನ 8 ಮತಗಳು, ಕೆ.ಎಸ್.ಮಾದಪ್ಪ 28 ಮತಗಳು, ನಟರಾಜು 10 ಮತಗಳು, ಶಿವಪ್ರಸಾದ್ 30 ಮತಗಳು, ಆನಂದ್‌ಕುಮಾರ್ 8 ಮತಗಳು ಬಂದವು ಚುನಾವಣಾಧಿಕಾರಿಯಾಗಿದ್ದ ಶಾಲಾಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಪಾಟೀಲ್ ಚುನಾವಣೆ ಕಾರ್ಯನಿರ್ವಹಿಸಿದರು.

ಮಹಿಳಾ ಉಪಾಧ್ಯಕ್ಷರಾಗಿ ಭವಾನಿದೇವಿ, ಖಜಾಂಚಿ ನಂದೀಶ್, ಸಹ ಕಾರ್ಯದರ್ಶಿಗಳಾಗಿ ಉಮೇಶ್, ಸಂಘಟನಾ ಕಾರ್ಯದರ್ಶಿಯಾಗಿ ಶಿವರಾಜ್ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ನೂತನ ಅಧ್ಯಕ್ಷರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷರನ್ನು ಸಂಘದ ನಿರ್ದೇಶಕರು, ಪದಾಧಿಕಾರಿಗಳು ಸನ್ಮಾನಿಸಿದರು.

ಶಿಕ್ಷಕರ ಹಿತ ಕಾಯಲು ಶ್ರಮಿಸುವೆ: ಸನ್ಮಾನ ಸ್ವೀಕರಿಸಿದ ನೂತನ ಅಧ್ಯಕ್ಷ ಮಹಾದೇವಸ್ವಾಮಿ ಮಾತನಾಡಿ, ನಮ್ಮ ತಂಡಕ್ಕೆ ಮತ ಹಾಕಿ ಗೆಲ್ಲಿಸಿದ ಜಿಲ್ಲೆಯ ಸಮಸ್ತ ಶಿಕ್ಷಕರಿಗೆ ಈ ಮೂಲಕ ಧನ್ಯವಾದ ಸಲ್ಲಿಸುತ್ತೇವೆ. ನಮ್ಮ ಗೆಲುವನ್ನು ಸಮಸ್ತ ಶಿಕ್ಷಕರಿಗೆ ಅರ್ಪಿಸುತ್ತೇವೆ. ಶಿಕ್ಷಕರ ಬೇಡಿಕೆಗಳ ಈಡೇರಿಸುವ ನಿಟ್ಟಿನಲ್ಲಿ ಸಂಘ ಶ್ರಮಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಚಾಮರಾಜನಗರ ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಸುಧಾ, ಕೊಳ್ಳೇಗಾಲ ಅಧ್ಯಕ್ಷೆ ಸವಿತಾ, ಕಾರ್ಯದರ್ಶಿ ನಾಗೇಶ್, ಹನೂರು ಅಧ್ಯಕ್ಷ ಮಾದೇಶ್, ಪದಾಧಿಕಾರಿಗಳಾದ ಭರತ್ ಭೂಷಣ್, ಕೃಷ್ಣಮೂರ್ತಿ, ಸಮೀವುಲ್ಲಾ, ಶಿವಶಂಕರ್, ಧನಂಜಯ್, ಪುಟ್ಟಮಾದಮ್ಮ, ಗಿರೀಶ್ ಇತರರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 24–05–2026



ಅಧಿಕ ಮಾಸೋತ್ಸವ

ನಂ. ಶ್ರೀಕಂಠ ಕುಮಾರ್
ಮೊ: 9481067333

ಹಿಂದೂ ಚಾಂದ್ರಮಾನ ಪಂಚಾಂಗದಲ್ಲಿ ಪ್ರತಿ ಎರಡು–ಮೂರು ವರ್ಷಗಳಿಗೊಮ್ಮೆ ಬರುವ ಹೆಚ್ಚುವರಿ ಒಂದು ತಿಂಗಳನ್ನು ಅಧಿಕ ಮಾಸ ಎನ್ನುತ್ತಾರೆ. ಇದು ಸೌರ ಮತ್ತು ಚಂದ್ರನ ವರ್ಷಗಳ ನಡುವೆ ಉಂಟಾಗುವ ವ್ಯತ್ಯಾಸವನ್ನು ಸರಿದೂಗಿಸಲು ಸೇರಿಸಲಾಗುವ 13ನೇ ತಿಂಗಳಾಗಿದೆ. ಈ ಸಮಯದಲ್ಲಿ ಸೂರ್ಯನು ಯಾವುದೇ ರಾಶಿಯನ್ನು ಪ್ರವೇಶಿಸದೆ ಸಂಕ್ರಮಣ ಕಾಲವು ಇರುವುದಿಲ್ಲ.

ಚಂದ್ರನ ವರ್ಷವು 354 ದಿನಗಳು ಆದರೆ ಸೌರವರ್ಷವು 365 ದಿನಗಳನ್ನು ಹೊಂದಿರುತ್ತದೆ. ಈ ನಡುವಿನ 11 ದಿನಗಳ ವ್ಯತ್ಯಾಸವನ್ನು ಸರಿದೂಗಿಸಲು ಅಧಿಕಮಾಸವನ್ನು ಸೇರಿಸಲಾಗುತ್ತದೆ. ಇದನ್ನು ಮಲಮಾಸ, ಪುರುಷೋತ್ತಮ ಮಾಸ ಎಂದು ಹೇಳಲಾಗುತ್ತದೆ.

ಈ ಮಾಸವು ಶ್ರೀಮಹಾವಿಷ್ಣುವಿಗೆ ಮೀಸಲಾಗಿ ವಿಶೇಷವಾಗಿ ಧಾರ್ಮಿಕ ಆಚರಣೆಗಳನ್ನು ಆಚರಿಸಲಾಗುತ್ತದೆ. ಅಧಿಕಮಾಸದಲ್ಲಿ ಶುಭಕಾರ್ಯಗಳಾದ ಗೃಹಪ್ರವೇಶ, ವಿವಾಹ ಮುಂತಾದವುಗಳಿಗೆ ಆದ್ಯತೆ ಇರುವುದಿಲ್ಲ. ಶ್ರೀಮಹಾವಿಷ್ಣುವೇ ಅಧಿಪತಿಯಾಗಿರುವ ಈ ಕಾಲದಲ್ಲಿ ಮಾಡುವ ದಾನ, ಜಪ, ತಪ, ಹೋಮ, ಪಾರಾಯಣ, ಪಿತೃತರ್ಪಣಗಳನ್ನು ಆಚರಿಸಿದರೆ ಅವುಗಳ ಫಲವು ಅಕ್ಷಯವಾಗುತ್ತದೆ ಎಂದು ಪದ್ಮಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ಸಾಮಾನ್ಯವಾಗಿ ಚೈತ್ರದಿಂದ ಆಶ್ವಯುಜ ಮಾಸಗಳ ಅವಧಿಯಲ್ಲಿ ಅಧಿಕ ಮಾಸವು ಬರುತ್ತದೆ. ಪುರಾಣಗಳ ಪ್ರಕಾರ ಈ ಮಾಸದಲ್ಲಿ ಮಾಡಲಾಗುವ ಯಾವುದೇ ಸತ್ಕರ್ಮಗಳು ಹೆಚ್ಚಿನ ಪುಣ್ಯವನ್ನು ನೀಡುತ್ತದೆ ಎನ್ನಲಾಗಿದೆ. ಸಾಮಾನ್ಯವಾಗಿ ಅಧಿಕಮಾಸವು 32 ತಿಂಗಳು, 16 ದಿನಗಳ ನಂತರ ಪ್ರಾರಂಭವಾಗುತ್ತದೆ. ಈ ಮಾಸವು ಸಿಂಹಸಂಕ್ರಮಣದ ನಂತರ ಬರುವುದರಿಂದ ಪೂರ್ತಿ ಪಕ್ಷದ ನಿಯಮಾನುಸಾರವಾಗಿಯೂ ಅಧಿಕಮಾಸವೆನಿಸಿಕೊಳ್ಳುತ್ತದೆ.

ಈ ಪವಿತ್ರ ಮಾಸದಲ್ಲಿ ಆಸ್ತಿಕ ಸ್ತ್ರೀ–ಪುರುಷರು ನಿತ್ಯ ನೈಮಿತ್ತಿಕ ಧರ್ಮಕಾರ್ಯಗಳನ್ನು ತಪ್ಪದೇ ಆಚರಿಸಬೇಕು. ಪ್ರತಿ ಸಾಂವತ್ಸರಿಕ ಶ್ರಾದ್ಧಕರ್ಮವನ್ನು ಆಯಾ ತಿಥಿಗಳಲ್ಲಿ ಮಾಡುವುದಲ್ಲದೇ ಅಧಿಕಮಾಸದಲ್ಲಿಯೂ ಶ್ರಾದ್ಧಾದಿಗಳನ್ನು ಮಾಡಬೇಕು. ಈ ಪುಣ್ಯಕಾಲದಲ್ಲಿ ದಾನಕ್ಕೆ ಅತೀ ಹೆಚ್ಚಿನ ಮಹತ್ವವಿದೆ.

ಅಧಿಕಮಾಸದಲ್ಲಿ 33 ದೇವತೆಗಳಾದ ಅಷ್ಟವಸುಗಳು (18) ಏಕಾದಶರುದ್ರರು (11) ದ್ವಾದಶಾದಿತ್ಯರು (12) ಪ್ರಜಾಪತಿ (1) ಮತ್ತು ವಷಟ್‌ಕಾರ (1) ದೇವತೆಗಳಿಗೆ, ವಿಶೇಷವಾಗಿ ಮುಖ್ಯ ಪ್ರಾಣಾಂತರ್ಗತ ಶ್ರೀ ಹರಿಯಪ್ರೀತ್ಯರ್ಥ ಮೂವತ್ತಮೂರು ದೇವತಾನಾಮಗಳನ್ನು ಉಚ್ಚರಿಸುತ್ತಾ ಮೂವತ್ತ ಮೂರು ಸಂಖ್ಯೆಯಲ್ಲಿ ಅಪೂಪವೆಂಬ ಅತಿರಸ ಸಿಹಿಖಾದ್ಯವನ್ನು ದಾನ ನೀಡಿದರೆ ಪುತ್ರ ಪೌತ್ರ ಹಾಗೂ ವಿಫುಲ ಸಂಪತ್ತು ಪ್ರಾಪ್ತವಾಗುತ್ತದೆ ಎಂಬುದಾಗಿದೆ

ಭಗವಂತನ ಧ್ಯಾನ, ನಾಮಸ್ಮರಣೆ ಎಲ್ಲ ದಾನಗಳಿಗಿಂತಲೂ ಶ್ರೇಷ್ಠ. ಏನೇನು ದಾನವಾ ಮಾಡಲಿ, ಹರಿ ನಿನ್ನ ಧ್ಯಾನಕೆ ಮಿಗಿಲಾದ ದಾನಗಳುಂಟೇ ಎಂದಿದ್ದಾರೆ ಪುರಂದರದಾಸರು. ಯಾರ ಮನಸ್ಸು ಒಂದು ಕ್ಷಣವಾದರೂ ಬ್ರಹ್ಮವಿಚಾರದಲ್ಲಿ ಮಗ್ನವಾಗುತ್ತದೋ ಅವರಿಗೆ ಭೂಮಿಯ ಮೇಲಿನ ಎಲ್ಲ ನದಿಗಳಲ್ಲಿ ಸ್ನಾನ ಮಾಡಿದ ಹಾಗೂ ಇಡೀ ಭೂಮಂಡಲವನ್ನು ದಾನ ಮಾಡಿದ ಪುಣ್ಯ ಲಭಿಸುತ್ತದೆ ಎಂದು ಹೇಳಲಾಗಿದೆ. ದಾನಗಳನ್ನು ಯಥಾಶಕ್ತಿ ಮಾಡಬಹುದು. ಸಾಧ್ಯವಿಲ್ಲದಲ್ಲಿ ನಾಮಸ್ಮರಣೆಯು ಎಲ್ಲ ದಾನಗಳಿಗಿಂತ ಮಿಗಿಲು.

ಭಗವಂತನ ಧ್ಯಾನ, ನಾಮಸ್ಮರಣೆ ಎಲ್ಲ ದಾನಗಳಿಗಿಂತಲೂ ಶ್ರೇಷ್ಠ. ಏನೇನು ದಾನವಾ ಮಾಡಲಿ, ಹರಿ ನಿನ್ನ ಧ್ಯಾನಕೆ ಮಿಗಿಲಾದ ದಾನಗಳುಂಟೇ ಎಂದಿದ್ದಾರೆ ಪುರಂದರದಾಸರು. ಯಾರ ಮನಸ್ಸು ಒಂದು ಕ್ಷಣವಾದರೂ ಬ್ರಹ್ಮವಿಚಾರದಲ್ಲಿ ಮಗ್ನವಾಗುತ್ತದೋ ಅವರಿಗೆ ಭೂಮಿಯ ಮೇಲಿನ ಎಲ್ಲ ನದಿಗಳಲ್ಲಿ ಸ್ನಾನ ಮಾಡಿದ ಹಾಗೂ ಇಡೀ ಭೂಮಂಡಲವನ್ನು ದಾನ ಮಾಡಿದ ಪುಣ್ಯ ಲಭಿಸುತ್ತದೆ ಎಂದು ಹೇಳಲಾಗಿದೆ. ದಾನಗಳನ್ನು ಯಥಾಶಕ್ತಿ ಮಾಡಬಹುದು. ಸಾಧ್ಯವಿಲ್ಲದಲ್ಲಿ ನಾಮಸ್ಮರಣೆಯು ಎಲ್ಲ ದಾನಗಳಿಗಿಂತ ಮಿಗಿಲು.

ಮೈಸೂರಿನಲ್ಲಿ ರೋಗಮೋಚನ ಶ್ರೀ ಧನ್ವಂತರಿ ದೇವರ, ಶ್ರೀ ಸತ್ಯಸಂಕಲ್ಪ ತೀರ್ಥರ ಮತ್ತು ಶ್ರೀ ಸತ್ಯಸಂತುಷ್ಟತೀರ್ಥರ ಮೂಲ ಪವಿತ್ರ ಸನ್ನಿಧಾನದಲ್ಲಿ ಪರಭವ ಸಂವತ್ಸರ ವೈಶಾಖ ಬಹುಳ ತ್ರಯೋದಶಿಯಿಂದ ನಿಜ ಜೇಷ್ಠ ಪ್ರತಿಪದದ ವರೆಗೆ 33 ದಿನಗಳ (14–05–2026 ರಿಂದ 15–06–2026 ರವರೆಗೆ) ಪರ್ಯಂತ ಅಧಿಕ ಮಾಸತ್ಸೋವವನ್ನು ಉತ್ತರಾದಿಮಠದಲ್ಲಿ ಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯಸಾನಿಧ್ಯದಲ್ಲಿ ಆಚರಿಸಲಾಗುತ್ತಿದ್ದು ಧರ್ಮಾನುಯಾಯಿಗಳಿಗೆ ಇದೊಂದು ಸಂತಸದ ವಿಷಯ. ಪ್ರತಿನಿತ್ಯ ಅನಂತ ಸನ್ನಿಧಾನೋಪೇತ ಮೂಲರಾಮ, ಭವ ರೋಗವೈದ್ಯ ಧನ್ವಂತರಿಯ ದರ್ಶನ, ಸ್ವಾಮಿರಾಜರ ದರ್ಶನ, 33 ಕುಂಡಗಳಲ್ಲಿ ಧನ್ವಂತರಿಹವನ, ಶಾಸ್ತ್ರ ಶ್ರವಣ, ಸಹಸ್ರನಾಮ ಸಮಗ್ರ ಗೀತಾಪಾರಾಯಣ, ಲಕ್ಷ್ಮೀ ಶೋಭಾನಪಠಣ, ಸಾಂಸ್ಕೃತಿಕ, ಸುವರ್ಣ–ಗೋ–ಅನ್ನಾದಿ ವಿವಿಧ ದಾನ, ಪಾತ್ರರ ಸಮ್ಮಿಲನವನ್ನು ಲೋಕಕಲ್ಯಾಣಾರ್ಥವಾಗಿ ಹಮ್ಮಿಕೊಂಡಿರುವುದು ಆಸ್ಥಿಕರಲ್ಲಿ ಧರ್ಮಶ್ರದ್ಧೆ ಹೆಚ್ಚಿಸಿದೆ.

ಚಾ.ನಗರ ಜಿಲ್ಲೆಯಲ್ಲಿ ಹಿರಿಯರಿಗೆ

ಪೊಲೀಸರ 'ಆಸರೆ'!

ಎ.ಗಣೇಶ್

ಹಿರಿಯ ಜೀವಿಗಳಿಗೆ ಚಾಮರಾಜನಗರ ಪೊಲೀಸರು 'ಆಸರೆ' ಆಗಿದ್ದಾರೆ. ಅವರಲ್ಲಿ ನಾವಿದ್ದೇವೆ ಎಂಬ ಆತ್ಮವಿಶ್ವಾಸ ತುಂಬಿದ್ದಾರೆ.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಸಮುದಾಯ ಪೊಲೀಸ್ ಯೋಜನೆಯಡಿ ಹಿರಿಯ ನಾಗರಿಕರಿಗೆ ಸುರಕ್ಷತೆ, ಆರೈಕೆಯ ವಿಶ್ವಾಸ ಮೂಡಿಸಿದ್ದಾರೆ.ಆ ಮೂಲಕ ಸೇವೆ ಕಲ್ಪಿಸುತ್ತಿದ್ದಾರೆ. ವಿವಿಧ ಗ್ರಾಮದಲ್ಲಿರುವ 667 ಏಕಾಂಗಿ ಹಿರಿಯ ನಾಗರಿಕರು ಹಾಗೂ ಹಿರಿಯ ದಂಪತಿಗಳನ್ನು ಗುರುತಿಸಿ, ಅವರ ಕುಂದು ಕೊರತೆಗಳನ್ನು ಆಲಿಸುವ ಪರಿಪಾಠ ಆರಂಭವಾಗಿದೆ. ಅವರ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಸೋತು ಸುಕ್ಕಾಗಿದ್ದ ಮುಖದಲ್ಲಿ ಮಂದಹಾಸ ಮೂಡಿಸಿರುವುದು ಸಾರ್ವಜನಿಕರ ಅತೀವ ಮೆಚ್ಚುಗೆಗೆ ಪೊಲೀಸರು ಪಾತ್ರರಾಗಿದ್ದಾರೆ.

ಚಾಮರಾಜನಗರ ಜಿಲ್ಲೆಯ ವಿವಿಧ ಗ್ರಾಮದಲ್ಲಿ ಮಕ್ಕಳು ಉದ್ಯೋಗ ಅರಸಿ, ಬೇರೆ ಜಿಲ್ಲೆ, ರಾಜ್ಯ, ದೇಶಗಳಿಗೆ ತೆರಳಿರುವುದು. ಮಕ್ಕಳು ಇಲ್ಲದ ಕೆಲ ಹಿರಿಯರು ಏಕಾಂಗಿಯಾಗಿ ಜೀವನ ನಡೆಸುತ್ತಿದ್ದಾರೆ. ಇಂತಹವರ ಸಂಖ್ಯೆ ಜಿಲ್ಲೆಯಲ್ಲಿ ಗಣನೀಯವಾಗಿದೆ. ಇಂತಹ ದಿಕ್ಕು ದೆಸೆಯಿಲ್ಲದೆ, ಕಂಗಲಾಗಿದ್ದ ಕುಟುಂಬದ ಕೈ ಹಿಡಿದಿದ್ದಾರೆ ಚಾಮರಾಜನಗರ ಪೊಲೀಸರು. ವಿವಿಧ ಗ್ರಾಮ ದಲ್ಲಿರುವ 667 ಹಿರಿಯ ನಾಗರಿಕರು ಹಾಗೂ ಹಿರಿಯ ದಂಪತಿಗಳನ್ನು ಗುರುತಿಸಿ, ನಿತ್ಯವೂ ಗಸ್ತಿನ ಸಂದರ್ಭದಲ್ಲಿ ಅವರ ಮನೆಗೆ ಭೇಟಿ ನೀಡಿ ಅವರ ಕುಂದು ಕೊರತೆಗಳನ್ನು ಆಲಿಸಿ, ಸಹಾಯ ಮಾಡುವ ಮೂಲಕ ತಮಗೆ ಮಕ್ಕಳಿಲ್ಲ ಎಂಬ ಕೊರಗು ನೀಗುತ್ತಿದ್ದಾರೆ.





ವಂಚಕರು, ಕಳ್ಳರ ಟಾರ್ಗೆಟ್! ಈ ರೀತಿ ವಿವಿಧ ಗ್ರಾಮಗಳಲ್ಲಿರುವ ಏಕಾಂಗಿ ಹಿರಿಯ ನಾಗರಿಕರು ಹಾಗೂ ಹಿರಿಯ ದಂಪತಿಗಳ ಮನೆಗಳನ್ನು ಕಳ್ಳ–ಕಾಕರು ಟಾರ್ಗೆಟ್ ಮಾಡಿ, ಕನ್ನ ಹಾಕಲು ಆರಂಭಿಸಿದ್ದಾರೆ. ಮತ್ತೊಂದೆಡೆ ಈ ಭಾಗದಲ್ಲಿ ಅಸ್ಪೃಶ್ಯತೆ ಅನಕ್ಷರತೆ ತಾಂಡವವಾಡುತ್ತಿದ್ದು, ಇದನ್ನು ದುರ್ಬಳಕೆ ಮಾಡಿಕೊಂಡ ಕೆಲ ವಂಚಕರು, ಹಿರಿಯ ನಾಗರಿಕರ ಹೆಸರಿನಲ್ಲಿರುವ ಮನೆ, ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ. ಮತ್ತಷ್ಟು ಚಾಲಾಕಿ ವಂಚಕರು ವ್ಹಿಲ್ ಮಾಡಿಸಿಕೊಂಡಿದ್ದಾರೆ.

ವೃದ್ಧಾಪ್ಯ ವೇತನಕ್ಕೂ ಕನ್ನ ! ಕೆಲವು ಖತರ್ನಾಕ್ ವಂಚಕರು ಹಿರಿಯ ನಾಗರಿಕರ ಅಮಾಯಕತೆಯನ್ನು ಬಂಡವಾಳ ಮಾಡಿಕೊಂಡಿದ್ದು, ಅಜ್ಜಿ, ತಾತಾ ನಿಮಗೆ ಸರ್ಕಾರದಿಂದ ವೃದ್ಧಾಪ್ಯ ವೇತನ ಕೊಡಿಸುತ್ತೇವೆ ಎಂದು ಹೇಳಿ ಅವರಿಂದ ದಾಖಲೆಗಳನ್ನು ಪಡೆದುಕೊಂಡು ದುರ್ಬಳಕೆ ಮಾಡಿಕೊಂಡಿರುವ ಪ್ರಕರಣಗಳು ಹೆಚ್ಚಿವೆ. ಏನೂ ಅರಿಯದ ಹಿರಿಯ ಜೀವಿಗಳು ಮೋಸ ಹೋಗಿ, ಬೀದಿಪಾಲಾಗಿವೆ

> " ಕರ್ನಾಟಕ ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರ ನಿರ್ದೇಶನದಂತೆ 'ಆಸರೆ' ಕಾರ್ಯಕ್ರಮ ಆರಂಭಿಸಲಾಗುತ್ತಿದೆ. ಇದರಿಂದ ಹಿರಿಯ ನಾಗರಿಕರಿಗೆ ಆಗುತ್ತಿದ್ದ ವಂಚನೆ, ಅವರ ಮನೆ ಕಳ್ಳತನಕ್ಕೆ ಕಡಿವಾಣ ಹಾಕಲಾಗಿದೆ ಪ್ರತಿ ದಿನ ಆಯಾ ಠಾಣೆಯ ಠಾಣಾಧಿಕಾರಿಗಳು 667 ಹಿರಿಯ ನಾಗರಿಕರ ಮನೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ನಾನು ನಿತ್ಯವೂ ವರದಿ ಪಡೆದುಕೊಳ್ಳುತ್ತಿದ್ದೇನೆ. ಆಸರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.
>
> 
>
> –ಎಂ.ಮುತ್ತುರಾಜ್, ಪೊಲೀಸ್ ವರಿಷ್ಠಾಧಿಕಾರಿ, ಚಾಮರಾಜನಗರ





ಪೊಲೀಸ್ ಗಸ್ತಿನಿಂದ ಕಳ್ಳರು ಸುಸ್ತು : ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಸಮುದಾಯ ಪೊಲೀಸ್ ಯೋಜನೆ ಅಡಿ 'ಆಸರೆ' ಮೂಲಕ ಹಿರಿಯ ನಾಗರಿಕರಿಗೆ ಸುರಕ್ಷತೆ ಮತ್ತು ಆರೈಕೆ ಕಲ್ಪಿಸಲಾಗುತ್ತಿದೆ. ಈ ಯೋಜನೆ ಅಡಿಯಲ್ಲಿ ಚಾಮರಾಜನಗರ ಪೊಲೀಸರು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸೂಚನೆಯಂತೆ ತಮ್ಮ ತಮ್ಮ ವ್ಯಾಪ್ತಿಯ ಗ್ರಾಮದಲ್ಲಿನ ಹಿರಿಯ ನಾಗರಿಕರ ಪಟ್ಟಿ ಮಾಡಿಕೊಂಡು ನಿತ್ಯವೂ ಗಸ್ತು ನಡೆಸುತ್ತಾರೆ ಈ ಸಂದರ್ಭದಲ್ಲಿ ಹಿರಿಯರ ಮನೆಗೆ ಭೇಟಿ ನೀಡುತ್ತಿರುವುದರಿಂದ ಈಗ ವಂಚಕರ ಸುಳಿವಿಲ್ಲದಂತಾಗಿದೆ.


ಅಗತ್ಯ ವಸ್ತುಗಳ ಪೂರೈಕೆ: ಆಸರೆ ಮೂಲಕ ಪೊಲೀಸರು ಕೇವಲ ಗಸ್ತು ಮಾತ್ರ ಮಾಡುತ್ತಿಲ್ಲ. ಬದಲಾಗಿ ಬಹುತೇಕ ಹಿರಿಯ ನಾಗರಿಕರು ತಮ್ಮ ಕೆಲಸ–ಕಾರ್ಯ ಮಾಡಿಕೊಳ್ಳಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿಗಳೇ ಗಸ್ತಿನ ಸಂದರ್ಭದಲ್ಲಿ ಗ್ಯಾಸ್ ಸಿಲಿಂಡರ್ ಪೂರೈಕೆ, ಬ್ಯಾಂಕ್ ವಹಿವಾಟು, ಪಂಚಾಯಿತಿ ಕೆಲಸ, ಜೊತೆಗೆ ಪಡಿತರ ತೆಗೆದುಕೊಳ್ಳಲು ಸಾಧ್ಯವಾಗದವರಿಗೆ ತಾವೇ ರೇಷನ್ ಅಂಗಡಿಗಳಿಂದ ಪಡಿತರ ತಂದು ಕೊಡುವ ಕೆಲಸ ಮಾಡುತ್ತಿದ್ದಾರೆ.


ಬೆಳಕಾದ ಪೊಲೀಸ್ : ಚಾಮರಾಜ ನಗರ ಈಸ್ಟ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರೊಬ್ಬರ ಮನೆ ಹಲವಾರು ವರ್ಷಗಳಿಂದ ಬೆಳಕಿಲ್ಲದೆ ಕಗ್ಗತ್ತಲಿಂದ ಕೂಡಿತ್ತು. ಆದರೆ, ಇವರ ಮನೆ ಗಸ್ತಿಗೆ ಹೋಗುವ ಸಿಬ್ಬಂದಿ ಈ ಕಷ್ಟವನ್ನು ನೋಡಿ ತಾವೇ 30 ಸಾವಿರ ರೂ. ಖರ್ಚು ಮಾಡಿ ವಿದ್ಯುತ್ ಸಂಪರ್ಕ ಕೊಡಿಸುವ ಮೂಲಕ ಆ ಮನೆ ಬೆಳಗಿದ್ದಾರೆ.


ಮಕ್ಕಳ ಚಿತ್ರಕಥೆ 'ಮಕ್ಕಳೇ, ನಿಮಗೆ ನಾನು ಹತ್ತು ನಿಮಿಷ ಸಮಯ ನೀಡುತ್ತೇನೆ'.

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199

(ಕಳೆದ ಸಂಚಿಕೆಯಿಂದ)

1

ಎಲ್ಲಾ ಮಕ್ಕಳೂ ಬಲೂನ್‌ಗುಡ್ಡೆಯಲ್ಲಿ ತಮ್ಮ–ತಮ್ಮ ಹೆಸರಿನ ಬಲೂನ್‌ಗಳನ್ನು ಹುಡುಕಲಾರಂಭಿಸಿದರು.

2

ನೀಡಿದ್ದ ಹತ್ತು ನಿಮಿಷಗಳ ಗಡುವಿನಲ್ಲಿ ಎದ್ದು–ಬಿದ್ದು, ಹುಡುಕಿ–ಹುಡುಕಿ ತೀವ್ರ ಸುಸ್ತಾಗಿದ್ದ ಮಕ್ಕಳಲ್ಲಿ ಅವರವರ ಹೆಸರಿನ ಬಲೂನ್‌ಗಳು ಸಿಕ್ಕಿದ್ದು ಕೇವಲ ಮೂರು ಮಂದಿಗೆ ಮಾತ್ರ. ಉಳಿದಿದ್ದೆಲ್ಲಾ ಹಾಗೆಯೇ ನೆಲದ ಮೇಲೆ ಬಿದ್ದಿದ್ದವು.

3

ಈ ದೃಶ್ಯ ಕಂಡ ಅಧ್ಯಾಪಕಿಯು ನಸುನಗುತ್ತಾ, 'ಮಕ್ಕಳೇ, ಈಗ ನಾನು ಪುನಃ ಹತ್ತು ನಿಮಿಷ ಸಮಯ ನೀಡುತ್ತೇನೆ. ಆದರೆ ಈಗ ನೀವು ಮಾಡಬೇಕಾಗಿದ್ದು ಇಷ್ಟೇ... ನಿಮಗೆ ಯಾವ–ಯಾವ ಹೆಸರಿನ ಬಲೂನ್‌ಗಳು ಕೈಗೆ ಸಿಗುತ್ತದೆಯೋ... ತಕ್ಷಣವೇ, ಅ ವಿದ್ಯಾರ್ಥಿಗಳನ್ನ ಹುಡುಕಿ ಆ ಬಲೂನ್ ನೀಡಬೇಕು...!' ಎಂದು ಆದೇಶಿಸಿದರು.

4

ಮತ್ತೆ ಎಲ್ಲಾ ಮಕ್ಕಳೂ ಒಟ್ಟಾಗಿ ಸೇರಿ ಆ ಬಲೂನ್‌ಗಳ ಗುಡ್ಡೆಗೆ ಕೈ ಹಾಕಿ ಅವುಗಳ ಮೇಲೆ ಬರೆದಿದ್ದ ವಿದ್ಯಾರ್ಥಿಗಳ ಹೆಸರನ್ನು ಓದಿಕೊಂಡು ಅವರನ್ನು ಹುಡುಕಿ ಪರಸ್ಪರ ನೀಡಲಾರಂಭಿಸಿದರು.

5

ತಮಾಷೆ ಏನೆಂದರೆ, ಹತ್ತು ನಿಮಿಷ ಗಡುವು ನೀಡಿದ್ದರೂ ಈ ಬಾರಿ ಕೇವಲ ಮೂರೇ ನಿಮಿಷದಲ್ಲಿ ಎಲ್ಲಾ ಮಕ್ಕಳ ಕೈಯಲ್ಲೂ ಅವರವರ ಹೆಸರಿನ ಬಲೂನ್‌ಗಳು ಸಿಕ್ಕಿಬಿಟ್ಟಿದ್ದವು

6

ತೀವ್ರ ಸಂತಸದಿಂದಿದ್ದ ಮಕ್ಕಳನ್ನು ಕಂಡ ಅಧ್ಯಾಪಕಿ, 'ಇನ್ನು ಮುಂದೆ ತರಗತಿಯಲ್ಲೂ ಕೂಡ ಹೀಗೆಯೇ ಪರಸ್ಪರ ಪ್ರೀತಿ ಸ್ನೇಹದಿಂದ ವರ್ತಿಸುತ್ತಾ ವಿದ್ಯಾಭ್ಯಾಸದೆಡೆಗೆ ಆಸಕ್ತಿ ತೋರಿದಲ್ಲಿ ನಿಮಗೆಲ್ಲಾ ಯಶಸ್ಸು ಗ್ಯಾರಂಟಿ...!' ಎಂದು ತಿಳಿಹೇಳಿದರು. (ಮುಗಿಯಿತು)

ವಾರಭವಿಷ್ಯ

24.05.2026 ರಿಂದ 30.05.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:–ರವಿ–ವೃಷಭ, ಚಂದ್ರ– ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ–ಮೇಷ, ಬುಧ–ವೃಷಭ, ಮಿಥುನ, ಗುರು–ಮಿಥುನ, ಶುಕ್ರ–ಮಿಥುನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದಾರಂಭಕ್ಕೆ ಮಾನಸಿಕ ದುಗುಡತೆ ಆವರಿಸುತ್ತದೆ. ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗದು. ಹಣ ಮಾತ್ರ ಅಯಾಚಿತವಾಗಿ ಬಂದು ಕೈ ಸೇರುವುದು. ಹಿತಮಿತವಾಗಿ ಖರ್ಚು ಮಾಡಿದರೆ, ಮುಂದಕ್ಕೆ ಒಳಿತಾಗುವುದು. ವಾರ ಮುನ್ನಡೆದಂತೆ ನಿಮ್ಮ ಹಿತೈಷಿಗಳ ಸಹಕಾರದಿಂದ ನಿಂತು ಹೋಗಿದ್ದ ಮುಖ್ಯ ಕೆಲಸಗಳು ಮರುಚಾಲನೆ ಹೊಂದುತ್ತವೆ. ಸಣ್ಣ–ಪುಟ್ಟ ಅಪಘಾತಗಳಿಂದ ಎಚ್ಚರವಿರಿ.
ಶ್ರೀ ವಿಘ್ನೇಶ್ವರ ಪೂಜೆ. ಶುಭ ಸಂಖ್ಯೆ–1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ನಿಮ್ಮ ಶ್ರೇಯೋಭಿವೃದ್ಧಿಗೆ ಶ್ರೀ ಗುರುವಿನ ಕೃಪೆ ಇದೆ. ಹೊಸ ಯೋಜನೆಗಳಿಗೆ ಪ್ರೇರಣೆ ಆಗುವುದು ಹಾಗೂ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವಿರಿ. ವಿದ್ಯಾ ಪ್ರಸಂಗಗಳಲ್ಲಿ ಸಾಧನೆಯ ಗರಿಮೆ ನಿಮ್ಮದಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ವ್ಯಾಪಾರ, ವ್ಯವಹಾರಗಳು ಉತ್ತಮ ಲಾಭ ದೊರೆಯಲಿದೆ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ. ವಾರಾಂತ್ಯಕ್ಕೆ ದಾನ–ಧರ್ಮ ಬುದ್ಧಿ.
ಶ್ರೀ ದೇವಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಜನ್ಮ ಗುರುವಿನ ಹೊರತಾಗಿಯೂ ವಾರದ ಆದಿಗೆ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಚಂದ್ರಗ್ರಹದ ಬೆಂಬಲವಿದೆ. ಆತುರದ ನಿರ್ಧಾರಗಳು ನಿಮಗೆ ಮಾರಕವಾಗಬಹುದು. ಕುಟುಂಬದ ಹಾಗೂ ಸಾರ್ವಜನಿಕ ವ್ಯವಹಾರಗಳನ್ನು ವಿವೇಚನೆಯಿಂದ ನಿರ್ವಹಿಸಿ. ದುಂದು ವೆಚ್ಚಗಳಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ಸಹಾಯ ಕೇಳಿದಾಗ ಮಿತ್ರರೇ ಮುಖ ತಿರುಗಿಸುವರು.
ಶ್ರೀ ವಿಷ್ಣು ಪೂಜೆ, ಶುಭ ಸಂಖ್ಯೆ–5

ಕಟಕ (ಹೊ,ಹು,ಹೆ,ಡ,ಡಿ,ಡು)
ವಾರದ ಉತ್ತರಾರ್ಧಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರ ಗ್ರಹದ ಶುಭ ಸಂಚಾರವಿದ್ದು, ನಿಮ್ಮ ವೈಯಕ್ತಿಕ ಕೆಲಸ ಕಾರ್ಯಗಳನ್ನು, ಕಚೇರಿ ಜವಾಬ್ದಾರಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಿ. ಧನ ಕನಕ, ಪಶು ಸಂಪತ್ತು ಕೊಳ್ಳುವ ಸದವಕಾಶವಿದೆ. ಹೆಂಗಳೆಯರ ಮಿತ್ರತ್ವ ದೊರಕುವುದು. ಚಂದ್ರ ಮಾತೃಕಾರಕನಿರುವುದರಿಂದ ಮಾತೃಶ್ರೀಯವರ ಸಮಯೋಚಿತ ನೆರವಿನ ಹಸ್ತ ದೊರಕುವುದು. ಶೀತ–ನೆಗಡಿ ಕಾಡಬಹುದು.
ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನೂ, ಲಾಭ ಭಾವದಲ್ಲಿ ಭ್ರಮಿಸುತ್ತಿರುವ ಬೃಹಸ್ಪತಿಯೂ ಕೆಲಸ ಕಾರ್ಯಗಳು ತ್ವರಿತವಾಗಿ ಸಂಪನ್ನವಾಗಲು ಸಹಾಯಕರಾಗಿದ್ದಾರೆ. ನೂತನ ವಾಹನ ಖರೀದಿಯ ಯೋಗವಿದೆ. ತಾಳ್ಮೆಯಿಂದ ಮುಂದಡಿ ಇಡಿ, ಕಾರಣ ನಿಮ್ಮ ರಾಶಿಯಲ್ಲೇ ಕೇತುಗ್ರಹವಿದ್ದು ಕೆಲಸ ಕೆಡಿಸಬಹುದು. ಆಹಾರ ಪಾನೀಯಗಳಲ್ಲಿ ಸಂಯಮವಿರಲಿ. ಫಾಸ್ಟ್ ಫುಡ್ ಎಂಬ ವೇಸ್ಟ್ ಫುಡ್‌ನಿಂದ ಆರೋಗ್ಯ ಕೆಡುವುದು.
ಶ್ರೀ ರವ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–6

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಈ ವಾರ ಲಾಭ, ಜನ್ಮ, ದ್ವಿತೀಯದಲ್ಲಿ ಚಂದ್ರ ಸಂಭ್ರಮಣೆ ಹಾಗೂ ದಶಮದಲ್ಲಿ ಶ್ರೀ ಗುರುವಿನ ಸಂಚಾರ ನಿಮ್ಮ ಶ್ರೇಯೋಭಿವೃದ್ಧಿಗೆ ಬೆಂಬಲವಾಗಿ ನಿಂತಿದ್ದಾರೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ಪ್ರೀತಿ–ಪ್ರಣಯ ವಿಷಯಗಳಲ್ಲಿ ನಿಮ್ಮ ಪರ ಸಕಾರಾತ್ಮಕ ಫಲವಿದೆ. ನಿಮ್ಮ ವೃತ್ತಿ ಸ್ಥಳದಲ್ಲಿ ಸೌಹಾರ್ದತೆಯ ವಾತಾವರಣವಿರುತ್ತದೆ. ಧನ ಸಂಪಾದನೆ ಎಂದು ತೀರಾ ಧಾರಾಳತನ ತೋರಬೇಡಿ. ಪಿತ್ತ ಪ್ರಕರಣ ಕಾಡಬಹುದು.
ಶ್ರೀ ಗಾಯತ್ರಿ ಮಂತ್ರ ಜಪಿಸಿ. ಶುಭ ಸಂಖ್ಯೆ–7

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಎಲ್ಲಾ ಕೆಲಸವನ್ನು ಅಳೆದು ತೂಗಿ ಮಾಡುವ ನಿಮಗೆ ಬೃಹಸ್ಪತಿಯ ಕೃಪಾ ಕಟಾಕ್ಷದ ಜೊತೆಗೆ ನಿಮ್ಮ ರಾಶ್ಯಾಧಿಪತಿಯ ಸಹಾಯವೂ ಇದೆ. ಕಬ್ಬಿಣ ಕಾದಾಗ ತಟ್ಟಬೇಕು ಎಂಬ ನಾಣ್ನುಡಿಯಂತೆ ನಿಮ್ಮ ಮಹತ್ವದ ಕೆಲಸ ಕಾರ್ಯಗಳನ್ನು ಸಂಪನ್ನಗೊಳಿಸಿಕೊಳ್ಳಿ, ಉದ್ಯೋಗ ಅರಸುವವರಿಗೆ ಶುಭ ಸಂದೇಶ ಬರುವುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.
ಶ್ರೀ ಸರಸ್ವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)
ವಾರದಾರಂಭಕ್ಕೆ ಚಂದ್ರ ಸಂಚಾರ ಶುಭ ನೂತನ ಉದ್ಯೋಗ–ವ್ಯವಹಾರ ಆರಂಭಿಸಲು ಸುಸಮಯವಾಗಿದೆ. ಚಂದ್ರ ತ್ವರಿತವಾಗಿ ಚಲಿಸುವ ಗ್ರಹವಾದ್ದರಿಂದ ನೀವು ತ್ವರಿತವಾಗಿ ನಿಮ್ಮ ಕೆಲಸ ಕಾರ್ಯಗಳು ಪೂರ್ಣಗೊಳ್ಳಲು ಪ್ರವೃತ್ತರಾಗುವಿರಿ. ಕೆಲವರಿಗೆ ಸ್ಥಾನ ಲಾಭ ವೃತ್ತಿ ಲಾಭಗಳು ಸಂಭವಿಸುವುದು. ಪ್ರೀತಿ–ಪ್ರಣಯ ವಿಷಯಗಳು ಆಶಾದಾಯಕವಾಗಿದೆ.
ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ–8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ನಿಮ್ಮ ರಾಶ್ಯಾಧಿಪತಿ ಶ್ರೀ ಗುರುಗ್ರಹದ ಪೂರ್ಣ ದೃಷ್ಟಿ ನಿಮ್ಮ ರಾಶಿಯ ಮೇಲಿರುವ ಕಾರಣ ನಿಮ್ಮ ಸ್ವಂತ ಹಾಗೂ ಕಚೇರಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಸದಾಚಾರ ಸಂಪನ್ನರೆನಿಸಿ ಜನಾನುರಾಗ ಗಳಿಸುವಿರಿ. ಹೋಟೆಲ್ ಹಾಗೂ ಪತ್ರಿಕೋದ್ಯಮಿಗಳಿಗೆ ಸಫಲತೆಯ ವಾರವೆಂದು ಹೇಳಬಹುದು. ಕೆಲವೊಮ್ಮ ಚಿತ್ತ ಚಾಂಚಲ್ಯವೂ, ವಾಯು ಸಂಬಂಧಿತ ಕಾಯಿಲೆಗಳು ಕಾಡುವ ಸಾಧ್ಯತೆ.
ಶ್ರೀ ದತ್ತಗುರು ಪ್ರಾರ್ಥನೆ. ಶುಭ ಸಂಖ್ಯೆ–3

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಷಷ್ಠ ಗುರುವಿನ ಕಾರಣ ಫಲಪ್ರಾಪ್ತಿ ಕಾಲದಲ್ಲಿ ಅಡಚಣೆಗಳು ಉಂಟಾಗಲಿದೆ. ಈರುಳ್ಳಿ ಲಾಭ ಬೆಳ್ಳುಳ್ಳಿಯಲ್ಲಿ ಹೋಯಿತು ಎಂಬಂತೆ ಆಗುವುದು. ಹಳೆಯ ಮಿತ್ರರ ಅಪರೂಪದ ಭೇಟಿಯಿಂದ ಎಷ್ಟೇ ಹಣ ಸಂಚಯವಾದರೂ ಅತ್ತಿತ್ತ ಹರಿದು ಹೋಗುತ್ತದೆ. ರಾಹು–ಕೇತುಗಳು ಶುಭರಿಲ್ಲ. ಅಪಘಾತ ಹಾಗೂ ವಿಷಾಹಾರಗಳಿಂದ ಜಾಗೃತರಾಗಿರಿ.
ಶ್ರೀ ಶಿವಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಶುಭ ಗುರುವಿನ ಪರಿಣಾಮ ಯತ್ನ ಕಾರ್ಯಗಳಲ್ಲಿ ಸಫಲತೆ. ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು. ಹೊಸ ಮಿತ್ರರ ಪರಿಚಯದಿಂದ ಮನಸ್ಸಿಗೆ ಹರ್ಷ. ಟೂರ್‌ನವರಿಗೆ ಉತ್ತಮ ಒಡಂಬಡಿಕೆಗಳು ದೊರೆಯುತ್ತದೆ. ದ್ವಿತೀಯ ಭಾವದಲ್ಲಿ ಶನಿದೇವನ ಸಂಚಾರವಿರುವುದರಿಂದ ನಿಮ್ಮ ಆಸ್ತಿ ಪಾಸ್ತಿಗಳನ್ನು ಭೂ ಮಾಫಿಯಾದವರಿಂದ ರಕ್ಷಿಸಿಕೊಳ್ಳಿ.
ಶ್ರೀ ನಾರಾಯಣ ನಾಮ ಸ್ತುತಿ. ಶುಭ ಸಂಖ್ಯೆ–2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದಾರಂಭಕ್ಕೆ ಕೆಲವು ಚೇತೋಹಾರಿ ಪ್ರಸಂಗಗಳು ಘಟಿಸಿದರೂ ಸಾಡೇಸಾತಿ ಶನಿದೇವ ನಿಮ್ಮ ರಾಶಿಯಲ್ಲೇ ಗೋಚರಿಸುತ್ತಿದ್ದು ನೀವೀಗ ಕವಲುದಾರಿಯಲ್ಲಿ ನಿಂತಂತೆ ಭಾಸವಾಗುವುದು. ರಾಜಕೀಯ ರಂಗದಲ್ಲಿ ಇರುವವರಿಗೆ ಅಪವಾದ ಹಾಗೂ ಕಾನೂನು ಕ್ರಮಗಳು ಎದುರಾಗುವುದು. ವಾರಾಂತ್ಯಕ್ಕೆ ಪ್ರೀತಿ ಪಾತ್ರರೊಡನೆ ಸಮಯ ಹರಣ ಮಾಡುವುದರಿಂದ ಮನಸ್ಸಿನ ದುಗುಡತೆ ಕಡಿಮೆ ಆಗುವುದು.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–1

ಬೀಟೆ ಮರ ಸಾಗಿಸುತ್ತಿದ್ದ ಲಾರಿ ವಶ, ಚಾಲಕನ ಬಂಧನ

30 ಲಕ್ಷ ರೂ. ಮೌಲ್ಯದ 45 ಮರದ ದಿಮ್ಮಿಗಳ ಜಪ್ತಿ | ಕೊಡಗು ಭಾಗದಲ್ಲಿ ಖರೀದಿ, ಹಲವರು ಭಾಗಿ ಶಂಕೆ

ಹುಣಸೂರು ಮೇ.23– ಲಾರಿಯಲ್ಲಿ ಬೀಟೆ ಮರದ ದಿಮ್ಮಿಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪಿಯನ್ನು ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದವರು ಬಂಧಿಸಿ ಮರದ ದಿಮ್ಮಿಗಳನ್ನು ವಶಕ್ಕೆ ಪಡೆದಿದ್ದಾರೆ.

ಮೂಲತಃ ಕೇರಳಂ ರಾಜ್ಯದ ಮಲಪುರಂನ ಲಾರಿ ಮಾಲೀಕ ಕಂ ಚಾಲಕ ಅಬ್ದುಲ್ ಶುಕೂರ್ ಬಂಧಿತ ಆರೋಪಿ, ಲಾರಿಯಲ್ಲಿದ್ದ ಸುಮಾರು 30 ಲಕ್ಷ ರೂ. ಬೆಲೆ ಬಾಳುವ 45 ಬೀಟೆ ಮರದ ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ.



ಬೀಟೆ ಮರಗಳನ್ನು ಸಾಗಿಸುತ್ತಿದ್ದ ಲಾರಿ, ಮರದ ದಿಮ್ಮಿಗಳನ್ನು ವಶ ಪಡಿಸಿಕೊಂಡು, ಆರೋಪಿಯನ್ನು ಬಂಧಿಸಿರುವ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದವರು.

ಕೊಡಗಿನಿಂದ ಲಾರಿಯಲ್ಲಿ ಕಾಫಿ ಹಾಗೂ ಮರದ ಹೊಟ್ಟು ತುಂಬಿದ ಮೂಟೆಗಳ ನಡುವೆ ಬೀಟೆ ಮರದ ದಿಮ್ಮಿಗಳನ್ನಿಟ್ಟು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಕಿರುಬನಂತನ್, ಎಸಿಎಫ್ ಮಹದೇವಯ್ಯರ ಮಾರ್ಗದರ್ಶನದಲ್ಲಿ ಹುಣಸೂರು ಆರ್‌ಎಫ್‌ಓ ಸಂತೋಷ್ ಎಂ.ಹೂಗಾರ್ ನೇತೃತ್ವದ ತಂಡ ಹುಣಸೂರು–ಎಚ್.ಡಿ.ಕೋಟೆ ಮುಖ್ಯರಸ್ತೆಯ ಆಜಾದ್ ನಗರದ ಬಳಿ ತೆರಳುತ್ತಿದ್ದ ಲಾರಿಯನ್ನು ಅಡ್ಡಗಟ್ಟಿ ಪರಿಶೀಲಿಸಿದ ವೇಳೆ ಮರದ ದಿಮ್ಮಿಗಳಿರುವುದು ಪತ್ತೆಯಾಗಿದೆ. ಲಾರಿಯನ್ನು ಜಪ್ತಿ ಮಾಡಿ, ಮರದ ತುಂಡುಗಳು, ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಸಹಿತ ಆರೋಪಿ ಅಬ್ದುಲ್ ಶುಕೂರ್‌ನ್ನು ವಶಕ್ಕೆ ಪಡೆದಿದ್ದಾರೆ.

ಆರೋಪಿಯನ್ನು ವಿಚಾರಣೆಗೊಳಪಡಿಸಲಾಗಿ ಕೊಡಗಿನ ವಿವಿಧ ಭಾಗಗಳಿಂದ ಮರದ ದಿಮ್ಮಿಗಳನ್ನು ಖರೀದಿಸಿ ಸಾಗಿಸಲಾಗುತ್ತಿತ್ತು. ಎಂದು ತಿಳಿಸಿದ್ದು, ಈ ಪ್ರಕರಣದಲ್ಲಿ ಹಲವಾರು ಮಂದಿ ಭಾಗಿಯಾಗಿರುವ ಬಗ್ಗೆ ಶಂಕೆ ಇದೆ. ಪ್ರಕರಣದ ಕಿಂಗ್‌ಪಿನ್ ಹಾಗೂ ಇತರೆ ಆರೋಪಿಗಳ ಪತ್ತೆಗಾಗಿ ಕ್ರಮವಹಿಸಲಾಗಿದೆ. ಆರೋಪಿಗಳ ವಿರುದ್ದ ಅರಣ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಡಿಸಿಎಫ್ ಆರ್.ಟಿ.ಕಿರುಬನಂತನ್ ತಿಳಿಸಿದ್ದು, ಪ್ರಕರಣವನ್ನು ಭೇದಿಸಿರುವ ತಂಡವನ್ನು ಪ್ರಶಂಸಿಸಿದ್ದಾರೆ.

ಆರೋಪಿ ಅಬ್ದುಲ್ ಶುಕೂರ್ ಕೇರಳ ನೋಂದಣಿಯ ಲಾರಿಯನ್ನು ಎಲ್ಲಡೆ ತಪಾಸಣೆ ನಡೆಸುವ ಭೀತಿಯಿಂದ ಈತ ಕೃತ್ಯಕ್ಕಾಗಿಯೇ ಕರ್ನಾಟಕ ನೋಂದಣಿಯ ಸೆಕೆಂಡ್ ಹ್ಯಾಂಡ್ ಲಾರಿಯನ್ನು ಎರಡು ತಿಂಗಳ ಹಿಂದೆ ಖರೀದಿಸಿದ್ದ, ಆದರೆ ಈ ಪ್ಲಾನ್ ತಲೆಕೆಳಗಾಗಿ ಸಿಕ್ಕಿಬಿದ್ದಿದ್ದಾನೆ ಈ ದಂಧೆಯಲ್ಲಿ ದೊಡ್ಡ ಜಾಲವೇ ಇದ್ದು, ಶೀಘ್ರವೇ ಭೇಧಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ಮಂಜುನಾಥ ಟಿ.ಎನ್, ಗಸ್ತು ಅರಣ್ಯ ಪಾಲಕರಾದ ಶಿವಪ್ಪಗಡ್ಡದವರ್, ಮಂಜುನಾಥ, ದಿವಾಕರ, ಸಿದ್ದಪ್ಪಹೊಸಮನಿ, ವಾಹನ ಚಾಲಕ ಮನೋಹರ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಮಹಿಳೆಯರು ಆರ್ಥಿಕ ಸ್ವಾವಲಂಬನೆ ಪಡೆದಲ್ಲಿ ಕುಟುಂಬ ನಿರ್ವಹಣೆ, ನೆಮ್ಮದಿ ಬದುಕು ಸಾಧ್ಯ

ತಿ.ನರಸೀಪುರ ಮೇ 23– ಮಹಿಳೆಯರು ಆರ್ಥಿಕ ಸ್ವಾವಲಂಬನೆ ಪಡೆದಲ್ಲಿ ಕುಟುಂಬ ನಿರ್ವಹಣೆಗೆ ಸಹಕಾರಿಯಾಗುವುದರ ಜತೆಗೆ ನೆಮ್ಮದಿಯ ಬದುಕು ರೂಪಿಸಿಕೊಳ್ಳಲು ಸಾಧ್ಯ ಎಂದು ಕೇಂದ್ರು ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕ ಪಿ.ಡಿ.ನಾಯಕ್ ತಿಳಿಸಿದರು.

ಪಟ್ಟಣದ ಕೊಳ್ಳೇಗಾಲ ಮುಖ್ಯ ರಸ್ತೆಯ ಮಾಂಡೋವಿ ಮೋಟಾರ್ಸ್ ಕಟ್ಟಡದಲ್ಲಿ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಉದ್ಘಾಟನೆ ಹಾಗೂ ಫ್ಯಾಷನ್ ಡಿಸೈನಿಂಗ್ ಮತ್ತು ಬ್ಯೂಟಿಷಿಯನ್ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಒಬ್ಬರ ದುಡಿಮೆಯಿಂದ ಕುಟುಂಬ ನಿರ್ವಹಣೆ ಕಷ್ಟ ಸಾಧ್ಯ. ಒಬ್ಬರ ದುಡಿಮೆ ಸಾಲದೆ ಅನೇಕ ಕುಟುಂಬಗಳು ಸಂಕಷ್ಟಕ್ಕೀಡಾಗಿವೆ. ಈ ಸಂದರ್ಭಗಳಲ್ಲಿ ಕುಟುಂಬದ ಇತರೆ ಸದಸ್ಯರ ದುಡಿಮೆಯು ಅಗತ್ಯ ಎಂಬ ಕಾರಣಕ್ಕೆ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವಮೆಂಟ್‌ನ ಅಂಗ ಸಂಸ್ಥೆಯಾಗಿ 2017ರಲ್ಲಿ ಹೆಚ್.ಡಿ.ಕೋಟೆಯ ಕೆಂಚನಹಳ್ಳಿಯಲ್ಲಿ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಸ್ಥಾಪಿಸಿ ಆ ಮೂಲಕ ಗ್ರಾಮೀಣ ಭಾಗದ ಜನರಿಗೆ ತರಬೇತಿಗಳನ್ನು ನೀಡಲಾಗುತ್ತಿದೆ. ಇದುವರೆಗೂ 21 ವಿವಿಧ ರೀತಿಯಲ್ಲಿ ತರಬೇತಿಗಳನ್ನು ನಮ್ಮ ಸಂಸ್ಥೆ ಮೈಸೂರು ಚಾಮರಾಜನಗರ ಧಾರವಾಡ ಸೇರಿದಂತೆ ವಿವಿಧೆಡೆಗಳಲ್ಲಿ ನೀಡುತ್ತಿದೆ. ಸುಮಾರು 15 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ತರಬೇತಿಗಳನ್ನು ಪಡೆದಿದ್ದು ಶೇ. 85ರಷ್ಟು ಜನ ಆರ್ಥಿಕ ಸ್ವಾವಲಂಬನೆ ಕಂಡಿದ್ದಾರೆ ಎಂದು ತಿಳಿಸಿದರು.

ತಿ.ನರಸೀಪುರದಲ್ಲಿ ಈಗ ತರಬೇತಿಗಳು ಪ್ರಾರಂಭವಾಗುತ್ತಿದ್ದು, ತಾಲೂಕಿನ ಜನತೆ ತರಬೇತಿಗಳನ್ನು ಪಡೆದು ತಮ್ಮ ಆದಾಯದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವಂತೆ ಅವರು ಕರೆ ನೀಡಿದರು.



ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಉದ್ಘಾಟನೆ.

ಕಾರ್ಯಕ್ರಮ ಉದ್ಘಾಟಿಸಿದ ಪತ್ರಕರ್ತ ಎಂ.ಮಹಾದೇವ್ ಮಾತನಾಡಿ, ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿದ್ದು, ಪುರುಷ ಪ್ರಧಾನವಾಗಿದ್ದ ಸಮಾಜ ಈಗ ಸಮ ಸಮಾಜವಾಗುತ್ತಿದೆ. ಎರಡು ಕೈ ಸೇರಿದರೆ ಚಪ್ಪಾಳೆ ಎಂಬಂತೆ ಕುಟುಂಬದಲ್ಲಿ ಪ್ರತಿಯೊಬ್ಬರು ದುಡಿದರೆ ನೆಮ್ಮದಿಯ ಜೀವನ ಕಂಡು ಕೊಳ್ಳಬಹುದು ಎಂದು ತಿಳಿಸಿದರು.

ಮಾಂಡೋವಿ ಮೋಟಾರ್ಸ್ ವ್ಯವಸ್ಥಾಪಕ ಚಂದ್ರಶೇಖರ್ ಮಾತನಾಡಿದರು. ತರಬೇತಿ ಪಡೆದಿರುವ ಅನಿತಾ ರವರು ಶಿಬಿರದ ಪ್ರಯೋಜನದ ಬಗ್ಗೆ ಮಾತನಾಡಿದರು. ಕಾರ್ಯಪಡೆ ಸಂಯೋಜಕ ಅಬ್ದುಲ್ ರಶೀದ್, ಕಾರ್ಯಕ್ರಮ ವ್ಯವಸ್ಥಾಪಕ ಚಿನ್ನ ಮಹಾದೇವ್ ಕೇಂದ್ರದ ಯೋಜನೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ವ್ಯವಸ್ಥಾಪಕ ಕೆ.ರಾಜು, ತರಬೇತಿ ಶಿಕ್ಷಕರಾದ ನೇತ್ರಾವತಿ, ವಿಜಯಲಕ್ಷ್ಮಿ, ಸಂಚಾಲಕ ಮಹದೇವ್, ಅಶ್ವಥ್, ಹಾಗೂ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.

ಶಿಕ್ಷಕರನ್ನು ಅಭಿನಂದಿಸಿದ ಶಾಸಕರು



ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕೆ.ಆರ್.ನಗರ: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ನಿರೀಕ್ಷಿಸಿದ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ, ಆದರೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿರುವುದಕ್ಕೆ ಶಿಕ್ಷಣ ಇಲಾಖೆಯವರಿಗೆ ಅಭಿನಂದನೆ ಸಲ್ಲಿಸುವುದಾಗಿ ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದ ಶಾಲೆಗಳಿಗೆ ಹಾಗೂ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಜಾಲತಾಣದಿಂದ ಬರುವಂತಹ ಒಳ್ಳೆಯ ಸಂದೇಶಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಉಳಿದಂತೆ ಮೊಬೈಲ್ ಬಳಕೆಯಿಂದ ದೂರವಿದ್ದು ಓದಿನ ಕಡೆಗೆ ಹೆಚ್ಚು ಒತ್ತು ನೀಡುವ ಮೂಲಕ ಉತ್ತಮ ಶಿಕ್ಷಣ ಪಡೆದು ದೇಶದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಮನವಿ ಮಾಡಿದರು.

ಬಿಇಒ ಆರ್.ಕೃಷ್ಣಪ್ಪ, ಶಿಕ್ಷಣ ಇಲಾಖೆಯ ಉಪನಿರ್ದೇಶಕ ಉದಯಕುಮಾರ್, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಕೆ.ಕೃಷ್ಣಯ್ಯ, ತಾ.ಪಂ. ಇಓಗಳಾದ ವಿ.ಪಿ.ಕುಲದೀಪ್, ಎನ್.ರವಿಕುಮಾರ್, ಬಿಆರ್‌ಸಿ ವೆಂಕಟೇಶ್ ಮಾತನಾಡಿದರು. ಮೀನಾಕುಮಾರಿಪಾಟೀಲ್, ಲಕ್ಷ್ಮೀಕಾಂತ್, ಮಧುಕುಮಾರ್, ಡಿ.ಕೆ.ಜಗದೀಶ್, ಎಂ.ಬಿ.ಕುಮಾರಸ್ವಾಮಿ, ಇಸಿಒ ದಾಸಪ್ಪ, ಜನಾರ್ಧನ್, ಸುಬ್ಬುರಾಮನ್ ಇದ್ದರು.

ನಂ.ಗೂಡು ಶಿಕ್ಷಕರ ಸಂಘಕ್ಕೆ ರಂಗನಾಥನ್ ಅಧ್ಯಕ್ಷ



ನಂಜನಗೂಡು ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ನಂಜನಗೂಡು: ನಂಜನಗೂಡು ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಎ.ರಂಗನಾಥನ್ ಉಪಾಧ್ಯಕ್ಷರಾಗಿ ಪುಟ್ಟರಾಜು, ಪ್ರಧಾನ ಕಾರ್ಯದರ್ಶಿಯಾಗಿ ಕಲ್ಪನಾ ಅವಿರೋಧವಾಗಿ ಆಯ್ಕೆಯಾದರು.

ಮೇ 1ರಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರ ಆಯ್ಕೆಗಾಗಿ ಚುನಾವಣೆಯನ್ನು ನಡೆಸಲಾಗಿತ್ತು, ರಂಗನಾಥನ್ ತಂಡದವರು 9 ಸ್ಥಾನಗಳಲ್ಲಿ, ಮತ್ತೊಂದು ತಂಡದಲ್ಲಿ ಏಳು ಜನ ನಿರ್ದೇಶಕರು ಆಯ್ಕೆಯಾಗಿದ್ದರು. ನಂತರ ಅಧ್ಯಕ್ಷರ ಸ್ಥಾನಗಳಿಗೆ ಎರಡು ತಂಡಗಳಿಂದ ನಾಮಪತ್ರ ಸಲ್ಲಿಕೆಯಾಗಿತ್ತು. ನಂತರ ಇನ್ನೊಂದು ತಂಡ ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ನಾಮಪತ್ರವನ್ನು ವಾಪಸ್ ಪಡೆದಿದ್ದರಿಂದಾಗಿ ರಂಗನಾಥ್ ಮತ್ತು ತಂಡದ ಎಲ್ಲಾ ಪದಾಧಿಕಾರಿಗಳು ಅವಿರೋಧಆಯ್ಕೆಯಾದರು.

ಈ ಅವಿರೋಧ ಆಯ್ಕೆಯಾದ ಪದಾಧಿಕಾರಿಗಳಿಗೆ ಇಂದು ಚುನಾವಣಾಧಿಕಾರಿ ಶಿವಲಿಂಗಪ್ಪನವರು ಪ್ರಮಾಣ ಪತ್ರ ನೀಡಿ ಶುಭ ಕೋರಿದರು.

ಅಧ್ಯಕ್ಷರಾಗಿ ಎಂ.ಎ.ರಂಗನಾಥನ್ ಉಪಾಧ್ಯಕ್ಷರಾಗಿ ಪುಟ್ಟರಾಜು, ಮಹಿಳಾ ಉಪಾಧ್ಯಕ್ಷರಾಗಿ ಲಲಿತಮ್ಮ ಪ್ರಧಾನ ಕಾರ್ಯದರ್ಶಿಯಾಗಿ ಕಲ್ಪನಾ, ಖಜಾಂಚಿಯಾಗಿ ರವಿ, ಸಹ ಕಾರ್ಯದರ್ಶಿಯಾಗಿ ಡಿ. ಬಸವಣ್ಣ, ಮಹಿಳಾ ಸಹ ಕಾರ್ಯದರ್ಶಿಯಾಗಿ ಪೂರ್ಣಿಮಾ, ಸಂಘಟನಾ ಕಾರ್ಯದರ್ಶಿಯಾಗಿ ಹೆಚ್.ಎಂ.ನಾಗರಾಜು, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಶೋಭಾ ಅವಿರೋಧ ಆಯ್ಕೆಯಾದವರು.

ನೂತನ ಅಧ್ಯಕ್ಷರು ಮಾತನಾಡಿ ಶಿಕ್ಷಕರ ಸಮಸ್ಯೆಗಳಿಗೆ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯಿಂದ ಸ್ಪಂದಿಸುವ ಮೂಲಕ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುವ, ಮೂಲಕ ಸಂಘದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ಗೋಪಾಲ್ ರಾವ್, ರಮೇಶ್, ಅಳಗಂಚಿ ಲಿಂಗರಾಜು, ಸಿದ್ದು, ಬಸವಟ್ಟಿಗೆ ನಾಗರಾಜು, ಕುಮಾರಸ್ವಾಮಿ, ನಾಗರಾಜು, ಸನ್ಮತಿ, ಗಂಗಾಧರ್ ಇದ್ದರು.

ನಾಳೆ ಜಗಜ್ಯೋತಿ ಬಸವೇಶ್ವರರ ಜಯಂತಿ



ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ತಾಲೂಕು ಅಧ್ಯಕ್ಷ ರುದ್ರಪ್ಪ ಮಾತನಾಡಿದರು.

ಹೆಚ್.ಡಿ.ಕೋಟೆ: ಜಗಜ್ಯೋತಿ ಬಸವೇಶ್ವರರ 893ನೇ ಜಯಂತಿಯನ್ನು ಮೇ 25 ರಂದು ಪಟ್ಟಣದಲ್ಲಿ ಆಚರಿಸಲಾಗುವುದು ಎಂದು ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ರುದ್ರಪ್ಪ ತಿಳಿಸಿದರು.

ಪಟ್ಟಣದಲ್ಲಿ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಅಂದು ಪಟ್ಟಣದ ಜೂನಿಯರ್ ಕಾಲೇಜು ಮೈದಾನದಿಂದ ಬೆಳ್ಳಿ ರಥದಲ್ಲಿ ಜಗಜ್ಯೋತಿ ಬಸವೇಶ್ವರ ಭಾವಚಿತ್ರವನ್ನು ಇಟ್ಟು ಮಂಗಳ ವಾದ್ಯ, ವೀರಗಾಸೆ, ಡೊಳ್ಳು ಕುಣಿತ, ನಂದಿ ಧ್ವಜ, ನಗಾರಿ, ತಮಟೆ, ಗಾಡಿ ಗೊಂಬೆ ಸೇರಿದಂತೆ ವಿವಿಧ ಜಾನಪದ ಕಲಾತಂಡದೊಂದಿಗೆ ಮೆರವಣಿಗೆ ಹೊರಟು ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ದೇವನೂರು ಗುರುಮಲ್ಲೇಶ್ವರ ಮಹಂತಸ್ವಾಮಿಗಳು, ಕನಕಪುರ ಶ್ರೀ ದೇಗುಲ ಮಠದ ಚೆನ್ನಬಸವಸ್ವಾಮಿಗಳು ಸೇರಿದಂತೆ ತಾಲೂಕಿನ ವಿವಿಧ ವೀರಶೈವ ಮಠದ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು, ಗುಂಡ್ಲುಪೇಟೆ ಕ್ಷೇತ್ರದ ಗಣೇಶ್ ಪ್ರಸಾದ್, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸುನೀಲ್ ಬೋಸ್ ಅವರು ಉದ್ಘಾಟಿಸಲಿದ್ದು ಮಾಜಿ ಮಂತ್ರಿಗಳು, ಮಾಜಿ ಶಾಸಕರು ಹಾಗೂ ಸಮುದಾಯದ ಮುಖಂಡರು ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಸಮುದಾಯದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದರು.

ಒಂದನೇ ಪುಟದಿಂದ

ಶಾಲಾ–ಕಾಲೇಜಲ್ಲಿ ಕೇಸರಿ ಶಾಲು ಹಾಕಿದ್ರೆ ಕಾನೂನು ಕ್ರಮ

ಯಾವ ರೂಲ್ಸ್ ಇದೆ ಎಂಬುದನ್ನು ನೋಡಿಕೊಂಡು ಬರಲಿ ಎಂದು ಬಿಜೆಪಿ ನಾಯಕರಿಗೆ ಸಲಹೆ ನೀಡಿದರು.

ಹಿಜಾಬ್ ಮೂಲಕ ಋಣ ತೀರಿಸಿದ್ದೇವೆ: ಚುನಾವಣಾ ಪೂರ್ವದಲ್ಲೇ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹಿಜಾಬ್ ಬಗ್ಗೆ ತಿಳಿಸಿದ್ದೇವೆ. ನಮಗೆ ಜನರು ಮತ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮತ ಕೊಟ್ಟ ಜನರ ಋಣವನ್ನು ತೀರಿಸಿದ್ದೇವೆ ಎಂದು ಸ್ಪಷ್ಟನೆ ನೀಡಿದರು.

ಪರೀಕ್ಷೆ ನಡೆಸಲು ಯೋಗ್ಯತೆ ಇಲ್ಲ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಲು ಕೇಂದ್ರದ ಬಿಜೆಪಿ ಸರ್ಕಾರದ ಬೇಜವಾಬ್ದಾರಿ ಕಾರಣ ಎಂದು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡ ಮಧು ಬಂಗಾರಪ್ಪ ಕೇಂದ್ರ ಸರ್ಕಾರಕ್ಕೆ ಒಂದು ಪರೀಕ್ಷೆ ನಡೆಸುವ ಯೋಗ್ಯತೆ ಇಲ್ಲ ಎಂದು ಕಿಡಿಕಾರಿದರು.

ನಮ್ಮ ಸರ್ಕಾರದ ಮೂರು ವರ್ಷದ ಅವಧಿಯಲ್ಲಿ ಒಂದೇ ಒಂದು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ. ಆದರೆ ಬಿಜೆಪಿ ಸರ್ಕಾರದಲ್ಲಿ ಮಹತ್ವದ ನೀಟ್ ಪ್ರಶ್ನೆ ಪತ್ರಿಕೆಯೇ ಸೋರಿಕೆಯಾಗಿದೆ. ಇದು ಈ ಸರ್ಕಾರದ ವೈಫಲ್ಯವನ್ನು ಬಿಂಬಿಸುತ್ತದೆ ಎಂದು ಟೀಕಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಉತ್ತರ ನೀಡಬೇಕಾಗುತ್ತದೆ ಎಂದು ಹೆದರಿದ ಕೇಂದ್ರ ಮಾನವ ಸಂಪನ್ಮೂಲ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಯಾರ ಕೈಗೂ ಸಿಗದೆ ಒಂದು ವಾರ ಓಡಿ ಹೋಗಿದ್ದರು ಎಂದು ಛೇಡಿಸಿದರು.

ಪರೀಕ್ಷೆ ಬಗ್ಗೆ ಧರ್ಮೇಂದ್ರ ಪ್ರದಾನ್‌ಗೆ ಪಾಠ: ಪ್ರಶ್ನೆ ಪತ್ರಿಕೆ ಸೋರಿಕೆಯಾಗದಂತೆ ಹೇಗೆ ಪರೀಕ್ಷೆ ನಡೆಸಬೇಕೆಂದು ನನ್ನ ಬಳಿ ಬಂದರೆ ಧರ್ಮೇಂದ್ರ ಪ್ರಧಾನ್ ಅವರಿಗೆ ಪಾಠ ಮಾಡುತ್ತೇನೆ. ಕೇವಲ ಒಂದೇ ಒಂದು ವಾರದಲ್ಲಿ ಅವರಿಗೆ ತಿಳುವಳಿಕೆ ನೀಡುತ್ತೇನೆ ಎಂದು ಸಲಹೆ ನೀಡಿದರು. ನೀಟ್‌ನಲ್ಲಿ ಶೇ.96ರಷ್ಟು ಮಕ್ಕಳಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದರಿಂದ ಆಕ್ರೋಶಭರಿತರಾದ ವಿದ್ಯಾರ್ಥಿಗಳ ಮಾತನ್ನು ಒಮ್ಮೆಯಾದರೂ ಕೇಳಿದರೆ ಬಿಜೆಪಿಯವರಿಗೆ ಬುದ್ಧಿ ಬರುತ್ತದೆ ಎಂದರು.

ಮೋದಿ ಅವರ ನಕಲಿ ವಿದ್ಯಾಭ್ಯಾಸದ ಸರ್ಟಿಫಿಕೇಟ್ ಬಿಡುಗಡೆ ಮಾಡಲಿ!

ಬಿಜೆಪಿ ನಾಯಕರು ಮೊದಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಕಲಿ ವಿದ್ಯಾಭ್ಯಾಸದ ಸರ್ಟಿಫಿಕೇಟ್ ಬಿಡುಗಡೆ ಮಾಡಲಿ ಎಂದು ಮಧು ಬಂಗಾರಪ್ಪ ಸವಾಲು ಹಾಕಿದರು. ನಾನು ನನ್ನ ಅಸಲಿ ವಿದ್ಯಾರ್ಹತೆ ಅಂಕ ಪಟ್ಟಿ ಬಿಡುಗಡೆ ಮಾಡುತ್ತೇನೆ. ಪಿಯುಸಿ ತನಕ ಮಾತ್ರ ನಾನು ಓದಿದ್ದು, ತರುವಾಯ ವಿದ್ಯಾಭ್ಯಾಸ ಮೊಟಕುಗೊಳಿಸಿ ವ್ಯವಹಾರದ ಬಗ್ಗೆ ಒಲವು ತೋರಿದೆ. ಚಿತ್ರ ನಿರ್ಮಾಣದ ಆಡಿಯೋ ಸಂಸ್ಥೆ ಕಟ್ಟಿದ್ದು, ಹಲವು ಜನರಿಗೆ ಕೆಲಸ ಕೊಟ್ಟಿದ್ದೇನೆ ಎಂದು ಹೇಳಿದರು.

ನನಗೆ ಕನ್ನಡ ಸ್ಪಷ್ಟವಾಗಿ ಮಾತನಾಡಲು ಬರುತ್ತದೆ. ಆದರೆ ಕನ್ನಡ ಬರೆಯುವುದು ಕಷ್ಟ, ಇದನ್ನು ನಾನು ನೇರವಾಗಿಯೇ ಹೇಳುತ್ತಿದ್ದೇನೆ. ನನ್ನ ಕನ್ನಡ ಬರವಣಿಗೆ ಬಗ್ಗೆ ಪ್ರಶ್ನೆ ಮಾಡುವ ಬಿಜೆಪಿ ನಾಯಕರು ನನಗೆ ಪಾಠ ಮಾಡಿದ ಕನ್ನಡ ಮೇಷ್ಟ್ರನ್ನು ಹುಡುಕಿ ತರಲಿ, ಆಗ ಕನ್ನಡ ಮೇಷ್ಟ್ರ ಜೊತೆ ಆ ವಿಚಾರದ ಬಗ್ಗೆ ಚರ್ಚೆ ಮಾಡುತ್ತೇನೆ ಎಂದರು.

ನೇರಾ ನೇರವಾಗಿ ನಾನು ಹೀಗೆ ಮಾತನಾಡುತ್ತೇನೆ. ನನ್ನ ಟೀಕೆ ಮಾಡಿದವರಿಗೆ ಸರಿಯಾಗಿ ತಿರುಗೇಟು ನೀಡುತ್ತೇನೆ. ಕೆಟ್ಟ ಮನಸ್ಥಿತಿಯ ಬಿಜೆಪಿ ಮುಖಂಡರ ಟೀಕೆಗೆ ನಾನು ಹೆದರುವುದಿಲ್ಲ ಎಂದು ಎಚ್ಚರಿಸಿದರು.

ಬಿಜೆಪಿ ಅಜೆಂಡಾ ಸೇರ್ಪಡೆಗೆ ಬಿಡಲ್ಲ: ಯಾವುದೇ ಕಾರಣಕ್ಕೂ ಶಿಕ್ಷಣದಲ್ಲಿ ಬಿಜೆಪಿ ಅಜೆಂಡಾ ಸೇರ್ಪಡೆ ಮಾಡಲು ನಾವು ಬಿಡುವುದಿಲ್ಲ ಎಂದು ತಿಳಿಸಿದರು.

ನಮ್ಮ ಜುಟ್ಟು, ಜನಿವಾರವನ್ನು ಕೇಂದ್ರ ಸರ್ಕಾರದ ಕೈಗೆ ನೀಡಲು ನಾವು ಸಿದ್ಧರಿಲ್ಲ. ಎನ್‌ಇಪಿಗೆ ಪರ್ಯಾಯವಾಗಿ ನಮ್ಮದೆ ಆದ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಈ ವರ್ಷ ಜಾರಿ ಆಗುವುದಿಲ್ಲ. ಆದರೆ ಇದರ ಸಿದ್ಧತೆ ಸಂಬಂಧ ಸುದೀರ್ಘ ಚರ್ಚೆಗಳು ನಡೆಯುತ್ತಿವೆ. ಈ ಬಗ್ಗೆ ಮುಂದಿನ ದಿನದಲ್ಲಿ ಸ್ಪಷ್ಟನೆ ನೀಡುತ್ತೇನೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ದೇವನೂರು ಮಹಾದೇವ ಅವರೊಡನೆ ಎರಡು ಗಂಟೆ ಚರ್ಚೆ

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಹಿರಿಯ ಸಾಹಿತಿ ದೇವನೂರು ಮಹಾದೇವ ಅವರೊಡನೆ ಇಂದು ಶಿಕ್ಷಣ ಇಲಾಖೆಯಲ್ಲಿ ಸುಧಾರಣೆ ತರುವ ಸಂಬಂಧ ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ನಡೆಸಿದರು.


ಮೈಸೂರಿನ ಕುವೆಂಪುನಗರದ ದೇವನೂರು ಮಹಾದೇವ ಅವರ ಮನೆಗೆ ಇಂದು ಬೆಳಿಗ್ಗೆ 11 ಗಂಟೆಗೆ ಆಗಮಿಸಿದರು. ಬಾಗಿಲ ಬಳಿ ಬಂದು ಮಧು ಬಂಗಾರಪ್ಪ ಅವರನ್ನು ದೇವನೂರು ಮಹಾದೇವ ಅವರು ಸ್ವಾಗತಿಸಿದರು. ಈ ವೇಳೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಧ್ಯಾಹ್ನ 1 ಗಂಟೆವರೆಗೆ ದೇವನೂರು ಮಹಾದೇವ ಅವರ ಜೊತೆ ಸಮಾಲೋಚನೆ ನಡೆಸಿದ ಮಧು ಬಂಗಾರಪ್ಪ, ಶಿಕ್ಷಣ ಇಲಾಖೆಯಲ್ಲಿ ಸುಧಾರಣೆ ಸಂಬಂಧ ಹಲವು ಸಲಹೆಗಳನ್ನು ಕೇಳಿದರು. ಭೇಟಿ ನಂತರ ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮಧು, ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಬದಲಾವಣೆ ತರಲು ದೇವನೂರು ಮಹಾದೇವ ಅವರ ಜೊತೆ ಚರ್ಚೆ ಮಾಡಿದ್ದೇನೆ. ಗೋವಿನ ಹಾಡನ್ನು ಕಡ್ಡಾಯವಾಗಿ ನಾಟಕದ ರೂಪದಲ್ಲಿ ಪ್ರದರ್ಶಿಸಲು ಚಿಂತನೆ ನಡೆಸಿದ್ದೇವೆ ಎಂದರು.

ಹಲವು ಸುಧಾರಣೆ ತಂದ ಫಲವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶಿಕ್ಷಣ ಇಲಾಖೆ ಹಾಳಾಗಿತ್ತು. ಈಗ ಇಲಾಖೆಯನ್ನು ಸರಿಪಡಿಸುವ ಕೆಲಸ ಮಾಡಿದ್ದೇನೆ. ಸಮಾನತೆ ಹಾಗೂ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಇಲಾಖೆಯ ಮೂಲ ಉದ್ದೇಶ ಎಂದು ಮಧು ಬಂಗಾರಪ್ಪ ಅವರು ಸ್ಪಷ್ಟಪಡಿಸಿದರು.

ಸಿ.ಕೆ.ಎನ್.ರಾಜ ಶ್ರೇಷ್ಠ ಹಾಸ್ಯ ಸಾಹಿತಿ

ಹೆಸರಾಂತ ಸಾಹಿತಿ ಪ್ರಧಾನ ಗುರುದತ್ತ ಅಭಿಮತ



ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಹಾಸ್ಯ ಸಾಹಿತಿ ಪ್ರೊ.ಸಿ.ಕೆ.ಎನ್.ರಾಜ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೈಸೂರು, ಮೇ 23(ವಿವಿಹೆಚ್)– ಕಾನೂನು ತಜ್ಞರೂ ಆದ ಹಾಸ್ಯ ಸಾಹಿತಿ ಪ್ರೊ.ಸಿ.ಕೆ.ಎನ್.ರಾಜ ಅವರ ಹಾಸ್ಯ ಕೃತಿಗಳು ಮತ್ತೊಬ್ಬರನ್ನು ಲೇವಡಿ ಮಾಡುವುದು, ಅವರ ಕೊರತೆಗಳನ್ನು ಎತ್ತಿ ಹಿಡಿಯುವ ಕೆಲಸವನ್ನು ಎಂದಿಗೂ ಮಾಡಿಲ್ಲ ಎಂದು ಹೆಸರಾಂತ ಸಾಹಿತಿ ಪ್ರೊ.ಪ್ರಧಾನ್ ಗುರುದತ್ತ ಅಭಿಪ್ರಾಯಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದ ಬ್ರಹ್ಮ ಸಂಗೀತ ಸಭಾ ಭವನದಲ್ಲಿ ಶನಿವಾರ ಪರಂಪರೆ ವತಿಯಿಂದ ಆಯೋಜಿಸಿದ್ದ ಹಾಸ್ಯ ಸಾಹಿತಿ ಪ್ರೊ.ಸಿ.ಕೆ.ಎನ್.ರಾಜ ನುಡಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರೊ.ಸಿ.ಕೆ.ಎನ್.ರಾಜ ಅವರು ಸುಮಾರು 25ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅದರಲ್ಲಿ ಹಾಸ್ಯ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಒತ್ತು ನೀಡಿ ಬರೆಯುತ್ತಿದ್ದರು. ಅವರೊಬ್ಬ ಶ್ರೇಷ್ಠ ಹಾಸ್ಯ ಸಾಹಿತಿಯಾಗಿದ್ದು, ತಮ್ಮ ನಗೆ ಚಟಾಕಿ ಒಳಗೊಂಡ ಕೃತಿಗಳಲ್ಲಿ ತುಟಿ ಮೇಲೆ ನಗು ಮಿಂಚಬೇಕು. ಬದಲಾಗಿ ಮತ್ತೊಬ್ಬರನ್ನು ನೋಡಿ ಅಬ್ಬರಿಸುವಂತಿರಬಾರದು ಎಂಬುದನ್ನು ಅಡಗಿಸಿದ್ದರು. ರಾಜಾಸೀಟಿನಿಂದ ಎಂಬ ಹಾಸ್ಯಕೃತಿಯಲ್ಲಿ 33 ಪ್ರಸಂಗಗಳಿದ್ದು, ಎಲ್ಲವೂ ಮನಸ್ಸಿಗೆ ಮುದ ನೀಡುವ ಹಾಸ್ಯಮಯ ಸಂಗತಿಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಯಾರ್‍ರಿ ಅರ್ಜೆಂಟ್ ಬೆಂಗಳೂರು ಕೃತಿಯಲ್ಲಿ ಮೈಸೂರಿಂದ ಬೆಂಗಳೂರಿಗೆ ಹೊರಡುವ ವೇಳೆ ನಡೆದ ಪ್ರಸಂಗವನ್ನೇ ಹಾಸ್ಯ ರೂಪದಲ್ಲಿ ಇಳಿಸಿದ್ದು, ಈ ಭಾಗ ಬಹುತೇಕ ಪತ್ರಿಕೆಗಳಲ್ಲಿಯೂ ಮುದ್ರಣವಾಗಿ ಜನಮನಗೆದ್ದಿದ್ದವು ಎಂದು ನೆನೆದರು.

ಕನ್ನಡ ಭಾಷಾ ಪದಬಳಕೆ ಬಗ್ಗೆ ಹೆಚ್ಚಿನ ಒಲವಿತ್ತು. ತಮ್ಮ ಲೇಖನಗಳಲ್ಲಿ ಪರಭಾಷಿಕ ಪ್ರಭಾವದ ಪದಗಳನ್ನೇ ಕಡಿತಗೊಳಿಸಿ ಅಚ್ಚ ಕನ್ನಡದ ಪದಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ಕನ್ನಡದ ಮೇಲಿನ ಅವರ ಪ್ರೀತಿಗೆ ಅವರ ಕೃತಿಗಳೇ ಸಾಕ್ಷಿ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಪ್ರೊ.ಸಿ.ಕೆ.ಎಸ್. ರಾಜ ವಿರಚಿತ 'ಶ್ರೀ ಗುರುಚರಿತ್ರೆ' ಕಾವ್ಯದ ಗಮಕ ಕಾರ್ಯಕ್ರಮವನ್ನು ವಿದುಷಿ ಶುಭ ರಾಘವೇಂದ್ರ (ವಾಚನ) ಹಾಗೂ ಡಾ. ಜ್ಯೋತಿ ಶಂಕರ್ (ವ್ಯಾಖ್ಯಾನ) ನಡೆಸಿಕೊಟ್ಟರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪ್ರೊ ಪಿ.ಈಶ್ವರ್ ಭಟ್, ಡಿ.ವಿ.ಗುರುಪ್ರಸಾದ್, ಡಾ.ಜ್ಯೋತಿ ಶಂಕರ್ ಉಪಸ್ಥಿತರಿದ್ದರು.

ನಾಳೆ ಆಹಾರ ಸುರಕ್ಷತೆ, ನೈರ್ಮಲ್ಯದ ಕುರಿತು ತರಬೇತಿ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ FSSAI ಸಹಯೋಗದೊಂದಿಗೆ ಪ್ರಧಾನ ಮಂತ್ರಿ ಸ್ವ ನಿಧಿ ಬೀದಿ ಬದಿ ಆಹಾರ ವ್ಯಾಪಾರಸ್ಥರಿಗೆ ಆಹಾರ ಸುರಕ್ಷತೆ ಮತ್ತು ನೈರ್ಮಲ್ಯದ ಕುರಿತು ತರಬೇತಿಯನ್ನು ಮೇ 25 ರಂದು ಬೆಳಿಗ್ಗೆ 11 ಗಂಟೆಗೆ ಜಗಮ್ಮೋಹನ ಅರಮನೆಯ ಸಭಾಂಗಣದಲ್ಲಿ ಆಯೋಜಿಸಿದ್ದು, ಸದರಿ ತರಬೇತಿಗೆ ನಗರದ ಬೀದಿ ಬದಿ ಆಹಾರ ವ್ಯಾಪಾರಿಗಳು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯೊಂದಿಗೆ ಭಾಗವಹಿಸಿ ತರಬೇತಿಯ ಸೌಲಭ್ಯ ಪಡೆದುಕೊಳ್ಳುವಂತೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೇತನ ಶೇ.60 ರಷ್ಟು ಹೆಚ್ಚಳ

ಕೈಗೊಳ್ಳುವಲ್ಲಿ ಗೌರವಾನ್ವಿತ ಸುಪ್ರೀಂಕೋರ್ಟ್ ಪೀಠದ ನಿರ್ದೇಶನಗಳನ್ನು ಅನುಸರಿಸ ಲಾಗಿದೆ ಎಂದು ಅವರು ಹೇಳಿದರು. ಸರ್ಕಾರ ಹಿಂದಿನ ನಾಲ್ಕು–ವಲಯ ವರ್ಗೀಕರಣ ವ್ಯವಸ್ಥೆಯನ್ನು ಎಲ್ಲಾ ನಿಗದಿತ ಉದ್ಯೋಗ ಗಳನ್ನು ಒಳಗೊಂಡ ಏಕೀಕೃತ ಅಧಿಸೂಚನೆಯೊಂದಿಗೆ ಬದಲಾಯಿಸಿದೆ ಎಂದು ಸಚಿವರು ಹೇಳಿದರು.

ಇದಲ್ಲದೆ, ಹಿಂದಿನ ನಾಲ್ಕು ವಲಯಗಳಾಗಿ ವರ್ಗೀಕರಣದ ಬದಲಿಗೆ, ಮೊದಲ ಬಾರಿಗೆ ಎಲ್ಲಾ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯ ಅಡಿಯಲ್ಲಿ ತರಲಾಗಿದೆ ಎಂದು ಅವರು ಹೇಳಿದರು.

ಲಾಡ್ ಪ್ರಕಾರ, ಪರಿಷ್ಕೃತ ವೇತನ ರಚನೆಯು ಕರ್ನಾಟಕ ದಾದ್ಯಂತ 81 ನಿಗದಿತ ಉದ್ಯೋಗಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ನೇರವಾಗಿ ಪ್ರಯೋಜನವನ್ನು ನೀಡುತ್ತದೆ. ಕಾರ್ಮಿಕ ಇಲಾಖೆಯ ನಿರ್ಧಾರವನ್ನು ಬೆಂಬಲಿ ಸಿದ್ದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಪುಟ ಸಹೋದ್ಯೋಗಿಗಳು ಮತ್ತು ತಜ್ಞರಿಗೆ ಸಚಿವರು ಧನ್ಯವಾದ ಅರ್ಪಿಸಿದ್ದಾರೆ.

ಎಬೋಲಾಭೀತಿ : ವಿಮಾನ ನಿಲ್ದಾಣಗಳಲ್ಲಿ ತೀವ್ರ ನಿಗಾ

ಬೆಂಗಳೂರು: ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಉಗಾಂಡಾದಲ್ಲಿ ಎಬೋಲಾ ಸಾಂಕ್ರಾಮಿಕ ರೋಗ ತೀವ್ರವಾಗಿ ಹರಡುತ್ತಿ ರುವ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಮೇ 17ರಂದು ಇದನ್ನು ಅಂತರರಾಷ್ಟ್ರೀಯ ಕಳಕಳಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಘೋಷಿಸಿದೆ.



ಇದರ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಮುನ್ನೆಚ್ಚರಿಕೆ ಕ್ರಮಗಳನ್ನು ತೀವ್ರಗೊಳಿಸಿದ್ದು, ಸಾರ್ವಜನಿಕ ಸಲಹಾ ಮಾರ್ಗಸೂಚಿ ಹೊರಡಿಸಿದೆ. ಸದ್ಯಕ್ಕೆ ಭಾರತದಲ್ಲಿ ಯಾವುದೇ ಎಬೋಲಾ ಪ್ರಕರಣಗಳು ವರದಿಯಾಗಿಲ್ಲ ಎಂದು ಸ್ಪಷ್ಟಪಡಿಸಿರುವ ಇಲಾಖೆಯು, ಅಂತಾರಾಷ್ಟ್ರೀಯ ಪ್ರಯಾಣ ಮತ್ತು ವ್ಯಾಪಾರ ವಹಿವಾಟುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯಾದ್ಯಂತ ಕಣ್ಗಾವಲು ಹಾಗೂ ನಿಗಾ ವ್ಯವಸ್ಥೆಯನ್ನು ಬಲಪಡಿಸಲಾಗಿದೆ ಎಂದು ತಿಳಿಸಿದೆ.

ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದಡಿ ಶಂಕಿತ ಪ್ರಕರಣಗಳ ಮೇಲಿನ ನಿಗಾವನ್ನು ಹೆಚ್ಚಿಸಲಾಗಿದೆ. ಪೀಡಿತ ದೇಶಗಳಿಂದ ಬರುವ ಪ್ರಯಾಣಿಕರನ್ನು ಗುರುತಿಸಲು ಮತ್ತು ಅವರ ಆರೋಗ್ಯದ ಮೇಲೆ ನಿಗಾ ಇಡಲು ವಿಮಾನ ನಿಲ್ದಾಣಗಳು ಹಾಗೂ ಇತರ ಪ್ರವೇಶ ದ್ವಾರಗಳೊಂದಿಗೆ ಸಮನ್ವಯತೆಯನ್ನು ಬಲಪಡಿಸಲಾಗಿದೆ. ರಾಜ್ಯಾದ್ಯಂತ ತ್ವರಿತ ಪ್ರತಿಕ್ರಿಯೆ ತಂಡಗಳನ್ನು ಹೈ ಅಲರ್ಟ್‌ನಲ್ಲಿಡಲಾಗಿದ್ದು, ಆಸ್ಪತ್ರೆಗಳಲ್ಲಿ ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿಸಲಾಗಿದೆ. ಶಂಕಿತ ಪ್ರಕರಣಗಳನ್ನು ನಿಭಾಯಿಸಲು ಆರೋಗ್ಯ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುತ್ತಿದ್ದು, ವೈಯಕ್ತಿಕ ರಕ್ಷಾ ಸಾಧನಗಳು, ಅಗತ್ಯ ಔಷಧಗಳು ಮತ್ತು ಪ್ರಯೋಗಾಲಯದ ವ್ಯವಸ್ಥೆಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ. ಬೆಂಗಳೂರಿನ ರಾಜೀವ್‌ಗಾಂಧಿ ಎದೆರೋಗಗಳ ಸಂಸ್ಥೆಯನ್ನು ಪ್ರತ್ಯೇಕ ವಾರ್ಡ್ ಆಗಿ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯನ್ನು ಕ್ವಾರಂಟೈನ್ ಹಾಗೂ ಚಿಕಿತ್ಸಾ ಕೇಂದ್ರವಾಗಿ ನಿಯೋಜಿಸಲಾಗಿದೆ. ಶಂಕಿತ ರೋಗಿಗಳನ್ನು ನಿಯೋಜಿತ ಆಸ್ಪತ್ರೆಗಳಿಗೆ ಸುರಕ್ಷಿತವಾಗಿ ಸಾಗಿಸಲು ಪ್ರತ್ಯೇಕ ಆಂಬುಲೆನ್ಸ್ ಸೇವೆಗಳನ್ನು ವ್ಯವಸ್ಥೆ ಗೊಳಿಸಲಾಗಿದೆ.

ಜಿರಳೆ ಹೊಸಕಿಹಾಕುವ ಮೂಲಕ ಬಿಜೆಪಿ ಪ್ರತಿಭಟನೆ

ಮಂಡ್ಯ, ಮೇ 23–ನಿರುದ್ಯೋಗ ಮತ್ತು ವ್ಯವಸ್ಥೆಯ ವಿರುದ್ಧದ ವಿಡಂಬನಾತ್ಮಕ ಚಳವಳಿಯಾಗಿ ಆರಂಭವಾದ 'ಕಾಕ್ರೋಚ್ ಜನತಾ ಪಾರ್ಟಿ' ವಿರುದ್ಧ ಬಿಜೆಪಿ ಕಾರ್ಯಕರ್ತರು ಜಿರಳೆಗಳನ್ನು ಹೊಸಕಿಹಾಕುವ ಕಲ್ಪಿತ ಪ್ರದರ್ಶನ ನಡೆಸಿದರು.

ನಗರದ ವಿಕಾಸ ಭವನದ ಆವರಣದಲ್ಲಿ ಸೇರಿದ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕಾಕ್ರೋಚ್ ಜನತಾ ಪಾರ್ಟಿಯ ವಿರುದ್ಧ ಘೋಷನೆಗಗಳನ್ನು ಕೂಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ಶಿವಕುಮಾರ್ ಆರಾಧ್ಯ ಮಾತನಾಡಿ, ದೇಶವನ್ನು ಹಾಳು ಮಾಡುವ ಉದ್ದೇಶದಿಂದ ಯಾವುದೋ ಮೂಲೆಯಲ್ಲಿ ಕುಳಿತು ಜಿರಳೆ ಹೆಸರಿನಲ್ಲಿ ಪಕ್ಷ ಸ್ಥಾಪಿಸಿ ಅಶಾಂತಿ ಉಂಟು ಮಾಡುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಮನೆಯಲ್ಲಿರುವ ಜಿರಳೆಯನ್ನು ಹೊಸಕಿ ಹಾಕುತ್ತೇವೆ. ಅಂತಹ ಜಿರಳೆ ಹೆಸರಿನಲ್ಲಿ ರಾಜಕೀಯ ಮಾಡಲು ಹೊರಟಿರುವುದು ಹಾಸ್ಯಾಸ್ಪದ. ಅದಕ್ಕೆ ಬೆಂಬಲ ನೀಡುವ ಮಾತನ್ನು ಹೇಳಿರುವ ಕಾಂಗ್ರೆಸ್ ನಡೆ ದೇಶದಲ್ಲಿ ತುಂಬಾ ಅಪಾಯಕಾರಿ ಎಂಬುದನ್ನು ಮತ್ತೊಮ್ಮೆ ಜಿರಳೆ ಪಕ್ಷಕ್ಕೆ ಬೆಂಬಲ ನೀಡುವ ಮೂಲಕ ಅಪಹಾಸ್ಯಕ್ಕೀಡಾಗಿದ್ದಾರೆ ಎಂದು ಕಿಡಿಕಾರಿದರು. ಮುಖಂಡರಾದ ಹೊಸಹಳ್ಳಿ ಶಿವು, ಮಾದರಾಜೇ ಅರಸ್, ಪಣಕನಹಳ್ಳಿ ತಾತಪ್ಪ, ಶಿವಣ್ಣ ಭಾಗವಹಿಸಿದ್ದರು.



'ಕಾಕ್ರೋಚ್ ಜನತಾ ಪಾರ್ಟಿ' ವಿರುದ್ಧ ಬಿಜೆಪಿ ಕಾರ್ಯಕರ್ತರು ಜಿರಳೆಗಳನ್ನು ಹೊಸಕಿಹಾಕುವ ಕಲ್ಪಿತ ಪ್ರದರ್ಶನ ನಡೆಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನ 18ನೇ ಪದವೀಧರರ ದಿನಾಚರಣೆ

ಸ್ನಾತಕ, ಸ್ನಾತಕೋತ್ತರ ಪದವಿ ಬಳಿಕ ಎದುರಾಗುವ ಸವಾಲು ಎದುರಿಸಲು ಮಾನಸಿಕವಾಗಿ ಸದೃಢರಾಗಿ

ವಿದ್ಯಾರ್ಥಿಗಳಿಗೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ.ಗಿರೀಶ್ ಸಿ.ಹೊಸೂರ್ ಸಲಹೆ

- ಮಹಿಳಾ ಸಬಲೀಕರಣಕ್ಕೆ ಶಿಕ್ಷಣ ಪ್ರಬಲ ಅಸ್ತ್ರ
- ನಿರೀಕ್ಷಿತ ಮಟ್ಟದಲ್ಲಿ ಮಹಿಳಾ ಪ್ರಾತಿನಿಧ್ಯ ಸಿಗುತ್ತಿಲ್ಲ
- ಗುರಿ ಸಾಧನೆಗೆ ಬದ್ಧತೆ, ದೃಢತೆ, ಸಂಯಮ ಮುಖ್ಯ
- ಕಷ್ಟ ಪಟ್ಟು ಓದಿಸಿದ ತಂದೆ– ತಾಯಿಗೆ ಗೌರವ ನೀಡಿ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ 18 ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಶನಿವಾರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪದಕ ಹಾಗೂ ಬಹುಮಾನ ವಿತರಿಸಲಾಯಿತು.

ಮೈಸೂರು, ಮೇ23(ಬಿಎಲ್ ಯು)– ಬದ್ಧತೆಯಿಂದ ಓದಿ ಪದವಿ, ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳು ಸವಾಲಿನಿಂದ ಕೂಡಿದ್ದು, ಈ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢರಾಗಬೇಕು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಗಿರೀಶ್ ಸಿ.ಹೊಸೂರ್ ಅವರು ಸಲಹೆ ನೀಡಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ 18ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪದಕ ಹಾಗೂ ಬಹುಮಾನ ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಲ್ಲಿ ಓದಿ, ಅಭ್ಯಾಸ ಮಾಡಿಕೊಂಡಿರುವ ವಿಚಾರಗಳನ್ನು ತಂತ್ರಗಾರಿಕೆಯಿಂದ ಬಳಕೆ ಮಾಡಿಕೊಂಡು ಮುಂದುವರೆಯಿರಿ ಎಂದು ಕಿವಿಮಾತು ಹೇಳಿದರು.

ಮಹಿಳೆಯರ ಸಬಲೀಕರಣ ಶಿಕ್ಷಣದಿಂದ ಮಾತ್ರ ಸಾಧ್ಯವಾಗುತ್ತದೆ. ಕೆಲವು ದಶಕಗಳಿಗೆ ಹೋಲಿಸಿದರೆ ಇಂದು ಮಹಿಳೆಯರಿಗೆ ಪ್ರತಿ ಕ್ಷೇತ್ರದಲ್ಲೂ ಪ್ರಾತಿನಿಧ್ಯವಿದೆ. ಈ ಮೂಲಕ ಪ್ರತಿ ಕ್ಷೇತ್ರದಲ್ಲೂ ಮಹಿಳೆಯರು ಯಶಸ್ಸು ಕೂಡ ಗಳಿಸಿದ್ದಾರೆ. ಆದರೆ, ಇದು ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ ಎಂದು ಗಿರೀಶ್ ಸಿ.ಹೊಸೂರ್ ಅಸಮಾಧಾನ ವ್ಯಕ್ತಪಡಿಸಿದರು.

ಬಡತನ, ಅವಕಾಶ ವಂಚಿತರಾಗುವುದು ಸೇರಿದಂತೆ ಹಲವು ಕಾರಣಗಳಿಂದ ಕೆಲವು ಮಹಿಳೆಯರು ಉನ್ನತ ಮಟ್ಟಕ್ಕೇರಲು ಸಾಧ್ಯವಾಗುತ್ತಿಲ್ಲ. ಯಶಸ್ಸು ಸಾಧಿಸಲು ಶಿಕ್ಷಣ ಪ್ರಬಲ ಅಸ್ತ್ರವಾಗಿದ್ದು, ಶಿಕ್ಷಣ ಪಡೆಯುವುದರಿಂದ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಬದುಕಿನಲ್ಲಿ ಸಾಧನೆ ಮಾಡಲು ಗುರಿ ಮುಖ್ಯ. ಇದಕ್ಕಾಗಿ ವಿದ್ಯಾರ್ಥಿಗಳು ಬದ್ಧತೆ, ದೃಢತೆ, ಸಂಯಮ ರೂಢಿಸಿಕೊಳ್ಳಬೇಕು. ಅವರಿವರ ಟೀಕೆ, ಟಿಪ್ಪಣಿಗಳಿಗೆ ಕಿವಿಗೊಡದೆ ನೀವು ಆಯ್ಕೆ ಮಾಡಿಕೊಂಡ ಹಾದಿಯಲ್ಲಿ ಸಾಗಿ ಎಂದು ಸಲಹೆ ನೀಡಿದರು.

ಪದವಿ, ಸ್ನಾತಕೋತ್ತರ ಪದವಿ ಪಡೆದು ಉನ್ನತ ಹುದ್ದೆ ಅಲಂಕರಿಸಿದಾಗ ಸ್ವಾರ್ಥ ಮನೋಭಾವ ಮರೆಯಬಾರದು. ಅವಕಾಶ ವಂಚಿತರಿಗೆ ನಿಮ್ಮ ಕೈಲಾದ ಸಹಾಯ ಮಾಡಬೇಕು. ಈ ಮೂಲಕ ದೀನರನ್ನು ಮೇಲೆತ್ತಬೇಕು. ಆಗ ನೀವು ಕಲಿತ ವಿದ್ಯೆಗೂ ಸಾರ್ಥಕತೆ ಸಿಗುತ್ತದೆ ಎಂದು ಹೇಳಿದರು.

ತಂದೆ– ತಾಯಿ ಮಕ್ಕಳನ್ನು ಕಷ್ಟ ಪಟ್ಟು ಓದಿಸುತ್ತಾರೆ. ಇದನ್ನು ಅರಿತು ಮಕ್ಕಳು ಚೆನ್ನಾಗಿ ಓದಿ ಉನ್ನತ ಮಟ್ಟಕ್ಕೇರುವ ಮೂಲಕ ಪೋಷಕರನ್ನು ಗೌರವದಿಂದ ನೋಡಿಕೊಳ್ಳಬೇಕು ಎಂದು ಗಿರೀಶ್ ಸಿ.ಹೊಸೂರ್ ಅವರು ಕಿವಿಮಾತು ಹೇಳಿದರು.

ಕಾಲೇಜಿನ ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳ 508 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಜೊತೆಗೆ ವಿವಿಧ ವಿಭಾಗಗಳ 21 ವಿದ್ಯಾರ್ಥಿನಿಯರಿಗೆ ಪದಕ ಹಾಗೂ ಬಹುಮಾನ ವಿತರಿಸಲಾಯಿತು.


ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದ ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಪ್ರಿನ್ಸಿಪಾಲ್ ಡಾ.ರೇಚಣ್ಣ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ನೀಟ್ ಬರೆದಿದ್ದ ಕಲಬುರಗಿ ವಿದ್ಯಾರ್ಥಿನಿ ಆತ್ಮಹತ್ಯೆ

ಕಲಬುರಗಿ: ಮೇ 3 ರಂದು ನಡೆದಿದ್ದ ನೀಟ್ ಬರೆದಿದ್ದ ವಿದ್ಯಾರ್ಥಿನಿಯೊಬ್ಬಳು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಲಬುರಗಿಯ ಕೋರ್ಟ್ ವೃತ್ತದ ಬಳಿಯ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ (ಇಂದು) ನಡೆದಿದೆ.




ಭಾಗ್ಯಶ್ರೀ (18) ಮೃತ ವಿದ್ಯಾರ್ಥಿನಿ. ಮನೆಯಲ್ಲೇ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣದ ಕನಸು ಕಂಡಿದ್ದ ಭಾಗ್ಯಶ್ರೀ, ಇತ್ತೀಚೆಗೆ ಮೇ 2ರಂದು ನೀಟ್ ಬರೆದಿದ್ದರು ಎಂದು ತಿಳಿದುಬಂದಿದೆ. ಮೇ 3 ರಂದು ನೀಟ್ ಬರೆದಿದ್ದ ಭಾಗ್ಯಶ್ರೀ ಗೆ ಪರೀಕ್ಷೆಯ ಬಗ್ಗೆ ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇತ್ತು. ಕೆಲವೊಂದು ಆತಂಕವೂ ಇತ್ತು. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಟುಂಬಸ್ಥರ ಹೇಳಿಕೆಯಂತೆ ಭಾಗ್ಯಶ್ರೀ ಸಾಮಾನ್ಯವಾಗಿದ್ದು, ಮನೆಯಲ್ಲಿ ಯಾವುದೇ ಗಂಭೀರ ಸಮಸ್ಯೆಗಳಿರಲಿಲ್ಲ. ಪಿಯುಸಿಯಲ್ಲಿ ಆಕೆ 92% ಅಂಕ ಪಡೆದ್ದಾಳೆ.

ಘಟನೆಯ ಬಳಿಕ ಮೃತಳ ತಂದೆ ರಾಜಶೇಖರ್ ಮಾಧ್ಯಮಗಳ ಮುಂದೆ ಕಣ್ಣೀರು ಹಾಕಿದ್ದಾರೆ. ಅವಳು ಯಾವುದೇ ಕಾರಣ ಹೇಳಿಲ್ಲ. ನಾವು ಯಾರ ಮೇಲೂ ದೂರು ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಈ ಘಟನೆ ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಆನೇಕಲ್‌ನಲ್ಲಿ ದೇಶದ 2ನೇ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ



ಆನೇಕಲ್‌ನಲ್ಲಿ ಹೊಸ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಅಧಿಕೃತವಾಗಿ ಶಂಕುಸ್ಥಾಪನೆ ನೆರವೇರಿಸಲಾಯಿತು.

ಆನೇಕಲ್: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅವರು, ಬೆಂಗಳೂರಿನ ಹೊರವಲಯದಲ್ಲಿರುವ ಆನೇಕಲ್‌ನಲ್ಲಿ ಹೊಸ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಅಧಿಕೃತವಾಗಿ ಶಂಕುಸ್ಥಾಪನೆ ನೆರವೇರಿಸಿದರು. 943 ಕೋಟಿ ರೂಪಾಯಿಯ ಈ ಬೃಹತ್ ಯೋಜನೆಯು 80 ಎಕರೆಗಳಷ್ಟು ವಿಸ್ತೀರ್ಣದಲ್ಲಿದ್ದು, 80,000 ಪ್ರೇಕ್ಷಕರಿಗೆ ಆಸನ ವ್ಯವಸ್ಥೆ ಹೊಂದಲಿದೆ. ಇದು ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಲಿದೆ.

ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುಮಾರು 100 ಎಕರೆ ಜಾಗದಲ್ಲಿ, ಸುಮಾರು 943 ಕೋಟಿ ರೂಪಾಯಿ ಭಾರಿ ವೆಚ್ಚದಲ್ಲಿ ಈ ಅತ್ಯಾಧುನಿಕ ಸ್ಟೇಡಿಯಂ ನಿರ್ಮಾಣವಾಗುತ್ತಿದೆ. ಈ ಕ್ರೀಡಾಂಗಣವನ್ನು ಕೇವಲ 2 ರಿಂದ 3 ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಏಕಕಾಲಕ್ಕೆ 500ಕ್ಕೂ ಹೆಚ್ಚು ವಾಹನಗಳನ್ನು ಪಾರ್ಕ್ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಇದೆ. ಕ್ರೀಡಾ ಪ್ರೇಮಿಗಳಿಗಾಗಿ ವಾಣಿಜ್ಯ ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಹಾರ ಗೃಹಗಳು ಇವೆ. ಆಟಗಾರರು, ಕೋಚ್‌ಗಳು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯ ಹೂಡಲು ಹೈಟೆಕ್ ವಸತಿ ಗೃಹಗಳು. ಗಣ್ಯರ ತುರ್ತು ಆಗಮನಕ್ಕಾಗಿ ಹೆಲಿಪ್ಯಾಡ್, ಸಾರ್ವಜನಿಕ ಪ್ಲಾಜಾ ಮತ್ತು ಸುತ್ತಲೂ ಆಕರ್ಷಕ ಹಸಿರು ವಲಯ ಇರಲಿದೆ.

ಎನ್.ಆರ್.ಠಾಣೆ ವ್ಯಾಪ್ತಿಯ ಮನೆಯಲ್ಲಿ 2.35 ಲಕ್ಷ ರೂ

ಮೈಸೂರು, ಮೇ 23(ಜಿಎ)–ಮಗನ ಬೆಡ್ ರೂಂನ ವಾಡ್ರೋಬ್ ಲಾಕರ್‌ನಲ್ಲಿದ್ದ 2.35 ಲಕ್ಷ ರೂ ಕಳ್ಳತನವಾಗಿದೆ ಎಂದು ವ್ಯಕ್ತಿಯೊಬ್ಬರು ಎನ್.ಆರ್.ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ನರಸಿಂಹರಾಜ ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ 52 ವರ್ಷದ ಕಾರು ಡೀಲಿಂಗ್ ಕೆಲಸ ಮಾಡುವವ ವ್ಯಕ್ತಿಗೆ ಮೇ 19ರಂದು ಚೀಟಿ ವ್ಯವಹಾರದಲ್ಲಿ 2.35 ಲಕ್ಷ ರೂ ಹಣ ಬಂದಿದೆ. ಅದನ್ನು ತನ್ನ ಮಗನ ಬೆಡ್ ರೂಂನಲ್ಲಿರುವ ವಾಡ್ರೋಬ್‌ನಲ್ಲಿ ಇರಿಸಿದ್ದಾರೆ. ನಂತರ ಮೇ 20ರಂದು ತಮ್ಮ ಅಣ್ಣ ಹಜ್ ಯಾತ್ರೆಗೆ ತೆರಳುತ್ತಿರುವುದರಿಂದ ಅವರನ್ನು ಬೆಂಗಳೂರಿನ ಏರ್‌ಪೋರ್ಟ್‌ಗೆ ಡ್ರಾಪ್ ಮಾಡಲು ಸಂಜೆ 5.45ಕ್ಕೆ ತೆರಳಿದ್ದಾರೆ. ಮೇ 21ರಂದು 7.30ಕ್ಕೆ ವಾಪಸ್ಸಾಗಿದ್ದಾರೆ. ಹಣದ ಅವಶ್ಯಕತೆ ಇದ್ದುದ್ದರಿಂದ ವಾಡ್ರೋಬ್ ಪರಿಶೀಲಿಸಿದಾಗ ಅಲ್ಲಿದ್ದ 2.35 ಲಕ್ಷ ರೂ. ಹಣ ಕಳ್ಳತನವಾಗಿರುವುದು ಅರಿವಿಗೆ ಬಂದಿದ್ದು, ತಕ್ಷಣ ಎನ್.ಆರ್.ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ತಡವಾಗಿ ಬರುತ್ತಿದ್ದವನಿಗೆ ಮೆಮೋ

ಮುಖ್ಯೋಪಾಧ್ಯಾಯರನ್ನು ಕೂಡಿ ಹಾಕಿದ ನೌಕರನ ವಿರುದ್ಧ ಎಫ್‌ಐಆರ್

ಮೈಸೂರು, ಮೇ 23(ಜಿಎ)–ಪ್ರತಿನಿತ್ಯ ಶಾಲೆಗೆ ತಡವಾಗಿ ಬರುತ್ತಿದ್ದ ಕಾರಣ ಮೆಮೋ ನೀಡಿದ ಮುಖ್ಯೋಪಾಧ್ಯಾಯರನ್ನು ಡಿ ಗ್ರೂಪ್ ನೌಕರನೋರ್ವ ಆಫೀಸ್ ರೂಂನಲ್ಲಿ ಕೂಡಿ ಹಾಕಿದ ಘಟನೆ ಮೈಸೂರಿನ ಬೃಂದಾವನ ಬಡಾವಣೆ ಯಲ್ಲಿರುವ ಸರ್ಕಾರಿ ಅನುದಾನಿತ ಬೃಂದಾವನ ಪ್ರೌಢಶಾಲೆಯಲ್ಲಿ ಸಂಭವಿಸಿದ್ದು, ವಿವಿಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶಾಲೆಯ ಡಿಗ್ರೂಪ್ ನೌಕರ ಹೃತಿಕ್ ಎಂಬಾತನೇ ಈ ಕೃತ್ಯ ವೆಸಗಿದವನಾಗಿದ್ದು, ಈತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಈತ 2025ರ ಆಗಸ್ಟ್‌ನಿಂದ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈತ ಶಾಲೆಗೆ ಪ್ರತಿದಿನ ತಡವಾಗಿ ಬರುವುದು ಹಾಗೂ ಕೆಲಸವನ್ನು ಸರಿಯಾಗಿ ನಿರ್ವಹಿಸದ ಸಂಬಂಧ ಶಾಲೆಯ ಮುಖ್ಯೋಪಾಧ್ಯಾಯ ಜಗದೀಶ್ ಅನೇಕ ಬಾರಿ ಮೌಖಿಕವಾಗಿ ಎಚ್ಚರಿಕೆ ನೀಡಿದ್ದರೂ ಆತನ ಸ್ವಭಾವದಲ್ಲಿ ಯಾವುದೇ ಬದಲಾವಣೆ ಕಂಡುಬಾರದ ಕಾರಣ ಲಿಖಿತ ರೂಪದಲ್ಲಿ ಮೆಮೋವನ್ನು ನೀಡಿದ್ದಾರೆ.

ಪ್ರಸ್ತುತ ಶಾಲೆಗೆ ಬೇಸಿಗೆ ರಜೆ ಇದ್ದು, ಮೇಲಾಧಿಕಾರಿಗಳ ಆದೇಶದಂತೆ ಜಗದೀಶ್, ಕ್ಲರ್ಕ್ ನಿಖಿತ ಮತ್ತು ಡಿಗ್ರೂಪ್ ನೌಕರ ಹೃತಿಕ್ ಪ್ರತಿದಿನ ಶಾಲೆಗೆ ಹೋಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೇ 20 ರಂದು ಬೆಳಗ್ಗೆ 10 ಗಂಟೆಗೆ ಮುಖ್ಯೋಪಾಧ್ಯಾಯರು ಶಾಲೆಗೆ ಬಂದಾಗ ಹೃತಿಕ್ ಶಾಲೆಗೆ ಬಂದಿರಲಿಲ್ಲ. ನಂತರ ಶಾಲೆಯ ಮೊದಲ ಮಹಡಿಯಲ್ಲಿರುವ ಆಫೀಸ್ ರೂಂ ಒಳಗಿರುವ ಅವರ ಕ್ಯಾಬಿನ್‌ನಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ 11 ಗಂಟೆ ಸುಮಾರಿಗೆ ಹೃತಿಕ್ ಜಗದೀಶ್ ಕ್ಯಾಬಿನ್‌ಗೆ ನುಗ್ಗಿದ್ದಾನೆ. ಆಗ ಜಗದೀಶ್ ಅವನಿಗೆ 'ಏಕೆ ಪ್ರತಿ ದಿನ ತಡವಾಗಿ ಬರುತ್ತೀರಾ, ಹಲವಾರು ಬಾರಿ ಹೇಳಿದರೂ ನೀವು ತಪ್ಪು ತಿದ್ದುಕೊಳ್ಳುವುದಿಲ್ಲ' ಎಂದು ಹೇಳುತ್ತಿದ್ದಂತೆ ಹೃತಿಕ್ ಜಗದೀಶ್‌ಗೆ ಏಕವಚನದಲ್ಲಿ ನಿಂದಿಸಿ ಅಲ್ಲಿಂದ ಹೊರಟು ಹೋದ.

ನಂತರ 2 ಗಂಟೆಗೆ ಹೃತಿಕ್‌ನನ್ನು ಜಗದೀಶ್ ತಮ್ಮ ಕ್ಯಾಬಿನ್‌ಗೆ ಕರೆದು ತಡವಾಗಿ ಬಂದಿರುವುದಕ್ಕೆ ಮೆಮೋ ನೀಡಿದಾಗ ಆತ ಜಗದೀಶ್ ಅವರ ಟೇಬಲ್ ಮೇಲಿದ್ದ ಕ್ಯಾಬಿನ್ ಮತ್ತು ಆಫೀಸ್ ರೂಂ ಕೀಗಳನ್ನು ತೆಗೆದುಕೊಂಡು ಹೊರಗೆ ಹೋಗಿ ಕ್ಯಾಬಿನ್ ಬಾಗಿಲು ಲಾಕ್ ಮಾಡಿಕೊಂಡು, ಆಫೀಸ್ ರೂಂ ಬಾಗಿಲಿನ ಬೀಗವನ್ನು ಹಾಕಿಕೊಂಡು ಜಾಗ ಖಾಲಿ ಮಾಡಿದ

ನಂತರ ಜಗದೀಶ್ ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿದ್ದು, ಪೊಲೀಸರು ತಕ್ಷಣ ಬಂದಿದ್ದಾರೆ. ನಂತರ ಜಗದೀಶ್ ಬಳಿ ಇದ್ದ ಮತ್ತೊಂದು ಕೀಯನ್ನು ಕಿಟಕಿ ಮೂಲಕ ಹೊರಗೆ ಹಾಕಿದ್ದಾರೆ, ಅದರಿಂದ ಪೊಲೀಸರು ಬಾಗಿಲು ತೆಗೆದಿದ್ದಾರೆ. ನಂತರ ಕ್ಲರ್ಕ್ ನಿಖಿತಗೆ ಕರೆ ಮಾಡಿದ ತಕ್ಷಣ ಅವರು ಬಂದು ಅವರ ಬಳಿ ಇದ್ದ ಕ್ಯಾಬಿನ್ ಕೀ ಮೂಲಕ ಕ್ಯಾಬಿನ್ ಬಾಗಿಲು ತೆಗೆದಿದ್ದಾರೆ. ತದನಂತರ ಜಗದೀಶ್ ಈ ಘಟನೆ ಬಗ್ಗೆ ಶಾಲೆಯ ಆಡಳಿತ ಮಂಡಳಿಗೆ ತಿಳಿಸಿ ವಿವಿಪುರಂ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಟ್ರಂಪ್ ಪರವಾಗಿ ಪ್ರಧಾನಿ ಮೋದಿಗೆ ಶ್ವೇತಭವನಕ್ಕೆ ಆಹ್ವಾನ ನೀಡಿದ ರೂಬಿಯೋ

ನವದೆಹಲಿ: ಭವಿಷ್ಯದಲ್ಲಿ ಶ್ವೇತಭವನಕ್ಕೆ ಭೇಟಿ ನೀಡಿ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಅವರು ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಹ್ವಾನ ನೀಡಿದ್ದಾರೆ.



ಆಹ್ವಾನ ನೀಡಿದ್ದರ ಬಗ್ಗೆ ಭಾರತದಲ್ಲಿರುವ ಅಮೆರಿಕ ರಾಯಭಾರಿ ಸಾಮಾಜಿಕ ಜಾಲತಾಣಗಳಲ್ಲಿ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಶ್ವೇತಭವನಕ್ಕೆ ಭೇಟಿ ನೀಡಿ ಎಂದು ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಅವರ ಪರವಾಗಿ ಮಾರ್ಕೊ ರೂಬಿಯೋ ಅವರು ಪ್ರಧಾನಿ ಮೋದಿ ಅವರಿಗೆ ಆಹ್ವಾನ ನೀಡಿದ್ದಾರೆ ಎಂದು ಬರೆದುಕೊಂಡಿದ್ದಾರೆ. ಭಾರತದೊಂದಿಗಿನ ಸಂಬಂಧ ಸುಧಾರಿಸುವ ಸಲುವಾಗಿ ಮಾರ್ಕೊ ರುಬಿಯೋ ಇದೇ ಮೊದಲ ಬಾರಿಗೆ ಭಾರತ ಪ್ರವಾಸ ಕೈಗೊಂಡಿದ್ದಾರೆ. ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಿದ್ದಾರೆ.

ದೆಹಲಿಯಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿಯೂ ರುಬಿಯೋ ಭಾಗಿಯಾಗಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಿದ್ದಾರೆ.

ಶ್ರೇಯಸ್ ಅಯ್ಯರ್ ಬ್ಯಾಟಿಂಗ್ ಅಬ್ಬರಕ್ಕೆ ಲಕ್ನೋ ಧೂಳೀಪಟ





ವಿಕೆಟ್ ಪಡೆದ ಸಂದರ್ಭದಲ್ಲಿ ಪಂಜಾಬ್ ಕಿಂಗ್ಸ್ ತಂಡದ ಆಟಗಾರರ ಸಂಭ್ರಮ. ಮತ್ತೊಂದು ಚಿತ್ರದಲ್ಲಿ ಶ್ರೇಯಸ್ ಅಯ್ಯರ್ ಹಾಗೂ ಪ್ರಭ್‌ಸಿಮ್ರಾನ್ ಸಿಂಗ್

ಲಕ್ನೋ, ಮೇ 23(ವಿವಿಹೆಚ್)– ನಾಯಕ ಶ್ರೇಯಸ್ ಅಯ್ಯರ್ ಅವರ ಅಜೇಯ ಶತಕದಾಟದ ಬಲದಿಂದಾಗಿ ಅತಿಥೇಯ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಪಂಜಾಬ್ ಕಿಂಗ್ಸ್ 7 ವಿಕೆಟ್‌ಗಳಿಂದ ಮಣಿಸುವಲ್ಲಿ ಯಶಸ್ವಿಯಾಯಿತು.

ಈ ಗೆಲುವಿನೊಂದಿಗೆ 15 ಅಂಕ ಪಡೆದು ನಾಲ್ಕನೇ ಸ್ಥಾನಕ್ಕೆ ಜಿಗಿಯುವ ಮೂಲಕ ಪ್ಲೇ–ಆಫ್ ಹಾದಿಯನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡಿದೆ. ಇತ್ತ ಟೂರ್ನಿಯ ಕೊನೆಯ ಪಂದ್ಯವನ್ನು ಸೋಲುವ ಮೂಲಕ ಲಕ್ನೋ 10ನೇ ಸ್ಥಾನ ಪಡೆದು ಟೂರ್ನಿಯಿಂದ ಹೊರ ನಡೆದಿದೆ.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್–2026ರ 68ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋಸೂಪರ್ ಜೈಂಟ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196ರನ್ ಕಲೆಹಾಕಿತು. ಈ ಮೊತ್ತವನ್ನು ಸಾರಾಗವಾಗಿ ಬೆನ್ನತ್ತಿದ ಪಂಜಾಬ್ 18 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 200 ರನ್ ಬಾರಿಸಿ, ಗೆಲುವಿನ ನಗೆ ಬೀರಿತು.

ತವರಿನಂಗಳದಲ್ಲಿ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಲಕ್ನೋ ತಂಡಕ್ಕೆ ಜೋಸ್ ಇಂಗ್ಲಿಸ್ ಏಕಾಂಗಿ ಹೋರಾಟದ ಮೂಲಕ ಸ್ಪರ್ಧಾತ್ಮಕ ಮೊತ್ತ ಗಳಿಸಿತು. ಆರಂಭಿಕರಾಗಿ ಕಣಕ್ಕಿಳಿದು, ಸಮಯೋಚಿತ ಬ್ಯಾಟಿಂಗ್ ಮಾಡಿದ ಇಂಗ್ಲಿಸ್ 44 ಎಸೆತಗಳಲ್ಲಿ 9 ಬೌಂಡರಿ, 2 ಸಿಕ್ಸರ್ ಸಹಿತ 72 ರನ್ ಚಚ್ಚಿದರು. ಇವರಿಗೆ ಸಾಥ್ ನೀಡಿದ ಆಯುಷ್ ಬದೋನಿ ಕೇವಲ 18 ಎಸೆತಗಳಲ್ಲಿ 43ರನ್ ಪೇರಿಸಿದರು.

ಉಳಿದಂತೆ ಅರ್ಶಿನ್ ಕುಲ್ಕರ್ಣಿ ಗೋಲ್ಡನ್ ಡಕ್, ನಿಕೊಲಸ್ ಪೂರನ್ 2(7), ನಾಯಕ ರಿಷಬ್ ಪಂತ್ 26(22), ಮುಕುಲ್ ಚೌಧರಿ 1(3) ರನ್ ಕಲೆಹಾಕಿದರು. ಕೊನೆಯಲ್ಲಿ ಅಬ್ಬರಿಸಿದ ಅಬ್ದುಲ್ ಸಮದ್ ಅಜೇಯ 37(20), ಅರ್ಜುನ್ ತೆಂಡೂಲ್ಕರ್ ಅಜೇಯ 5(5) ರನ್ ಗಳಿಸಿದರು. ಪಂಜಾಬ್ ಪರ ಮಾರ್ಕೋ ಏನ್ಸನ್ ಹಾಗೂ ಚಾಹಲ್ ತಲಾ 2 ವಿಕೆಟ್, ಓಮರ್ಜೈ, ಶಶಾಂಕ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು.

ಲಕ್ನೋ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಪಂಜಾಬ್‌ಗೆ, ಮೊಹಮ್ಮದ್ ಶಮಿ ಆರಂಭಿಕ ಆಘಾತ ನೀಡಿದರು. ಪ್ರಿಯಾನ್ಶ್ ಆರ್ಯ ಅವರನ್ನು ಮೊದಲ ಎಸೆತದಲ್ಲಿಯೇ ಗೋಲ್ಡನ್ ಡಕ್ ಮಾಡಿದರೆ, ಕೂಪರ್ ಕೊನೊಲಿ 18(10) ಅವರನ್ನು ಕ್ಲೀನ್ ಬೌಲ್ಡ್ ಮಾಡುವ ಮೂಲಕ ಲಕ್ನೋಗೆ ಆರಂಭಿಕ ಮುನ್ನಡೆ ತಂದುಕೊಟ್ಟರು.

ಈ ವೇಳೆ ಒಂದಾದ ನಾಯಕ ಶ್ರೇಯಸ್ ಅಯ್ಯರ್ ಹಾಗೂ ಪ್ರಭ್‌ಸಿಮ್ರಾನ್ ಸಿಂಗ್ 140 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಪ್ರಭ್‌ಸಿಮ್ರಾನ್ ಸಿಂಗ್ 39 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 69 ರನ್ ಗಳಿಸಿ ಔಟಾದರೆ, ನಾಯಕನ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ತೋರಿದ ಅಯ್ಯರ್ ಅಜೇಯರಾಗಿ ಉಳಿದು ತಂಡಕ್ಕೆ ಗೆಲುವು ತಂದುಕೊಟ್ಟರು. ಅವರು 51 ಎಸೆತಗಳನ್ನು ಎದುರಿಸಿ, 11 ಬೌಂಡರಿ, 5 ಸಿಕ್ಸರ್ ಸಹಿತ ಅಜೇಯ 101 ರನ್ ಚಚ್ಚಿದರು. ಆ ಮೂಲಕ ಐಪಿಎಲ್‌ನಲ್ಲಿ ಚೊಚ್ಚಲ ಶತಕ ಬಾರಿಸಿ, ಸಂಭ್ರಮಿಸಿದರು. ಸೂಯಾಂಶ್ ಶೆಡ್ಗೆ ಅಜೇಯ 9(7)ರನ್ ಬಾರಿಸಿದರು.

ಲಕ್ನೋ ಪರ ಮೊಹಮ್ಮದ್ ಶಮಿ 2 ವಿಕೆಟ್, ಅರ್ಜುನ್ ತೆಂಡೂಲ್ಕರ್ ಒಂದು ವಿಕೆಟ್ ಪಡೆದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿದ್ದಾರೆ; ಹಾಗಾಗಿಯೇ 'ಗ್ಯಾರಂಟಿ' ನೀಡಿದರು

●ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅಭಿಮತ ●ರಾಜ್ಯ ಸರ್ಕಾರ ಸಣ್ಣ ಸಮುದಾಯಗಳ ಹಿತ ಕಾಯುತ್ತಿದೆ


ಮೈಸೂರು ಶರಣ ಮಂಡಳಿಯ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 'ಬಸವ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರು,ಮೇ 23(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿದ್ದು, ಸರ್ವಜನಾಂಗದ ಹಿತ ಕಾಯುವ ನಿಟ್ಟಿನಲ್ಲಿ ಪಂಚ ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹೊಸಮಠದ ಆವರಣದಲ್ಲಿರುವ ನಟರಾಜ ಸಭಾಭವನದಲ್ಲಿ ಮೈಸೂರು ಶರಣ ಮಂಡಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಬಸವ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕ್ರಾಂತಿಕಾರಿ ಬಸವಣ್ಣನವರ ಆಶಯದಂತೆ ರಾಜ್ಯ ಸರ್ಕಾರ ಸರ್ವಜನಾಂಗದವರ ಏಳಿಗೆಗೆ ಶ್ರಮಿಸುತ್ತಿದೆ. ಜಾತಿ, ಧರ್ಮದ ಭೇದವಿಲ್ಲದೆ, ಸರ್ವರಿಗೂ ಉಪಯೋಗವಾಗುವಂತಹ ಯೋಜನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಷ್ಠಾನಗೊಳಿಸಿದ್ದಾರೆ. ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮೀ ಯೋಜನೆ ಜಾರಿಗೊಳಿಸಿ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಿದ್ದಾರೆ. ಇದರಿಂದ ಸಾಮಾಜಿಕ ಕ್ರಾಂತಿಯೇ ಆಗಿದೆ ಎಂದರು.

ಸಣ್ಣ ಸಮುದಾಯಗಳ ಹಿತ ಸಾಧನೆ: ರಾಜ್ಯ ಸರ್ಕಾರ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸಿ, ಸರ್ಕಾರಿ ಕಚೇರಿಗಳಲ್ಲಿ ಭಾವಚಿತ್ರ ಅಳವಡಿಸುವಂತೆ ಆದೇಶಿಸಿದೆ. ಹಿಂದುಳಿದ ವರ್ಗಗಳಾದ ಮಡಿವಾಳ, ವಿಶ್ವಕರ್ಮ, ಭೋವಿ, ಉಪ್ಪಾರ ಸಮಾಜ ಸೇರಿದಂತೆ ಅಸಂಘಟಿತ ಸಮಾಜಗಳ ಅಭಿವೃದ್ಧಿಗೆ ನಿಗಮಗಳ ಸ್ಥಾಪನೆ ಮಾಡಿ, ಆ ಸಮುದಾಯದವರ ಏಳಿಗೆಗೆ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಸಣ್ಣ ಸಮುದಾಯಗಳಿಗೂ ನೆರವಾಗಿದೆ ಎಂದು ಹೇಳಿದರು.

ಬಸವಣ್ಣನವರ ಆದರ್ಶ, ತತ್ವ ಸಂದೇಶವನ್ನು ಎಲ್ಲರೂ ಪಾಲಿಸಿದರೆ ಮಾತ್ರ ದೇಶ ಜಾತ್ಯಾತೀತ ದೇಶವಾಗಲಿದೆ. ಬಸವಣ್ಣ ಅವರ ತತ್ವಗಳನ್ನು ಎಲ್ಲರಿಗೂ ತಲುಪಿಸಲು ಕ್ರಮ ಕೈಗೊಳ್ಳಬೇಕು. ಅನುಭವ ಮಂಟಪದಲ್ಲಿ ಎಲ್ಲರಿಗೂ ಲಿಂಗಧಾರಣೆ ಮಾಡುವ ಮೂಲಕ ಅಂತರ್ಜಾತಿ ವಿವಾಹಕ್ಕೆ ಒತ್ತು ಕೊಟ್ಟರು. ನಾವು ಬಸವಣ್ಣನವರನ್ನು ನೆನೆದರೆ ಸಾಲದು, ಅವರ ತತ್ವಗಳನ್ನು ತಮ್ಮ ಜೀವನದಲ್ಲಿ ಅನುಸರಿಸಬೇಕು. ತುಳಿತಕ್ಕೆ ಒಳಗಾದ ಎಲ್ಲಾ ಸಮುದಾಯದವರನ್ನು ಒಗ್ಗೂಡಿಸಿ ಸಮಾಜದ ಒಳಿತಿಗೆ ಅನುಭವ ಮಂಟಪ ಮಾಡಿದರು. ಮಾದಾರ ಚನ್ನಯ್ಯ, ಹರಳಯ್ಯ ಇನ್ನಿತರರನ್ನು ಕರೆತಂದು ಸ್ಥಾನ ಕಲ್ಪಿಸಿಕೊಟ್ಟವರು ಎಂದು ತಿಳಿಸಿದರು.

ಇದಕ್ಕೂ ಮುನ್ನ ಮೈಸೂರು ಶರಣ ಮಂಡಳಿಯ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಿಸಿಪಿ ಕೆ.ಎನ್.ಸುಂದರ್ ರಾಜ್, ಹಂಪಿ ಕನ್ನಡ ವಿವಿ ಕುಲಪತಿ ಡಿ.ವಿ.ಪರಶಿವಮೂರ್ತಿ, ಡಿಎವಿ ಶಾಲೆಯ ಎನ್. ಸರ್ದಾರ್ ಸಚ್ಚಿದಾನಂದ ಮೂರ್ತಿ, ಎಂಐಟಿ ವಿದ್ಯಾಸಂಸ್ಥೆಯ ಪ್ರೊ.ಮುರುಳಿ, ಸಮಾಜ ಸೇವಕ ಹೆಚ್.ಎನ್.ಪ್ರೇಮ್ ಕುಮಾರ್, ಡಾ.ಸುಧಾ ಮೃತ್ಯುಂಜಯಪ್ಪ ಅವರಿಗೆ 2026ನೇ ಸಾಲಿನ 'ಬಸವ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸೂರ್ಯ ಸಿಂಹಾಸನ ಮಠದ ಡಾ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರ ಹುಂಡಿ ಸಿದ್ದಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮೈಸೂರು ಶರಣ ಮಂಡಳಿಯ ಕಾರ್ಯಾಧ್ಯಕ್ಷ ಎ.ಸಿ. ಜಗದೀಶ್, ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್, ಡೈರಿ ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.


ಮೈಸೂರು ಜಿಲ್ಲಾ
ಪಟಾಕಿ ಮಾರಾಟಗಾರರ ಸಂಘದ
ಅಧ್ಯಕ್ಷರಾದ
ಶ್ರೀ ಮರವೇ ಗೌಡ
ಅವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
FIRE WORKS
FIRE WORKS
ಮಾಲೀಕರು
ನಂಜುಂಡಪ್ಪ ಎಂಟರ್‌ಪ್ರೈಸಸ್
ಮೊ.9663090082
VISMAYA ADVERTISERS
8050302424
ಶುಭಕೋರುವವರು: ಆನಂದ್, ವೇಣು, ಪ್ರಕಾಶ್ ಹಾಗೂ ಸ್ನೇಹಿತರು
ಮತ್ತು ಕನ್ನೇಗೌಡ ಟೈಗರ್ಸ್